SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 4 Pages:56
November - 2023, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ನವೆಂಬರ್ 2023

ಬೆಲೆ ರೂ. 20/-




ಶ್ರೀ ಪದ್ಮಾವತಿ ಅಮ್ಮನವರ
ಗಜವಾಹನ 14-11-2023

ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು
10-11-2023 ರಿಂದ 18-11-2023 ರ ವರೆಗೆ



ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯವರ
ಪುಷ್ಪಯಾಗ ಮಹೋತ್ಸವ
19-11-2023





ಪ್ರಾತಃಸ್ಮರಾಮಿ ರಮಯಾ ಸಹ ವೇಂಕಟೇಶಂ।
ಮಂದಸ್ಮಿತಂ ಮುಖಸರೋರುಹ ಕಾಂತಿರಮ್ಯಮ್ ॥
ಮಾಣಿಕ್ಯಕಾಂತಿ ವಿಲಸನ್ಮುಕುಟೋರ್ಧ್ವಪುಂಡ್ರಂ।
ಪದ್ಮಾಕ್ಷಲಕ್ಷಮಣಿಕುಂಡಲಮಂಡಿತಾಂಗಮ್ ॥1॥

ಪ್ರಾತರ್ಭಜಾಮಿ ಕರರಮ್ಯ ಸುಶಂಖಚಕ್ರಂ।
ಭಕ್ತಾಭಯಪ್ರದಕಟಿಸ್ಥಲದತ್ತ ಪಾಣಿಮ್ ॥
ಶ್ರೀವತ್ಸಕೌಸ್ತುಭಲಸನ್ಮಣಿಕಾಂಚನಾಢ್ಯಂ।
ಪೀತಾಂಬರಂ ಮದನಕೋಟಿ ಸುಮೋಹನಾಂಗಮ್ ॥2॥

ಪ್ರಾತರ್ನಮಾಮಿ ಪರಮಾತ್ಮಪದಾರವಿಂದಂ।
ಆನಂದಸಾಂದ್ರನಿಲಯಂ ಮಣಿನೂಪುರಾಢ್ಯಮ್॥
ಏತತ್ಸಮಸ್ತಜಗತಾಮಿತಿ ದರ್ಶಯಂತಂ।
ವೈಕುಂಠಮತ್ರ ಭಜತಾಂ ಕರಪಲ್ಲವೇನ ॥3॥

ವ್ಯಾಸರಾಜಯತಿಪ್ರೋಕ್ತಂ ಶ್ಲೋಕತ್ರಯಮಿದಂ ಶುಭಂ।
ಪ್ರಾತಃಕಾಲೇ ಪಠೇದ್ಯಸ್ತು ಪಾಪೇ ಭ್ಯೋಮುಚ್ಯತೇ ನರಃ॥

- ಸಿರಿಕೃಷ್ಣ



# ಭಗವದ್ಗೀತೆ

**ಸಂಜಯ ಉವಾಚ: -**


ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂ ತಪಃ।
ನ ಯೋತ್ಸ್ಯ ಇತಿ ಗೋವಿಂದಂ ಉಕ್ತ್ವಾ ತೂಷ್ಣೀಂ ಬಭೂವ ಹ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -9)

**ಸಂಜಯ : -** ಹಗೆಗಳನ್ನು ಗಡಗುಟ್ಟಿಸುವ ಅರ್ಜುನನು ಕೃಷ್ಣನನ್ನು ಕುರಿತು ಹೀಗೆ ಹೇಳಿ ನಾನು ಕಾದಲಾರೆ ಎಂದು ಸುಮ್ಮನಾದನು.

(ಒಂಬತ್ತನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

ಪರಶ್ವಥ ತಪೋಧನ ಪ್ರಥನ ಸತ್ಕೃತೋಪಾಕೃತ ಕ್ಷಿತೀಶ್ವರ ಪಶುಕ್ಷರತ್ಕ್ಷತಜ ಕುಂಕುಮ ಸ್ಥಾಪಕೈಃ।
ವೃಷಾಚಲ ದಯಾಲುನಾ ನನು ವಿಹರ್ತುಮಾಲಿಪ್ಯಥಾ ನಿಧಾಯ ಹೃದಯೇ ದಯೇ ನಿಹತರಕ್ಷಿತಾನಾಂ ಹಿತಮ್ ॥86॥

ಹಿಂದಿನ ಪದ್ಯದಲ್ಲಿ ತ್ರಿವಿಕ್ರಮಾವತಾರದಲ್ಲಿ ದಯಾದೇವಿಯು ಮಾಡಿದ ಲೋಕೋಪಕಾರವನ್ನು ವರ್ಣಿಸಿದರು. ಈ ಪದ್ಯದಲ್ಲಿ ಪರಶುರಾಮಾವತಾರದಲ್ಲಿ ಮಾಡಿದ ಕಾರ್ಯಗಳು ದಯೆಯಿಂದ ಉಂಟಾದವೇ ಎಂಬುದನ್ನು ನಿರೂಪಿಸುತ್ತಾರೆ. ಇತರ ಅವತಾರಗಳಂತಲ್ಲದೆ ಇಪ್ಪತ್ತೊಂದು ಸಲ ಕ್ಷತ್ರಿಯರನ್ನು ಸಂಹರಿಸಿ ರಕ್ತಮಡುಗಳನ್ನು ನಿರ್ಮಿಸಿದ ಪರಶುರಾಮನು ಹೇಗೆ ದಯಾಳುವಾದನೆಂಬ ಸಂದೇಹವು ಬರಬಹುದು. ಚೆನ್ನಾಗಿ ಅಲೋಚಿಸಿದರೆ ಇದೂ ದಯಾಕಾರ್ಯವೇ ಎಂಬುದು ತಿಳಿಯುವುದು. ಲೋಕ ಕ್ಷೇಮಕ್ಕಾಗಿ ಮಾಡಲ್ಪಡುವ ಯಾಗಗಳಲ್ಲಿ ಪಶುಗಳನ್ನು ಸಂಹರಿಸುವರು. ಹಾಗೆ ಸಂಹರಿಸಲ್ಪಟ್ಟ ಪಶುಗಳಿಗೆ ಉತ್ತಮವಾದ ಪುಣ್ಯಲೋಕಪ್ರಾಪ್ತಿಯುಂಟೆಂದು ಶಾಸ್ತ್ರಗಳು ಹೇಳುವುವು. ಅದರಂತೆಯೇ ಅಪರಾಧಿಗಳೂ ಕೂಡ ರಾಜನಿಂದ ದಂಡನೆಯನ್ನು ಹೊಂದಿ ಪರಿಶುದ್ಧರಾಗಿ ಉತ್ತಮಗತಿಯನ್ನು ಹೊಂದುವರೆಂಬುದು ಶಾಸ್ತ್ರ ಸಿದ್ಧವಾದುದು. ಅದೇ ರೀತಿಯಲ್ಲಿ ಒಳ್ಳೆಯ ನಡತೆಯನ್ನು ಬಿಟ್ಟಿರುವ ದುಷ್ಟಕ್ಷತ್ರಿಯರನ್ನು ಕೂಡ ಮರಣವೆಂಬ ದಂಡನೆಯಿಂದ ಶುದ್ಧಿ ಮಾಡಿ ಅವರಿಗೂ ಒಳ್ಳೆಯ ಗತಿಯನ್ನುಂಟುಮಾಡಬೇಕೆಂದು ಬಯಸಿದ ದಯಾದೇವಿಯು ಪರಶುರಾಮಾವತಾರದ ಮೂಲಕ ಅದನ್ನು ನೆರವೇರಿಸಿದಳು. ಬೇರೆ ರೀತಿಯಿಂದ ತಿದ್ದಲು ಸಾಧ್ಯವಿಲ್ಲದ ದುಷ್ಟ ಕ್ಷತ್ರಿಯರಿಗೆ ಅವರನ್ನು ಕೊಲ್ಲುವುದೇ ಹಿತವಾಯಿತು. ಗೀತೆಯಲ್ಲಿ ಹೇಳಿರುವ "ವಿನಾ ಶಾಯ ಚ ದುಷ್ಕೃತಾಂ" ಎಂಬುದನ್ನು ಚೆನ್ನಾಗಿ ಆಲೋಚಿಸಿದರೆ ಸಾಧು ಪರಿತ್ರಾಣದಂತೆ ದುಷ್ಟರ ನಾಶವೂ ಕೂಡ ಅವರ ಪರಿತ್ರಾಣದಲ್ಲಿಯೇ ಪರ್ಯವಸಾನ ಹೊಂದುವುದು. ಭಗವಂತನು ಮಾಡುವ ಸರ್ವಜಗತ್ಸಂಹಾರ ರೂಪವಾದ ಪ್ರಳಯವೇ ದಯಾಕಾರ್ಯವಾಗಿರುವಾಗ ಅವನು ಮಾಡುವ ಕೆಲವು ರಾಜರುಗಳ ಸಂಹಾರವು ದಯಾಕಾರ್ಯವೇ ಎನ್ನುವುದರಲ್ಲಿ ಸಂದೇಹವೆಲ್ಲಿಯದು ! ಆದ್ದರಿಂದ ಪರಶುರಾಮನು ಮಾಡಿದ ಯುದ್ಧವು ಒಂದು ಉತ್ತಮವಾದ ಯಾಗ. ಇದರಿಂದ ಲೋಕಕ್ಕೆ ಅತ್ಯಂತ ಕ್ಷೇಮವುಂಟಾಯಿತು. ಆ ಯಾಗದಲ್ಲಿ ದುಷ್ಟ ಕ್ಷತ್ರಿಯರೇ ಉಪಾಕರಣವೆಂಬ ಒಂದು ರೀತಿಯ ಸಂಸ್ಕಾರವನ್ನು ಮಾಡಲ್ಪಟ್ಟ ಪಶುಗಳು ಅಂದರೆ, ವಧೆಗಾಗಿ ಸಿದ್ಧಪಡಿಸಲ್ಪಟ್ಟ ಪಶುಗಳು, ಆ ಪಶುಗಳನ್ನು ಸಂಹರಿಸುವಾಗ ಉಂಟಾದ ರಕ್ತ ಪ್ರವಾಹರೂಪವಾದ ಬೊಟ್ಟುಗಳಿಂದ ದಯಾದೇವಿಯನ್ನು ಅಲಂಕರಿಸಿ ಅವಳೊಡನೆ ಶ್ರೀನಿವಾಸನು ವಿಹರಿಸುವನು. ದುಷ್ಟರಿಗೂ ಹಿತವನ್ನೇ ಬಯಸುವ ಸ್ವಭಾವವುಳ್ಳ ದಯಾದೇವಿಗೆ, ಆ ದುಷ್ಟರಿಗೆ ಈ ರೀತಿಯಾಗಿ ಹಿತವನ್ನುಂಟುಮಾಡಿ ಅವರನ್ನು ರಕ್ಷಿಸುವುದೇ, ಅತ್ಯಂತ ಇಷ್ಟವಾದುದೆಂಬ ಶಾಸ್ತ್ರಾರ್ಥವನ್ನು ಸ್ಪಷ್ಟಪಡಿಸಿರುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಆಶ್ವಯುಜ - ಕಾರ್ತೀಕ ಮಾಸ ಸಂಚಿಕೆ

ಸಂಪುಟ : 03 ನವೆಂಬರ್ - 2023 ಸಂಚಿಕೆ : 04



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ದೀಪಗಳಹಬ್ಬಬೆಳಕಿನಹಬ್ಬ | -ಹನುಮಂತಮ. ದೇಶಕುಲಕರ್ಣಿ | 07 |
| ಮಹಿಮಾನ್ವಿತ ವ್ರತ ಧಾತ್ರಿ ಹವನ | - ಕೃಪೆ | 09 |
| ನವರಾತ್ರಿಯ ಕುಮಾರಿ ಪೂಜೆ, ವಿಶೇಷತೆ | -ಶ್ರೀಮತಿ. ಸುಮನ ಬದರೀನಾಥ್ | 10 |
| ಕನಕದಾಸರು | -ಡಾ॥ ಸುರೇಶ್ ಪಾಟೀಲ | 12 |
| ಶ್ರೀ ವೆಂಕಟಾಚಲ ಮಹಾತ್ಮೆ | - ಶ್ರೀಮತಿ. ಎನ್. ಪಾರ್ವತಿ | 14 |
| ಯೋಗೀಶ್ವರಂ ಯಾಜ್ಞವಲ್ಕ್ಯಂ | -ವೇ. ವಿ. ಶಿವರಾಮ ಜೋಗಳೇಕರ | 16 |
| ಕೊಂಡಜ್ಜಿಯ ವರದರಾಜ ಸ್ವಾಮಿ ದೇವಾಲಯ | - ಕೆಂಗೇರಿ ಚಕ್ರಪಾಣಿ | 18 |
| ತಪತೀ | -ಡಾ॥ ವಾಣಿಜಶ್ರೀ ಬಿ.ಎಂ. | 20 |
| ಪ್ರಹ್ಲಾದ ರಾಜರ ನ್ಯಾಯ ನಿಷ್ಠೂರತೆ | -ಧೀರೇಂದ್ರ ನಾಗರಹಳ್ಳಿ | 21 |
| ಶ್ರೀ ವೆಂಕಟೇಶ್ವರಸ್ವಾಮಿ ಆಲಯ | -ದಿ ॥ ಬಿ.ಎನ್. ಶ್ರೀನಿವಾಸನ್ | 22 |
| ಸಂಪ್ರದಾಯ ಹಾಡುಗಳಲ್ಲಿ ಲಕ್ಷ್ಮೀದೇವಿ | -ಡಾ॥ ಎ. ಕುಮುದ | 25 |
| ಶ್ರೀ ಅಲಮೇಲುಮಂಗಾಪುರದಲ್ಲಿ ಶ್ರೀ ಪದ್ಮಾವತಿ ದೇವಾಲಯ | -ಕೆ.ಪಿ. ರತ್ನಾಕರ ಭಟ್ಟ | 31 |
| ಕರ್ನಾಟಕದ ಭಕ್ತಿ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ | -ಡಾ॥ ಆರ್.ವಾದಿರಾಜು | 34 |
| ವಿಜಯನಗರದ ಅರಸರ ದಾನ | - ಡಾ.ಕೆ. ರಮಾನಂದ | 38 |
| ಪ್ರಧಾನ ಪ್ರಕೃತಿ ಪರಾಶಕ್ತಿ ಶ್ರೀ ಲಕ್ಷ್ಮೀಃ | -ಶ್ರೀಮತಿ. ಸ್ನೇಹಾ ಜೋಗಳೇಕರ | 40 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ರಸಪ್ರಶ್ನೆಗಳು | | 47 |
| ನೀತಿಕಥೆ -ಮಹಾಭಾರತದಿಂದ ಕಲಿಯಬೇಕಾದ ಪ್ರಮುಖ ಜೀವನ ಪಾಠಗಳು | - ಪ್ರಣವ | 48 |
| ಚಿತ್ರಕಥೆ - ಪದ್ಮವ್ಯೂಹ | -ಶ್ರೀನಿವಾಸದೀಕ್ಷಿತರು | 52 |


ಮುಖಚಿತ್ರ - ಗಜವಾಹನದಲ್ಲಿ ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ಪಂಚಮಿತೀರ್ಥ, ತಿರುಚಾನೂರು

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ


| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

ಸಂಪಾದಕೀಯ

# ಅಲುಮೇಲುಮಂಗಮ್ಮನನ್ನು ಲಕ್ಷ್ಮೀ ಮಂತ್ರ ಧ್ಯಾನದೊಂದಿಗೆ ದರ್ಶಿಸೋಣ

ಅಜ್ಞಾನತಿಮಿರಂ ಹಂತು, ಶುದ್ಧಜ್ಞಾನ ಪ್ರಕಾಶಿಕಾ!
ಸರ್ವೈಶ್ವರ್ಯ ಪ್ರದಾಮೇಽಸ್ತು, ತ್ವಕ್ಕಳಾಮಯ ಸಂಸ್ಥಿತಾ ॥
(ಲಕ್ಷ್ಮೀ ಹೃದಯಂ ಅಥರ್ವಣವೇದ)

ಓ ಜಗದೇಕಮಾತೆ! ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸುವ, ಶುದ್ಧವಾದ ಜ್ಞಾನವೆಂಬ ಬೆಳಕು ನೀನೇ ! ಅಂತಹಾ ಅನಂತವಾದ ನಿನ್ನ ತೇಜಸ್ಸಿನಲ್ಲಿನ ಒಂದೇ ಒಂದು ಕಿರಣವನ್ನು ನನ್ನೊಳಗೆ ಪ್ರವೇಶಿಸುವಂತೆ ಮಾಡು, ಎಂದು ನಿನ್ನನ್ನು ಬೇಡುತ್ತಿದ್ದೇನೆ ತಾಯೀ! ಅದರ ಮೂಲಕ ಸರ್ವ ವಿಧವಾದ ಸಮಸ್ತ ಐಶ್ವರ್ಯಗಳನ್ನು ಅನುಗ್ರಹಿಸುವುದರೊಂದಿಗೆ ನನ್ನ ಮೇಲೆ ಸಂಪೂರ್ಣವಾಗಿ ಕೃಪೆ ತೋರಿ ದರ್ಶನವನ್ನು ನೀಡು ಜನನಿ.

ಲಕ್ಷ್ಮೀ ಎಂದರೆ ಲಾಭ ,ಪ್ರಯೋಜನ, ಸಂಪತ್ತು ಅಭಿವೃದ್ಧಿ, ಕ್ಷೇಮ , ಯೋಗ ಎಂದು ಋಗ್ವೇದವು ಸಾರುತ್ತಿದೆ. ವಿಶಿಷ್ಟವಾದ ವಸ್ತುಗಳಲ್ಲಿ ತುಂಬಿರುವ ಅನಂತವಾದ ತೇಜಸ್ಸು, ಓಜಸ್ಸು , ವರ್ಚಸ್ಸು ಇವೆಲ್ಲವು ಶ್ರೀ ಮಹಾಲಕ್ಷ್ಮೀಯ ತತ್ವವೇ ಆಗಿದೆ. ಆಕೆಯ ರೂಪವೇ ಆಗಿದೆ! ಈ ರೀತಿ ಸಮಸ್ತ ಜೀವರಾಶಿಗಳೆಲ್ಲಾ ಶ್ರೀ ಮಹಾಲಕ್ಷ್ಮೀ ದೇವಿಯ ಸ್ವರೂಪವೆಂದು ಲಕ್ಷ್ಮೀ ದೇವಿ ಕೀರ್ತಿಸಲ್ಪಡುತ್ತಿದ್ದಾಳೆ.

ಲಕ್ಷ್ಯ ಎಂದರೆ ಒಂದು ಚಿಹ್ನೆ ಅಥವಾ ಕುರುಹು.ಆಕೆ ಎಲ್ಲಾ ಮಂಗಳಕರವಾದ ಕಾರ್ಯಗಳಿಗೆ ವಸ್ತುಗಳಿಗೆ, ಲಕ್ಷ್ಯವಾಗಿ ವಿರಾಜಿಸುತ್ತಿದ್ದಳಾದ್ದರಿಂದ ಆಕೆಗೆ ಲಕ್ಷ್ಮೀ ಎಂದು ಕರೆಯುತ್ತೇವೆ. ಅವ್ಯಯನಾದ ಶ್ರೀಮನ್ನಾರಾಯಣನ ಅವ್ಯಾಜವಾದ ದಯೆಯ ಗುರುತಾಗಿ ನಿಂತಿದ್ದಾಳೆ. ಅನಂತನ ಅನಂತವಾದ ಕರುಣೆಗೆ ಚಿಹ್ನೆಯಾಗಿ ಬೆಳಗುತ್ತಿದ್ದಾಳೆ. ಸತ್ಯವಾಗಿ , ನಿತ್ಯವಾಗಿ, ಶಾಶ್ವತವಾಗಿ ರಾರಾಜಿಸುತ್ತಾ ಆ ಅಚ್ಯುತನ ಆನಂದಕ್ಕೆ ಕುರುಹಾಗಿ ಪ್ರಕಾಶಿಸುತ್ತಿದ್ದಾಳೆ. ಸಾಕ್ಷತ್ತು ಶ್ರೀಮಹಾವಿಷ್ಣುವಿನ ವಕ್ಷಸ್ಥಳದಲ್ಲಿ "ಶ್ರೀವತ್ಸ" ಎಂಬ ಚಿಹ್ನೆಯಾಗಿ ವಿರಾಜಮಾನಳಾಗಿ ಆ ಸ್ವಾಮಿಯ ಅದ್ಭುತವಾದ ಆಶ್ಚರ್ಯಕರವಾದ, ಅಮೃತತತ್ವವಾದ , ಅನಂತವಾದ, ಅಪ್ರಮೇಯವಾದ, ದಯಾಗುಣಕ್ಕೆ , ಕ್ಷಮಾಗುಣಕ್ಕೆ ಪ್ರತೀಕವಾಗಿ , ಚಿರಸ್ಥಾಯಿಯಾಗಿ, ಅನಪಾಯನಿಯಾಗಿ ನೆಲಸಿದ್ದಾಳೆ. ಆದ್ದರಿಂದಲೇ ಆ ಜಗನ್ಮಾಮಾತೆಯಾದ ಲಕ್ಷ್ಮೀ ದೇವಿಯು ಸರ್ವಲೋಕದಲ್ಲೂ ಕೀರ್ತಿಸಲ್ಪಡುತ್ತಿದ್ದಾಳೆ. ಹಾಗೇ ಭೂಲೋಕದಲ್ಲಿನ ಪ್ರತಿಯೊಂದು ಮನೆಯಲ್ಲಿನ ಗೃಹಸ್ಥರಿಗೆ ಗೃಹಿಣಿಯರಾದ ಪುಣ್ಯಸ್ತ್ರೀ ರೂಪದಲ್ಲಿ, ಯಜಮಾನರಿಗೆ ಸಂಪತ್ತಿನ ರೂಪದಲ್ಲಿ, ಮನೆಯಲ್ಲಿನ ಮಂಗಳಕರವಾದ ಪವಿತ್ರವಾದ ಶುಭಕರವಾದ ಸಮಸ್ತ ವಸ್ತುಗಳಲ್ಲೂ ತೇಜೋರೂಪದಲ್ಲಿ ನೆಲಸಿರುತ್ತಾಳೆಂದು ಪುರಾಣಗಳು ಹೇಳುತ್ತಿವೆ.ಅಂತಹ ಲಕ್ಷ್ಮೀದೇವಿಯ ರೂಪದಲ್ಲಿ ತಿರುಚಾನೂರಿನಲ್ಲಿ ನೆಲೆಸಿರುವ ಅಲುಮೇಲುಮಂಗಮ್ಮನಿಗೆ ಅತ್ಯಂತ ವೈಭವದಿಂದ ಬ್ರಹ್ಮೋತ್ಸವಗಳು ನಡೆಯಲಿವೆ. ಅದರಲ್ಲಿ ವಿವಿಧ ರೀತಿಯ ವಾಹನಗಳಲ್ಲಿ ಅಮ್ಮನವರು ವಿರಾಜಮಾನಳಾಗಿ ಸನ್ನಿಧಿ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಾ ಭಕ್ತರಿಗೆ ದರ್ಶನವನ್ನು ನೀಡುತ್ತಾಳೆ.

ಆ ರೀತಿ ಆ ವಾಹನ ಸೇವೆಗಳನ್ನು ದರ್ಶಿಸಿ ತಮ್ಮ ತಮ್ಮ ಮನೆಗೆ ಭಕ್ತರು ಹಿಂದಿರುಗುತ್ತಾರೆ. ಆ ರೀತಿ ಬಂದಿರುವವರಲ್ಲಿ ಅಕ್ಕಪಕ್ಕದವರು ಚೆನ್ನಾಗಿ ದರ್ಶನವಾಯಿತೇ ಎಂದು ಕೇಳುವುದು ಪ್ರತೀತಿ. ಆ ಮಾತಿಗೆ ಅಮ್ಮನವರ ಮೂಲ ಮೂರ್ತಿಯ ದರ್ಶನ ವಾಹನಸೇವೆಯಲ್ಲಿ ಉತ್ಸವ ಮೂರ್ತಿಯ ದರ್ಶನ ಚೆನ್ನಾಗಿ ದೊರೆಯಿತು, ನಮ್ಮ ಜನ್ಮ ಧನ್ಯವಾಯಿತು ಎಂದು ಹೇಳುವುದೂ ಒಂದು ಪ್ರತೀತಿ. ನಾವು ಅಮ್ಮನವರನ್ನು ದರ್ಶಿಸುವಾಗ ಒಂದೇ ಮನಸ್ಸಿನಿಂದ ಅಮ್ಮನವರನ್ನು ನೋಡುತ್ತಾ ಮೇಲೆ ತಿಳಿಸಿದ ಮಂತ್ರವನ್ನು ಪಠಿಸುತ್ತಾ ದರ್ಶಿಸಬೇಕು. ಆಗಲೇ ನಮಗೆ ದರ್ಶನ ಫಲ ಸಿದ್ಧಿಸುತ್ತದೆ, ಮೋಕ್ಷ ಸಿದ್ಧಿ ಲಭಿಸುತ್ತದೆ. ಈ ರೀತಿಯಲ್ಲದೆ ಏನೋ ಬ್ರಹ್ಮೋತ್ಸವಕ್ಕೆ ಹೋದೆವು ...ನೋಡಿದೆವು,... ಬಂದೆವು...ಎನ್ನುವ ರೀತಿಯಲ್ಲಿ ಅಲ್ಲದೆ ಅಮ್ಮನವರ ಮಂತ್ರವನ್ನು ಪಠಿಸುತ್ತಾ ದರ್ಶಿಸೋಣ. ಅಮ್ಮನವರ ಕೃಪಾಕಟಾಕ್ಷವನ್ನು ಹೊಂದೋಣ.

**ಬನ್ನಿ ದರ್ಶಿಸಿ-------- ಅಮ್ಮನವರ ಅನುಗ್ರಹಕ್ಕೆ ಪಾತ್ರರಾಗೋಣ.**

**ಗೋವಿಂದಾ! ಗೋವಿಂದಾ!
ಗೋವಿಂದಾ!!**

# ದೀಪಗಳ ಹಬ್ಬ ಬೆಳಕಿನ ಹಬ್ಬ

– ಹನುಮಂತ ಮ. ದೇಶಕುಲಕರ್ಣಿ.
9480364915



ದೀಪಾವಳಿ ಎಂಬ ಶಬ್ದವು ದೀಪ + ಆವಳಿ (ಸಾಲು) ಹೀಗೆ ರೂಪುಗೊಂಡಿದೆ. ಇದರ ಅರ್ಥವು ದೀಪಗಳ ಸಾಲು ಎಂದಾಗಿದೆ. ದೀಪಾವಳಿಯಂದು ಎಲ್ಲೆಡೆಗಳಲ್ಲಿ ದೀಪಗಳನ್ನು ಹಚ್ಚುತ್ತಾರೆ.

**ಇತಿಹಾಸ :**

ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಪ್ರಭು ಶ್ರೀರಾಮಚಂದ್ರನು ಮರಳಿ ಅಯೋಧ್ಯೆಗೆ ಬಂದನು. ಆಗ ಪ್ರಜೆಗಳು ದೀಪೋತ್ಸವವನ್ನು ಆಚರಿಸಿದರು. ಅಂದಿನಿಂದ ದೀಪಾವಳಿ ಉತ್ಸವ ಪ್ರಾರಂಭವಾಯಿತು.

**ದೀಪಾವಳಿಯ ಭಾವಾರ್ಥ :**

ಶ್ರೀ ಕೃಷ್ಣನು ಅಸುರೀ ವೃತ್ತಿಯ ನರಕಾಸುರನನ್ನು ವಧಿಸಿ ಜನರಿಗೆ ಭೋಗ ವೃತ್ತಿ ಲಾಲಸೇ ಅನಾಚಾರ ಮತ್ತು ದುಷ್ಟಪ್ರವೃತ್ತಿಗಳಿಂದ ಮುಕ್ತಗೊಳಿಸಿದನು ಮತ್ತು ಪ್ರಭುವಿನ ವಿಚಾರ (ದೈವೀವಿಚಾರ)ಗಳನ್ನು ನೀಡಿ ಸುಖಿಯಾಗಿಸಿದನು, ಅದುವೇ ಈ ದೀಪಾವಳಿ. ನಾವು ವರ್ಷಾನುವರ್ಷಗಳಿಂದ ಕೇವಲ ಒಂದು ರೂಢಿ ಎಂದು ದೀಪಾವಳಿಯನ್ನು ಆಚರಿಸುತ್ತಿದ್ದೇವೆ. ಇಂದು ಅದರ ಗೂಡಾರ್ಥವು ಲೋಪವಾಗಿದೆ. ಈ ಗೂಡಾರ್ಥವನ್ನು ತಿಳಿದುಕೊಂಡು ಅದರಿಂದ ಅಭಿಮಾನವು ಜಾಗೃತವಾದಲ್ಲಿ ಅಜ್ಞಾನರೂಪೀ ಅಂಧಃಕಾರದ ಹಾಗೆಯೇ ಭೋಗವೃತ್ತಿ ಮತ್ತು ಅನಾಚಾರೀ, ಅಸುರಿ ವೃತ್ತಿಯಿರುವ ಜನರ ಪ್ರಾಬಲ್ಯವು ಕಡಿಮೆಯಾಗಿ ಸಜ್ಜನ ಶಕ್ತಿಯ ಮೇಲಿನ ಅವರ ವರ್ಚಸ್ಸು ಕಡಿಮೆಯಾಗುವುದು.

ಲಕ್ಷ್ಮೀ ಪೂಜೆ (ಆಶ್ವಯುಜ ಅಮಾವಾಸ್ಯೆ) ಸಾಮಾನ್ಯವಾಗಿ ಅಮಾವಾಸ್ಯೆಯನ್ನು ಅಶುಭದಿನವೆಂದು ಪರಿಗಣಿಸಲಾಗುತ್ತದೆ ಆದರೆ ಈ ಅಮಾವಾಸ್ಯೆಯು ಅದಕ್ಕೆ ಅಪವಾದವಾಗಿದೆ. ಈ ದಿನವು ಶುಭದಿನವೆಂದು ಮನ್ನಣೆ ಪಡೆದಿದೆ ಆದರೆ ಅದು ಎಲ್ಲ ಕಾರ್ಯಗಳಿಗಲ್ಲ. ಆದುದರಿಂದ ಈ ದಿನವನ್ನು ಶುಭದಿನ ಎನ್ನುವುದಕ್ಕಿಂತ ಆನಂದದ ದಿನ ಎನ್ನುವುದೇ ಯೋಗ್ಯವಾಗಿದೆ.

ಧನಲಕ್ಷ್ಮೀಪೂಜೆ ಅಥವಾ ಲಕ್ಷ್ಮೀಪೂಜೆಯನ್ನು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಈ ದಿನ ಧನಲಕ್ಷ್ಮಿಯನ್ನು ಭಕ್ತಿಯಿಂದ ಪೂಜಿಸಿದರೆ ಸಂಪತ್ತು ಸಮೃದ್ಧಿಯಾಗುವುದು ಎಂಬ ನಂಬಿಕೆ. ಅಮಾವಾಸ್ಯೆಯಂದು ಸೂರ್ಯನು ತುಲಾರಾಶಿಗೆ ಪ್ರವೇಶಿಸುವುದರಿಂದಾಗಿ ಈ ದಿನವೂ ಹೆಚ್ಚು ಮಹತ್ವವನ್ನು ಪಡೆದಿದ್ದು,ಅಂದು ಮನೆಯಲ್ಲಿ ಸೂರ್ಯಾಸ್ತದ ನಂತರ ಲಕ್ಷ್ಮೀ ಪೂಜೆಯನ್ನು ಕೈಗೊಳ್ಳುವುದರ ಮೂಲಕ ಸಂಪತ್ತು ಸಮೃದ್ಧಿಯನ್ನು ಕರುಣಿಸಲು ಪ್ರಾರ್ಥನೆ ನಡೆಸಲಾಗುತ್ತದೆ. ಇದು ಧನ ಅಥವಾ ವ್ಯಾಪಾರಕ್ಕೆ ಸಂಬಂಧವಿರಿಸಿಕೊಂಡಿರುವುದರಿಂದ "ಅಂಗಡಿ ಪೂಜೆ" ಯೆಂದು ಕರೆಯಲ್ಪಡುತ್ತದೆ. ಅಂದು ವ್ಯಾಪಾರಿಗಳು ತಮ್ಮ ಲೆಕ್ಕಾಚಾರದ ಪುಸ್ತಕಗಳನ್ನು ದೇವಿಯ ಮುಂದಿರಿಸಿ ಪ್ರಾರ್ಥಿಸುವುದು ಸಂಪ್ರದಾಯ.





ಲಕ್ಷ್ಮೀಪೂಜೆಯ ಐತಿಹ್ಯದ ಪ್ರಕಾರ ಸಂಪತ್ತು, ಸಮೃದ್ಧಿಯು ಅಧಿದೇವತೆಯಾದ ಧನಲಕ್ಷ್ಮಿಯನ್ನು ಪೂಜಿಸಿ ಸಂತಸಗೊಳಿಸುವುದರಿಂದ ಸಕಲ ಸುಖ ಸಂಪತ್ತುಗಳು ಲಭಿಸುವುದು ಎಂಬುದು ನಂಬಿಕೆ. ಲಕ್ಷ್ಮೀದೇವಿಯು ಶುಚಿತ್ವಕ್ಕೆ ಹೆಚ್ಚು ಪ್ರಾಧಾನ್ಯ ನೀಡುತ್ತಾಳೆ ಮತ್ತು ಹೆಚ್ಚು ಶುಚಿಯಿರುವ ಮನೆಗೆ ಅವಳು ಸಂದರ್ಶನ ನೀಡುತ್ತಾಳೆ ಎಂಬ ಕಾರಣಕ್ಕಾಗಿ ಹೆಂಗೆಳೆಯರು ಅಂದು ಮನೆಯನ್ನು ಹೆಚ್ಚು ಸ್ವಚ್ಛವಾಗಿಯೂ, ಅಲಂಕರಿಸಿ ಲಕ್ಷ್ಮೀದೇವಿಯನ್ನು ತಮ್ಮಲ್ಲಿಗೆ ಆಹ್ವಾನಿಸಲು ಸಜ್ಜಾಗುತ್ತಾರೆ. ಅಂದು ಪೊರಕೆಗೆ ಅರಶಿನ, ಕುಂಕುಮವನ್ನಿರಿಸಿ ಪೂಜಿಸುವ ಸಂಪ್ರದಾಯವು ಕಂಡು ಬರುತ್ತದೆ. ಸಂಜೆಯ ವೇಳೆ ಸುತ್ತಲೂ ದೀಪಗಳನ್ನುರಿಸಿ ದೇವಿಯನ್ನು ಸ್ವಾಗತಿಸಲು ಸಿದ್ಧತೆ ನಡೆಸಲಾಗುತ್ತದೆ.

ಈ ದಿನ ಶ್ರೀವಿಷ್ಣುವು ಲಕ್ಷ್ಮೀಸಹಿತ ಎಲ್ಲ ದೇವತೆಗಳನ್ನು ಬಲಿ ಚಕ್ರವರ್ತಿಯ ಸೆರೆಮನೆಯಿಂದ ಮುಕ್ತಗೊಳಿಸಿದನು. ಅನಂತರ ಆ ಎಲ್ಲ ದೇವತೆಗಳು ಕ್ಷೀರಸಾಗರದಲ್ಲಿ ಹೋಗಿ ಮಲಗಿದರು ಎನ್ನುವ ಕಥೆ ಇದೆ. ಹಬ್ಬ ಆಚರಿಸುವ ಪದ್ಧತಿ ಈ ದಿನ ಪ್ರಾತಃಕಾಲದಲ್ಲಿ ಮಂಗಳಸ್ನಾನ ಮಾಡಿ ದೇವರ ಪೂಜೆ, ಮಧ್ಯಾಹ್ನ ಶ್ರಾವಣಶ್ರಾದ್ಧ ಹಾಗೂ ಬ್ರಾಹ್ಮಣ ಭೋಜನ ಮತ್ತು ಪ್ರದೋಷಕಾಲದಲ್ಲಿ ಎಲೆ-ಬಳ್ಳಿಗಳಿಂದ ಶೃಂಗರಿಸಿದ ಮಂಟಪದಲ್ಲಿ ಲಕ್ಷ್ಮೀ, ಶ್ರೀ ವಿಷ್ಣು ಮುಂತಾದ ದೇವತೆಗಳು ಮತ್ತು ಕುಬೇರನ ಪೂಜೆಯನ್ನು ಮಾಡುತ್ತಾರೆ. ಇವು ಈ ದಿನದ ವಿಧಿಗಳಾಗಿವೆ. ಲಕ್ಷ್ಮೀಯ ಪೂಜೆಯನ್ನು ಮಾಡುವಾಗ ಒಂದು ಚೌರಂಗದ ಮೇಲೆ ಅಕ್ಷತೆಗಳಿಂದ ಅಷ್ಟದಳ ಕಮಲ ಅಥವಾ ಸ್ವಸ್ತಿಕವನ್ನು ಬಿಡಿಸಿ ಅದರ ಮೇಲೆ ಲಕ್ಷ್ಮೀಯ ಮೂರ್ತಿಯನ್ನು ಸ್ಥಾಪಿಸುತ್ತಾರೆ.

ಕೆಲವು ಕಡೆಗಳಲ್ಲಿ ಕಲಶದ ಮೇಲೆ ತಾಮ್ರದ ತಟ್ಟೆಯನ್ನಿಟ್ಟು ಅದರ ಮೇಲೆ ಲಕ್ಷ್ಮೀಯ ಮೂರ್ತಿಯನ್ನು ಇಡುತ್ತಾರೆ. ಕಲಶದ ಮೇಲೆ ಲಕ್ಷ್ಮೀಯ ಸಮೀಪದಲ್ಲಿಯೇ ಕುಬೇರನ ಪ್ರತಿಮೆಯನ್ನು ಇಡುತ್ತಾರೆ. ಅನಂತರ ಲಕ್ಷ್ಮೀ ಮತ್ತು ಇತರ ದೇವತೆಗಳಿಗೆ ಲವಂಗ, ಏಲಕ್ಕಿ ಮತ್ತು ಸಕ್ಕರೆಯನ್ನು ಹಾಕಿ ತಯಾರಿಸಿದ ಹಸುವಿನ ಹಾಲಿನ ಖವೆಯ ನೈವೇದ್ಯವನ್ನು ಅರ್ಪಿಸುತ್ತಾರೆ. ಕೊತ್ತಂಬರಿ, ಬೆಲ್ಲ, ಭತ್ತದ ಅರಳು, ಬತ್ತಾಸು ಇತ್ಯಾದಿ ಪದಾರ್ಥಗಳನ್ನು ಲಕ್ಷ್ಮೀಗೆ ಅರ್ಪಿಸಿ ನಂತರ ಅವುಗಳನ್ನು ಅಪ್ತೇಷ್ಟರಿಗೆ ಹಂಚುತ್ತಾರೆ.

ನಂತರ ಕೈಯಲ್ಲಿನ ದೀವಟಿಗೆಯಿಂದ ಪಿತೃಗಳಿಗೆ ಮಾರ್ಗದರ್ಶನ ಮಾಡುತ್ತಾರೆ. (ಕೈಯಲ್ಲಿನ ದೀವಟಿಗೆಯನ್ನು ದಕ್ಷಿಣ ದಿಕ್ಕಿಗೆ ತೋರಿಸಿ ಪಿತೃಗಳಿಗೆ ಮಾರ್ಗದರ್ಶನ ಮಾಡುತ್ತಾರೆ.) ಬ್ರಾಹ್ಮಣರಿಗೆ ಮತ್ತು ಇತರ ಹಸಿದವರಿಗೆ ಊಟವನ್ನು ಕೊಡುತ್ತಾರೆ, ರಾತ್ರಿ ಜಾಗರಣೆ ಮಾಡುತ್ತಾರೆ. ಆಶ್ವಯುಜ ಅಮಾವಾಸ್ಯೆಯ ರಾತ್ರಿ ಲಕ್ಷ್ಮೀಯು ಎಲ್ಲೆಡೆಗೆ ಸಂಚರಿಸಿ ತನ್ನ ನಿವಾಸಕ್ಕಾಗಿ ಯೋಗ್ಯ ಸ್ಥಾನವನ್ನು ಹುಡುಕುತ್ತಾಳೆ ಎಂದು ಪುರಾಣದಲ್ಲಿ ಹೇಳಲಾಗಿದೆ. ಎಲ್ಲಿ ಸ್ವಚ್ಛತೆ, ಶೋಭೆ ಇರುತ್ತದೆಯೋ ಅಲ್ಲಿ ಅವಳು ಆಕರ್ಷಿತಳಾಗುತ್ತಾಳೆ. ಅಲ್ಲದೆ ಯಾವ ಮನೆಯಲ್ಲಿ ಚಾರಿತ್ರ್ಯವುಳ್ಳ,ಕರ್ತವ್ಯದಕ್ಷ,ಸಂಯಮವುಳ್ಳ,ಧರ್ಮನಿಷ್ಠ ದೇವಭಕ್ತರು ಮತ್ತು ಕ್ಷಮಾಶೀಲ ಪುರುಷರು ಹಾಗೂ ಗುಣವತಿ ಮತ್ತು ಪತಿವ್ರತಾ ಸ್ತ್ರೀಯರು ಇರುತ್ತಾರೆಯೋ ಅಲ್ಲಿ ವಾಸಿಸಲು ಲಕ್ಷ್ಮೀಯು ಇಷ್ಟಪಡುತ್ತಾಳೆ.

ಈ ಪೂಜೆಯಲ್ಲಿ ಕೊತ್ತಂಬರಿ ಮತ್ತು ಭತ್ತದ ಅರಳನ್ನು ಅರ್ಪಿಸುತ್ತಾರೆ. ಇದಕ್ಕೆ ಕಾರಣವೇನೆಂದರೆ ಕೊತ್ತಂಬರಿಯು (ಧನಿಯಾ) ಧನವಾಚಕ ಶಬ್ದವಾಗಿದೆ ಮತ್ತು ಅರಳು ಸಮೃದ್ಧಿಯ ಪ್ರತೀಕವಾಗಿವೆ, ಸ್ವಲ್ಪ ಭತ್ತಗಳನ್ನು ಹುರಿದರೂ ಕೈ ತುಂಬಾ ಅರಳುಗಳಾಗುತ್ತವೆ. ಲಕ್ಷ್ಮೀಯ ಸಮೃದ್ಧಿಯಿರಬೇಕೆಂದು ಸಮೃದ್ಧಿಯ ಪ್ರತೀಕವಾಗಿರುವ ಅರಳನ್ನು ಅರ್ಪಿಸುತ್ತಾರೆ.





# ಮಹಿಮಾನ್ವಿತ ವ್ರತ ಧಾತ್ರಿ ಹವನ

- ಕೃಪೆ

"ನ ಕಾರ್ತೀಕ ಸಮೋ ಮಾಸಃ" ಎನ್ನುತ್ತದೆ. ಶೃತಿ ಸ್ಮೃತಿ. ಕಾರ್ತೀಕವು ಶ್ರೀಮನ್ನಾರಾಯಣನಿಗೆ ಅತ್ಯಂತ ಪ್ರೀತಿಕರವಾದ ಮಾಸ ಕಾರ್ತೀಕ ಮಾಸವು ಧಾತ್ರಿಹವನ ವ್ರತಕ್ಕೆ ಅತ್ಯಂತ ಪ್ರಶಸ್ತವಾದ ಸಮಯವಾಗಿದೆ. ವಿಶೇಷ ವೆಂದರೆ ಈ ಹವನವು ವರ್ಷದ ಮತ್ತಾವ ತಿಂಗಳಲ್ಲೂ ಆಚರಿಸಲ್ಪಡದೆ ಕಾರ್ತೀಕ ಮಾಸದಲ್ಲಿ ಮಾತ್ರ ಆಚರಿಸ ಲ್ಪಡುವ ಹೋಮವಾಗಿದೆ. ಧಾತ್ರಿಹವನವು ಬಹು ಶ್ರೇಷ್ಠವೂ, ಆಚರಣೀಯವೂ ಆದ ವ್ರತವಾಗಿದೆ. ಧಾತ್ರಿ ಹವನದ ಪ್ರಮುಖ ಅಂಗಗಳೆಂದರೆ ಧಾತ್ರಿ ಪೂಜೆ, ಹೋಮ ಮತ್ತು ವನ ಭೋಜನಗಳು. ಕಾರ್ತೀಕ ಮಾಸಕ್ಕೆ ನಿಯಾಮಕವಾದ ಶ್ರೀಹರಿಯ ರೂಪ ದಾಮೋದರ ಮತ್ತು ಲಕ್ಷ್ಮೀ ರೂಪ ರಾಧಾ. ಈ ಸಮಯ ದಲ್ಲಿ ಧಾತ್ರಿ ವೃಕ್ಷದ ಪೂಜೆ ಬಹು ಮಹಿಮೆಯುಳ್ಳದ್ದು, ರಾಧಾ ದಾಮೋದರರನ್ನು ಧಾತ್ರಿ ವೃಕ್ಷದ ನೆರಳಿನಲ್ಲಿ ಪೂಜಿಸಿ,ಅವರ ಪ್ರೀತ್ಯರ್ಥವಾಗಿ ಹೋಮ ಮಾಡಿ ಅವರಿಗೆ ಅರ್ಪಿತವಾದ ನೈವೇದ್ಯವನ್ನು ಭೋಜನ ಮಾಡುವುದೇ ಧಾತ್ರಿ ಹವನ ಎನ್ನಬಹುದು.

ಧಾತ್ರಿ ವೃಕ್ಷವು (ಕನ್ನಡದಲ್ಲಿ ಬೆಟ್ಟದ ನೆಲ್ಲಿಕಾಯಿ ಎಂದು ಕರೆಯುತ್ತಾರೆ) ಬಹು ಮಹಿಮಾನ್ವಿತವಾದುದು. ಧಾತ್ರಿ ವೃಕ್ಷದ ಮೂಲದಲ್ಲಿ ನಾರಾಯಣನೂ ಮೇಲ್ಭಾ ಗದಲ್ಲಿ ಬ್ರಹ್ಮನೂ, ಕೊಂಬೆ ಮತ್ತು ಎಲೆಗಳಲ್ಲಿ ರುದ್ರ ಮತ್ತು ಇತರ ಎಲ್ಲ ದೇವತೆಗಳೂ ಸನ್ನಿಹಿತರಾಗಿರುತ್ತಾರೆ. ಸೂರ್ಯನು ತುಲಾರಾಶಿಯಲ್ಲಿರುವಾಗ ಕಾರ್ತೀಕ ಮಾಸದಲ್ಲಿ ಸಕಲ ತೀರ್ಥಗಳ , ಸರ್ವ ದೇವತೆಗಳ ಸಮಸ್ತ ಯಜ್ಞಯಾಗಾದಿಗಳ ಸಾನ್ನಿಧ್ಯ ಧಾತ್ರಿ ವೃಕ್ಷದಲ್ಲಿರುತ್ತದೆ. ವಿಶೇಷವಾಗಿ ಶ್ರೀಮನ್ನಾರಾಯಣನು ಲಕ್ಷ್ಮೀದೇವಿ ಯೊಡನೆ ಇದರಲ್ಲಿ ಸನ್ನಿಹಿತನಾಗಿರುತ್ತಾನೆ. ಆ ಸಮಯ ದಲ್ಲಿ ಧಾತ್ರಿವೃಕ್ಷಕ್ಕೆ ಸಲ್ಲುವ ಪೂಜೆ ಮತ್ತು ಧಾತ್ರಿ ವೃಕ್ಷದ ಬಳಿ ಧಾತ್ರಿ ದೇವಿಯನ್ನು ಉದ್ದೇಶಿಸಿ ಮಾಡುವ ಹೋಮವೇ ಧಾತ್ರಿಹವನವೆಂದು ಪ್ರಸಿದ್ಧವಾಗಿದೆ.

ಧಾತ್ರಿ ವೃಕ್ಷದ ಮಹಿಮೆ ಪುರಾಣ,ಇತಿಹಾಸ ಗಳಲ್ಲಿ ಬಹುವಾಗಿ ವರ್ಣಿತಗೊಂಡಿದೆ.ಕಾರ್ತೀಕ ಮಾಸ ದಲ್ಲಿ ಧಾತ್ರಿ ವೃಕ್ಷದ ಛಾಯೆಯಲ್ಲಿ ಕಿಂಚಿತ್ ಪುಣ್ಯಕಾರ್ಯ ಮಾಡಿದರೂ ಅದು ಅಕ್ಷಯ ಫಲ ನೀಡುತ್ತದೆ. ಕಾರ್ತೀಕ ಮಾಸದಲ್ಲಿ ಧಾತ್ರಿ ವೃಕ್ಷವನ್ನು ವಿಶೇಷವಾಗಿ ಪೂಜಿಸ ಬೇಕು. ಅದರ ಛಾಯೆಯಲ್ಲಿ ತುಪ್ಪದ ದೀಪಗಳನ್ನು ಹಚ್ಚಬೇಕು. ಅದರ ನೆರಳಿನಲ್ಲಿ ಕುಳಿತು ಭಾಗವತ, ವಿಷ್ಣು ಸಹಸ್ರನಾಮ, ಕಾರ್ತೀಕ ಮಾಸ, ಮಹಾತ್ಮೆಮುಂತಾದ ಗ್ರಂಥಗಳ ಪಠಣ ಪಾರಾಯಣ ಮಾಡಬೇಕು. ಧಾತ್ರಿಯ ಸ್ತೋತ್ರಗಳನ್ನು ಪಠಿಸಬೇಕು. ಧಾತ್ರಿ ವೃಕ್ಷಕ್ಕೆ 108 ಪ್ರದ ಕ್ಷಿಣೆ ನಮಸ್ಕಾರಗಳನ್ನು ಅರ್ಪಿಸಬೇಕು. ಧಾತ್ರಿ ವೃಕ್ಷವು ಲಕ್ಷ್ಮೀ ಸ್ವರೂಪವಾದುದರಿಂದ ಅದಕ್ಕೆ ಪೂಜೆ ಸಲ್ಲಿಸಿದರೆ ಲಕ್ಷ್ಮೀನಾರಾಯಣರಿಬ್ಬರೂ ಸುಪ್ರೀತರಾಗುವರು.

ಧಾತ್ರಿ ವೃಕ್ಷದ ಬಳಿ ನಡೆಸುವ ಹೋಮವೇ ಅದರ ಪೂಜೆಯೇ ಧಾತ್ರಿಹವನ ಹಿಂದಿನ ಕಾಲದಲ್ಲಿ ಗ್ರಾಮದ ಹೊರಗೆ ಇರುವ ಧಾತ್ರಿ ವೃಕ್ಷಗಳು ಬೆಳೆದಿರುತ್ತಿದ್ದ ವನಕ್ಕೆ ಹೋಗಿ ಧಾತ್ರಿ ಹವನ ಮಾಡುತ್ತಿದ್ದರು.ಇದೀಗ ಕಾಯಿಗಳಿಂದ ತುಂಬಿದ ನೆಲ್ಲಿ ಮರದ ಕೊಂಬೆಯನ್ನೇ ಇಟ್ಟುಕೊಂಡು ಸಾಮಾನ್ಯವಾಗಿ ಹೋಮ ಮಾಡುತ್ತಾರೆ. ಧಾತ್ರಿ ವೃಕ್ಷದ ಬಳಿ ಬಾಳೆಯ ಕಂದು,ಮಾವಿನಸೊಪ್ಪು, ಕಬ್ಬಿನ ಜಲ್ಲೆ, ಹೂಮಾಲೆಗಳಿಂದ ಸಿಂಗ ರಿಸಿದ ಮಂಟಪವನ್ನು ನಿರ್ಮಿಸಿ ಅದರಲ್ಲಿ ಮಾಸ ನಿಯಾಮಕರಾದ ರಾಧಾ ದಾಮೋದರ ರನ್ನು ಪ್ರತಿಷ್ಠಾಪಿಸಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಅದರ ಬಳಿ ಹೋಮ ಕುಂಡವನ್ನು ರಚಿಸಿ ಹೋಮ ಮಾಡಬೇಕು. ಲಕ್ಷ್ಮೀದೇವಿಯ ಸ್ವರೂಪರಾದ ಧಾತ್ರಿ, ಶಾಂತಿ, ಕಾಂತಿ ಮೊದಲಾದ 21 ದೇವತೆಗಳು ಧಾತ್ರೀ ಹೋಮಕ್ಕೆ ಪ್ರಧಾನ ದೇವತೆಗಳಾಗಿರುತ್ತಾರೆ. ಧಾತ್ರಿ ಹವನಕ್ಕೆ ಅದರದೇ ಆದ ವಿಧಿ ವಿಧಾನಗಳಿವೆ. ಋತ್ವಿಜರನ್ನು ವರಿಸಿ ಹೋಮ ಮಾಡಿ ಪೂರ್ಣಾಹುತಿ ಹಾಕಬೇಕು. ಬೆಲ್ಲ ಮತ್ತು ತೊವ್ವೆಗಳಿಂದ ಸಹಿತವಾದ ಅಪೂಪಭಕ್ಷ ಎಂಬ ಹವಿಸ್ಸನ್ನು ಹೋಮಿಸಬೇಕು.ವಿದ್ಯುಕ್ತವಾಗಿ ಬಲಿಯನ್ನು ಅರ್ಪಿಸಬೇಕು. ಹಸುವಿನ ಹಾಲಿ ನಿಂದ ಧಾತ್ರಿ ವೃಕ್ಷದ ಬುಡದಲ್ಲಿ ತರ್ಪಣ ನೀಡಬೇಕು ಮತ್ತು ಯಜ್ಞ ಸ್ಥಳದಲ್ಲಿ ಮತ್ತು ಧಾತ್ರಿ ವೃಕ್ಷದ ಅಡಿಯಲ್ಲಿ ಯಥಾಶಕ್ತಿ ತುಪ್ಪದ ದೀಪಗಳನ್ನು ಹಚ್ಚಿಡಬೇಕು. ಯಜ್ಞ ಕುಂಡ ಹಾಗೂ ಧಾತ್ರಿವೃಕ್ಷಕ್ಕೆ ಪ್ರದಕ್ಷಿಣೆ ನಮಸ್ಕಾರಗಳನ್ನು ಅರ್ಪಿಸಿ ಧಾತ್ರಿ ಸ್ತೋತ್ರಗಳನ್ನು ಪಠಿಸಬೇಕು.

ಇಮೇ ದೀಪಾ ಮಯಾದತ್ತಾಃ ಪ್ರದೀಪ್ತಾ ಘೃತಪೂರಿತಾಃ
ಧಾತ್ರಿ ದೇವಿ ನಮಸ್ತು ಭ್ಯಮತ ಶಾಂತಿಂ ಪ್ರಯಚ್ಛಮೇ॥

ಧಾತ್ರಿ ಹವನ ಮಾಡಿ ಮಾಡುವ ಭೋಜನಕ್ಕೆ ವನಭೋಜನ ಎಂದು ಕರೆಯು ತ್ತಾರೆ. ವನ ಭೋಜನಕ್ಕೆ ವಿಶೇಷ ಮಹತ್ವವಿದೆ. ಧಾತ್ರಿಹವನ ಮಾಡಿ ನಾನಾ ವಿಧವಾದ ಭಕ್ಷಭೋಜ್ಯಗಳನ್ನು ವಿಶೇಷವಾಗಿ ನೆಲ್ಲಿಕಾಯಿಂದ ತಯಾರಿಸಿದ ಅಡುಗೆಗಳನ್ನು ಭಗ ವಂತನಿಗೆ ನಿವೇದಿಸಿ,ಬ್ರಾಹ್ಮಣ ಸುವಾಸಿನೀಗೆ ಭೋಜನ ಮಾಡಿಸಿ ತಾನೂ ಊಟ ಮಾಡ ಬೇಕು. ಯಥಾಶಕ್ತಿ ದಾನದಕ್ಷಿಣೆಗಳನ್ನಿತ್ತು. ತೃಪ್ತಿ ಪಡಿಸಬೇಕು. ಕಾರ್ತೀಕ ಮಾಸದ ಶುಕ್ಲ ಪಕ್ಷದ ತ್ರಯೋದಶಿ, ಚತುರ್ದಶಿ ಹುಣ್ಣಿಮೆ ಮತ್ತು ಕೃಷ್ಣ ಪಕ್ಷದ ಪಂಚಮಿಯತನಕ ಧಾತ್ರಿ ಹವನದ ಆಚರಣೆಗೆ ಪ್ರಶಸ್ತವಾದ ಸಮಯವಾಗಿದೆ. ಭಾನುವಾರ, ಮಂಗಳವಾರ, ಶುಕ್ರ ವಾರಗಳು ಮತ್ತು ಸಪ್ತಮಿ ತಿಥಿ ಧಾತ್ರಿಹವನಕ್ಕೆ ನಿಷಿದ್ಧವಾದ ದಿನಗಳಾಗಿವೆ.ಕಾರ್ತೀಕ ಮಾಸ ದಲ್ಲಿ ವಿಶೇಷವಾಗಿ ಧಾತ್ರಿಯ ಸೇವೆಯನ್ನೂ, ಮಾಡಬೇಕು. ನೆಲ್ಲಿಯಕಾಯಿಗಳ ಮೇಲೆ ತುಪ್ಪದ ಬತ್ತಿಗಳನ್ನಿಟ್ಟು ದೇವರ ಮುಂದೆ ದೀಪ ಹೆಚ್ಚುವುದು, ಹಾಗೇ ಅವುಗಳಿಂದ ನೀರಾ ಜನ (ಆರತಿ) ಸೇವೆ ಸಲ್ಲಿಸುವುದು, ನೆಲ್ಲಿಕಾಯಿಗಳನ್ನು ಪೋಣಿಸಿ ಹಾರಗಳನ್ನು ಮಾಡಿ ಹಾಕುವುದು. ಧಾತ್ರಿ ಪತ್ರಗಳಿಂದ ದೇವರನ್ನು ಪೂಜಿಸುವುದು,ಧಾತ್ರಿ ಫಲಗಳನ್ನು ಸತ್ಪಾತ್ರರಿಗೆ ದಾನ ಮಾಡುವುದು ಹಾಗೂ ನೆಲ್ಲಿಕಾಯಿಗಳಿಂದ ವಿಶೇಷವಾದ ಅಡುಗೆಗಳನ್ನು ತಯಾರಿಸಿ ದೇವರಿಗೆ ಅರ್ಪಿಸಿ ಬ್ರಾಹ್ಮಣ ಸುವಾಸಿನೀಭೋಜನ ಮಾಡಿಸಿ ತಾವೂ ಸೇವಿಸುವುದು, ಹೀಗೆ ಧಾತ್ರಿಯ ಪೂಜೆ ನಾನಾ ಬಗೆಯದಾಗಿದೆ. ಉತ್ಥಾನ ದ್ವಾದಶಿಯಿಂದ ಧಾತ್ರಿ ವೃಕ್ಷದ ಪೂಜೆ ಧಾತ್ರಿ ಫಲದ ಸೇವನೆ ಪ್ರಚಲಿತದಲ್ಲಿದೆ. ಧಾತ್ರಿ ಹವನ ಮಾಡಲು ಅಶಕ್ತರಾದವರು ಧಾತ್ರಿ ವೃಕ್ಷಕ್ಕೆ ಯಥಾಶಕ್ತಿ ಪೂಜೆ, ತುಪ್ಪದ ದೀಪ ಹಚ್ಚುವುದು. ಪ್ರದಕ್ಷಿಣೆ ನಮಸ್ಕಾರ, ಧಾತ್ರಿ ಸೋತ್ರ ಪಠಣೆ ಮುಂತಾದುವನ್ನು ಮಾಡಬಹುದು.

ಹೀಗೆ ಧಾತ್ರಿ ಹವನವು ಬಹು ಶ್ರೇಷ್ಠವೂ, ಮಹಿಮಾನ್ವಿತವೂ, ಫಲಪ್ರದವೂ, ಆಚ ರಣೀಯವೂ ಆದ ವ್ರತವಾಗಿದೆ.

# ನವರಾತ್ರಿಯ ಕುಮಾರಿ ಪೂಜೆ, ವಿಶೇಷತೆ

-ಶ್ರೀಮತಿ. ಸುಮನಬದರೀನಾಥ್
94820 94855

ಆಶ್ವೀಜ ಮಾಸದಲ್ಲಿ ಬರುವ ಶರನ್ನವರಾತ್ರಿಯ ದೇವೀ ಪೂಜೆಯ ಪರ್ವಕಾಲವೆಂದೇ ಪ್ರಸಿದ್ಧವಾಗಿದೆ. ಅತ್ಯಂತ ಪ್ರಶಸ್ತವಾದ ಸಮಯವಾಗಿದೆ. ದೇವೀ ದೇಗುಲಗಳಲ್ಲಿ ವಿಶೇಷ ಅಲಂಕಾರಗಳು, ಹೋಮಗಳು, ಕುಂಕುಮಾರ್ಚನೆ, ಸುಮಂಗಲೀ ಪೂಜೆ ಮುಂತಾದವು ಸಂಪನ್ನಗೊಂಡರೆ ಮನೆಮನೆಗಳಲ್ಲೂ ದೇವೀ ಮಹಾತ್ಮೆ,ದುರ್ಗಾ ಸಪ್ತಶತೀ ಮುಂತಾದ ಗ್ರಂಥಗಳ ಪಾರಾಯಣ, ವಿಶೇಷ ಪೂಜಾದಿಗಳು ನಡೆಯುತ್ತವೆ.

ನವರಾತ್ರಿ ಬಂದಿತೆಂದರೆ ಸುಮಂಗಲಿಯರಿಗೆ ಎಲ್ಲಿಲ್ಲದ ಸಂಭ್ರಮ ಸಡಗರ, ಉತ್ಸಾಹ, ಮನೆಯಲ್ಲಿ ದೇವಿಯನ್ನು ಸಾಂಗವಾಗಿ ಅವರವರ ಮನೆಯ ಸಂಪ್ರದಾಯಗಳಂತೆ ಪೂಜಿಸುವುದಲ್ಲದೆ ದೇವಿಯ ದೇಗುಲಗಳಿಗೆ ತೆರಳಿ ಅವಳ ದರ್ಶನ ಮಾಡಿ, ದೇವಿಗೆ ಮಡಿಲು ತುಂಬುವುದು, ಸೀರೆ ಉಡಿಸುವುದು, ಕುಂಕುಮಾರ್ಚನೆ ಮಾಡಿಸುವುದು ಮುಂತಾದ ವಿಶೇಷ ಪೂಜೆಗಳನ್ನು ಸಲ್ಲಿಸಿ ಧನ್ಯರಾಗುತ್ತಾರೆ.



ಇದಲ್ಲದೆ ಮನೆಗೂ ಸುಮಂಗಲಿಯರನ್ನು ಆಹ್ವಾನಿಸಿ ಅವರಿಗೆ ಮಂಗಳದ್ರವ್ಯಗಳು, ತೆಂಗಿನಕಾಯಿ,ಹಣ್ಣುಗಳು, ಸೀರೆ ಕುಬುಸ ಮುಂತಾದ ಬಾಗಿನ ನೀಡಿ ಸತ್ಕರಿಸುತ್ತಾರೆ.ಹೂವೀಳ್ಯ ಮಾಡುವುದು.ಮೊರದ ಬಾಗಿನ ನೀಡುವುದು, ಮಡಿಲು ತುಂಬುವುದು ಸುಮಂಗಲೀ ಪೂಜೆಯ ವಿಶೇಷತೆಗಳು.

ನವರಾತ್ರಿಯ ದೇವೀ ಪೂಜೆಯ ಇನ್ನೊಂದು ವಿಶೇಷತೆಯೆಂದರೆ ಕುಮಾರಿ ಪೂಜೆ ಅಥವಾ ಕನ್ನಿಕಾ ಪೂಜೆ, ಇದೊಂದು ಅತ್ಯಂತ ವಿಶೇಷವೂ ಫಲಪ್ರದವೂ, ದೇವಿಗೆ ಅತ್ಯಂತ ಪ್ರೀತಿಕರವೂ ಆದ ಪೂಜಾ ವಿಧಾನವಾಗಿದೆ. ಆಶ್ವೀಜಮಾಸ ಮಹಾತ್ಮೆ ಗ್ರಂಥದಲ್ಲೂ ಪುರಾಣಗಳಲ್ಲೂ ಕುಮಾರಿ ಪೂಜೆಯ ಮಹತ್ವವನ್ನೂ ಪೂಜಾ ವಿಧಾನವನ್ನೂ, ಅದರಿಂದ ದೊರೆಯುವ ಫಲಗಳನ್ನೂ, ವಿಶೇಷವಾಗಿ ವರ್ಣಿಸಲಾಗಿದೆ.

ಈ ಕುಮಾರಿ ಪೂಜೆಯ ಹಿನ್ನೆಲೆ ಇಂತಿದೆ. ನವರಾತ್ರಿಯಲ್ಲಿ ದುರ್ಗಾದೇವಿಯು ಕನ್ಯೆಯ ರೂಪತಾಳಿ ಕಾಲಾಸುರ ಮತ್ತು ಇತರ ಅಸುರರನ್ನು ಸಂಹರಿಸಿದಳೆಂದು ಹೇಳಲಾಗಿದೆ. ಅಂತೆಯೇ ನವರಾತ್ರಿಯಲ್ಲಿ ದೇವಿಯು ಭೂಲೋಕಕ್ಕೆ ಬಂದು ಕನ್ಯೆಯರಲ್ಲಿ ವಿರಾಜಮಾನಳಾಗುತ್ತಾಳೆಂಬ ನಂಬಿಕೆ ಇದೆ. ಇದು ದೇವಿಯ ನವದುರ್ಗಾ ಸ್ವರೂಪದ ಪೂಜೆಯೂ ಆಗಿದೆ. ಜೊತೆಗೆ ಕನ್ಯೆಯರನ್ನು ಪೂಜಿಸಿ ಬಾಗಿನ ನೀಡುವುದು ಅತ್ಯಂತ ಶುಭಕರವೆಂದು ತಿಳಿಯಲಾಗುತ್ತದೆ.

ಕನ್ನಿಕಾ ಪೂಜೆಗೆ ಗ್ರಂಥಗಳಲ್ಲಿ ಕೆಲವು ನಿಯಮಗಳನ್ನು ಹೇಳಲಾಗಿದೆ. ಇನ್ನೂ ಋತುಮತಿಯರಾಗದ 10 ವರ್ಷದ ಒಳಗಿನ ಕನ್ನಿಕೆಯರನ್ನು ಮನೆಗೆ ಆಹ್ವಾನಿಸಿ ಅವಳಿಗೆ ಮನೆಯ ಅಂಗಳದಲ್ಲೇ ಕಾಲು ತೊಳೆದು ನಂತರ ಮನೆಯೊಳಗೆ ಕರೆದೊಯ್ದು ಆಸನದ ಮೇಲೆ ಕೂಡಿಸುತ್ತಾರೆ, ನಂತರ ಅವಳಿಗೆ ಹಣೆಗೆ ಕುಂಕುಮವಿಟ್ಟು, ಮಂಗಳದ್ರವ್ಯಗಳು,ಹೂ, ಮುಂತಾದವನ್ನು ಇತ್ತು ನಂತರ ಮಕ್ಕಳಿಗೆ ಪ್ರಿಯವಾಗುವ ಸರ, ಬಳೆ, ಕಿವಿಯ ಆಭರಣ, ಜಡೆಯ ಆಭರಣ, ಶೃಂಗಾರ ಸಾಧನಗಳು, ಹಣ್ಣುಗಳು, ತಿಂಡಿ ತಿನಿಸುಗಳು, ಲಂಗ ಕುಬುಸದ ಬಟ್ಟೆ ಮುಂತಾದ ವಸ್ತ್ರ,

ದಕ್ಷಿಣೆಯನ್ನು ಬುಟ್ಟಿ ಅಥವಾ ತಟ್ಟೆಯಲ್ಲಿರಿಸಿ ಬಾಗಿನ ನೀಡುತ್ತಾರೆ. ಆರತಿ ಎತ್ತಿ ನಮಸ್ಕರಿಸುತ್ತಾರೆ. ಕೆಲವೆಡೆ ಭೋಜನ ಮಾಡಿಸುವುದು ಉಂಟು. ಆಶ್ವೀಜಮಾಸ ಮಹಾತ್ಮೆ ಗ್ರಂಥದಲ್ಲಿ ಕುಮಾರೀ ಪೂಜೆಯ ಬಗ್ಗೆ ಹೀಗೆ ಹೇಳಿದೆ.

ಗಂಧ ಪುಷ್ಪ ಫಲಾದೀನಾಂ ಪ್ರೀತಿ ಸ್ತವನ ಪೂರ್ವಕಂ।
ದ್ವಿವರ್ಷ ಕನ್ಯಮಾರಭ್ಯ ದಶವರ್ಷಾವಧಿ ಕ್ರಮಾತ್ ॥

ಶಾಸ್ತ್ರದಲ್ಲಿ ಹತ್ತು ವರ್ಷಗಳ ಕನ್ಯೆಯರೂ ಒಂದೊಂದು ದೇವೀ ಸ್ವರೂಪರೆಂದೇ ಹೇಳಲಾಗಿದೆ. 2 ವರ್ಷದ ಕನ್ಯೆಯನ್ನು ಕುಮಾರಿ,3 ವರ್ಷದ ಹುಡುಗಿಯನ್ನು ತ್ರಿಮೂರ್ತಿನೀ 4 ವರ್ಷದ ಬಾಲೆಯನ್ನು ಕಲ್ಯಾಣಿ, 5 ವರ್ಷದ ಕುಮಾರಿಯನ್ನು ರೋಹಿಣಿ, 6 ವರ್ಷದ ಕನ್ಯೆಯನ್ನು ಕಾಳಿಕಾ,7 ವರ್ಷದ ಹುಡುಗಿ ಚಂಡಿಕಾ,8 ವರ್ಷದ ಬಾಲೆ ಶಾಂಭವಿ, 9 ವರ್ಷದ ಕನ್ಯೆ ದುರ್ಗಾ, ಮತ್ತು 10 ವರ್ಷದ ಕುಮಾರಿಯನ್ನು ಸುಭದ್ರಾ ಸ್ವರೂಪರೆಂದು ಉಲ್ಲೇಖಿಸಲಾಗಿದೆ. ಹೀಗೆ ಸ್ವರೂಪಗಳನ್ನು ತಿಳಿದು ಕನ್ಯೆಯರನ್ನು ಪೂಜಿಸಿ ಜಗನ್ಮಾತೆಯ ಕೃಪೆ ಪಡೆಯಲಾಗುತ್ತದೆ.

ಭಾರತ ದೇಶದಾದ್ಯಂತ ಕುಮಾರಿ ಪೂಜೆ ಪ್ರಚಲಿತವಿದ್ದರೂ, ಬೇರೆ ಬೇರೆ ಆಚರಣೆ ಪದ್ಧತಿಗಳು ಆಯಾ ಪ್ರದೇಶಗಳಿಗೆ ಅನುಗುಣವಾಗಿ ಭಿನ್ನವಾಗಿದ್ದರೂ ಮೂಲ ಸ್ವರೂಪ ಒಂದೇ ಆಗಿದೆ. ಈ ಕುಮಾರಿ ಪೂಜೆಯನ್ನು ಅನೇಕ ವಿಧವಾಗಿ ಆಚರಿಸುವುದುಂಟು ಕೆಲವರ ಮನೆಯಲ್ಲಿ ಪ್ರತಿವರ್ಷ ನವರಾತ್ರಿಯಲ್ಲೂ ಆಚರಿಸುವ ಪದ್ಧತಿಯಿರುತ್ತದೆ.ನವರಾತ್ರಿಯ ಎಲ್ಲ ದಿನವೂ ಈ ಪೂಜೆ ಮಾಡಬಹುದಾಗಿದ್ದು.ದುರ್ಗಾಷ್ಟಮಿ ಪೂಜೆ ವಿಶೇಷವೆಂದು ಹೇಳಲಾಗಿದೆ. ಕೆಲವರು ನವರಾತ್ರಿಯ ಪ್ರಥಮ ದಿನ 2 ವರ್ಷದ ಕುಮಾರಿ, 2 ನೇ ದಿನ 3 ವರ್ಷದ, 3ನೇ ದಿನ 4 ವರ್ಷ, 4 ನೇ ದಿನ 5 ವರ್ಷ ಹೀಗೆ ಆಯಾ ದಿನಕ್ಕೆ ಉಕ್ತವಾಗಿರುವ ವಯಸ್ಸಿನ ಕನ್ಯೆಯರನ್ನು ಆಹ್ವಾನಿಸುತ್ತಾರೆ ಮತ್ತೆ ಕೆಲವರು ದೊರೆತ ವಯಸ್ಸಿನ ಕನ್ಯೆಯನ್ನು ದಿನಕ್ಕೊಬ್ಬರಂತೆ ಆಹ್ವಾನಿಸುತ್ತಾರೆ ಮತ್ತೆ ಕೆಲವರು ಒಂದೇ ದಿನ 9 ಜನ ಕನ್ನಿಕೆಯರನ್ನು ಆಹ್ವಾನಿಸಿ ಪೂಜಿಸುವುದು ಉಂಟು.




ದುರ್ಗಾಷ್ಟಮಿಯಂದು 9 ಜನ ಕನ್ನಿಕೆಯರನ್ನು ಒಟ್ಟಿಗೆ ಆಹ್ವಾನಿಸಿ ನವದುರ್ಗಾ ಸ್ವರೂಪಿಣಿಯರೆಂದು ಪೂಜಿಸುವುದು ಬಹು ಶ್ರೇಷ್ಠವೆಂದು ಭಾವಿಸಲಾಗಿದೆ. ಶಕ್ತಿಯಿದ್ದವರು ಏಕೋತ್ತರ ವೃದ್ಧಿಸಿ ಅಂದರೆ ಮೊದಲ ದಿನ ಒಬ್ಬಳು ಬಿದಿಗೆ ಇಬ್ಬರು, ತದಿಗೆ ಮೂರು ಜನ ಹೀಗೆ ದಿನಕ್ಕೊಂದು ಸಂಖ್ಯೆಯಂತೆ ಹೆಚ್ಚಿಸಿ, ಕಡೆಯ ದಿನ 9 ಜನ ಕನ್ಯೆಯರನ್ನು ಕರೆದು ಪೂಜಿಸುವುದುಂಟು ಹೀಗೆ ಕುಮಾರಿ ಪೂಜೆ ದೇಶದಾದ್ಯಂತ ನಾನಾ ವಿಧವಾಗಿ ಆಚರಿಸಲ್ಪಡುತ್ತದೆ. ಬಾಗಿನ ಕೊಡುವುದಕ್ಕೆ ಇಂತಿಷ್ಟೇ ವಸ್ತುಗಳನ್ನು ಕೊಡಬೇಕೆಂಬ ನಿಯಮವೇನೂ ಇಲ್ಲ. ಯಥಾಶಕ್ತಿ ಯಥಾಯೋಗ್ಯತೆ ಕೊಡಬಹುದು.

ಈ ರೀತಿ ಕುಮಾರಿ ಪೂಜೆ ಮಾಡುವುದರಿಂದ ಸಂಪತ್ತು, ಆಯಸ್ಸು, ಆರೋಗ್ಯ, ದಾರಿದ್ರ್ಯನಾಶ, ಯಶಸ್ಸು, ಅಭಿವೃದ್ಧಿ, ಇಷ್ಟಾರ್ಥ ಪ್ರಾಪ್ತಿ, ಶತ್ರುನಾಶ, ಒಟ್ಟಿನಲ್ಲಿ ಎಲ್ಲ ರೀತಿಯ ಸಂಪತ್ ಸೌಭಾಗ್ಯ ದೊರೆಯುವುದೆಂದು ಈ ವ್ರತ ಅತ್ಯಂತ ಶುಭಕರವೂ, ಫಲಪ್ರದವೂ ಎಂದು ಆಶ್ವೀಜಮಾಸ ಮಹಾತ್ಮೆ ಗ್ರಂಥದಲ್ಲಿ ಹೇಳಲಾಗಿದೆ.

ಸುಮಂಗಲಿಯರು ಈ ವ್ರತವನ್ನಾಚರಿಸಿ ದೇವಿಯನೇ ಪೂಜಿಸಿದಂತೆ ಸಂಭ್ರಮ ಪಡುತ್ತಾರೆ. ಇದೀಗ ದೇವಿ ದೇವಸ್ಥಾನಗಳಲ್ಲೂ, ಮಠ ಮಂದಿರಗಳಲ್ಲೂ ಇಂತಹ ಪೂಜೆಗಳು ಸಾಮೂಹಿಕವಾಗಿ ನಡೆಯಲಾರಂಭಿಸಿವೆ. ಅವುಗಳಲ್ಲೂ ಭಾಗವಹಿಸಬಹುದು. ಸ್ತ್ರೀ ಶಕ್ತಿಯ ಪೂಜೆಯಾಗಿರುವ ಈ ಪದ್ಧತಿ ಭಾರತದೇಶದ ನಾನಾ ಕಡೆಗಳಲ್ಲಿ, ನಾನಾ ರೂಪಗಳಲ್ಲಿ ಆಚರಿಸಲ್ಪಡುತ್ತದೆ. ಕುಮಾರಿ ಪೂಜೆ, ದೇವಿಯ ಪೂಜೆಯೇ ಆಗಿದೆ. ಜೀವನದಲ್ಲಿ ಒಮ್ಮೆಯಾದರೂ ಮಾಡಲೇ ಬೇಕಾದ ಸೌಭಾಗ್ಯಕರ ವ್ರತವಾಗಿದೆ.

# ಕನಕದಾಸರು

- ಡಾ|| ಸುರೇಶ್ ಪಾಟೀಲ
9448700315



"ತಲ್ಲಣಿಸದಿರು ಕಂಡ್ಯ ತಾಳು ಮನವೆ" ಈ ಕೀರ್ತನೆಯನ್ನು ಕೇಳಿ ತಲೆದೂಗದವರು ಯಾರು? ಕೇವಲ ರಾಗ ತಾಳಗಳಿಂದಲ್ಲ ತನ್ನೊಳಗೆ ತುಂಬಿಕೊಂಡ ಅರ್ಥದಿಂದ ಈ ಹಾಡು ಜನಪ್ರಿಯವಾಗಿದೆ. ಬದುಕಿನ-ಭವಿಷ್ಯದ ತಲ್ಲಣಕ್ಕೆ ಸಾಂತ್ವನ ಹೇಳುವುದು ಸರಿಯೇ. ಅದನ್ನು ಮೀರಿದ ಈ ಹಾಡಿಗೆ 'ವಿಸ್ಮಯ'ವೆ ಸ್ಥಾಯಿಯಾಗಿದೆ. ವಿಜ್ಞಾನ-ಧರ್ಮ-ಆಧ್ಯಾತ್ಮಗಳ ಹುಡು ಕಾಟಕ್ಕೆ ಮೂಲಾಧಾರವೇ ಇಂಥ ವಿಸ್ಮಯ ನವಿಲಿಗೆ ಚಿತ್ರ ಬರೆದುದು ಬೆಟ್ಟದ ಮೇಲೆ ಇರುವ ಮರಕ್ಕೆ ನೀರೆರೆದುದು ಪವಳದ ಲತೆಗೆ ಕೆಂಪಿಟ್ಟದ್ದು -ಗಿಳಿಗೆ ಹಸಿರು ಬಣ್ಣ ಬಳಿದದ್ದು, ಕಲ್ಲಿನಲ್ಲಿ ಹುಟ್ಟಿ ಕೂಗುವ ಕಪ್ಪೆಗೆ ಅಲ್ಲ ಲ್ಲಿಯೆ ಆಹಾರವಿಟ್ಟುದ್ದು ಯಾರು ಎಂದು ವಿಸ್ಮಯ ಮೂಲದ ಪ್ರಶ್ನೆಯನ್ನು ಎತ್ತುವ ಮೂಲಕ ಎಲ್ಲವನ್ನು ಸಲುಹುವ ದೇವನೊಬ್ಬನಿದ್ದಾನೆ ಎಂಬ ಸಂದೇಶ ಕೊಡುವ ಕೀರ್ತನೆ ಇದು.ಇಂಥದೊಂದು ಕೀರ್ತನೆಯನ್ನು ರಚಿಸಿದ ಕನಕದಾಸರು ದಾಸ ಸಾಹಿತ್ಯದಲ್ಲಿ ಅನೇಕ ದೃಷ್ಟಿಯಿಂದ ಅನನ್ಯ ಆಗಿದ್ದಾರೆ. ಮೊದಲನೆಯದಾಗಿ ಮೊದಲ ಬ್ರಾಹ್ಮಣೇತರ ಹರಿದಾಸರು. ಎರಡನೆಯದಾಗಿ ಕೀರ್ತನೆಗಳಲ್ಲದೆ ಮಹಾಕಾವ್ಯಗಳನ್ನು ಬರೆದವರು. ಮೂರನೆಯದಾಗಿ ಮೊದಲು ಶ್ರೀವೈಷ್ಣವ ಪರಂಪರೆ ರಾಮಾನುಜರ ತತ್ವಗಳಲ್ಲಿ ಆಸಕ್ತರಾಗಿದ್ದವರು, ದಾಸ ದೀಕ್ಷೆಯನ್ನು ಪಡೆಯುವುದರ ಮೂಲಕ ಮಧ್ವಪರಂಪರೆಯ ಹರಿದಾಸರಾಗಿ ಕೀರ್ತನೆಗಳನ್ನು ರಚಿಸಿದರು. ಭಕ್ತಿ ಮತ್ತು ಜ್ಞಾನ ತುಂಬಿದ ನೂರಾರು ಕೀರ್ತನೆಗಳನ್ನು ಹಾಡಿದರು. ಧಾರವಾಡ ಜಿಲ್ಲೆಯ (ಈಗಿನ ಹಾವೇರಿ) ಬಂಕಾಪುರು 'ಬಾಡ' ಗ್ರಾಮದ ಬೀರಪ್ಪ - ಬಚ್ಚಮ್ಮರ ಮಗನಾಗಿ 1509 ರಲ್ಲಿ ಇವರು ಜನಿಸಿದರು. ತಾಯಿ ಬಚ್ಚಮ್ಮ ಈ ಮಗನನ್ನು ಪಡೆಯಲು ತಿರುಪತಿಯ ತಿಮ್ಮಪ್ಪನಿಗೆ ಹರಕೆಹೊತ್ತು ಸೇವೆ ಮಾಡಿದ್ದಳು. ಅದಾಗಿ ಮಗನಿಗೆ ತಿಮ್ಮಪ್ಪ ಎಂದೇ ಹೆಸರಿಟ್ಟರು.

ಬೀರಪ್ಪ ವಿಜಯನಗರ ಸಂಸ್ಥಾನದ ದಣ್ಣಾಯಕನಾಗಿದ್ದ ಮುಂದೆ ಮಗನೂ ಈ ಪದವಿಗೆ ತಕ್ಕವನಾಗಲೆಂದು, ವಿರೋಚಿತ ವಿದ್ಯಾಭ್ಯಾಸವೇ, ಅಂದರೆ ಕತ್ತಿವರಸೆ, ಕುದುರೆ ಸವಾರಿ, ಕುಸ್ತಿ, ಯುದ್ಧವಿದ್ಯೆ ಇತ್ಯಾದಿಗಳ ತರಬೇತು ಆಯಿತು ಇವರಿನ್ನೂ ಚಿಕ್ಕವಯಸ್ಸಿನಲ್ಲಿದ್ದಾಗಲೆ ತಂದೆ ಅನಿರೀಕ್ಷತವಾಗಲೆ ಮರಣ ಹೊಂದಿದ ನಿಮಿತ್ತವಾಗಿ ತಂದೆಯ ದಂಡನಾಯಕನಾಗಿ ಕೆಲಸ ವಹಿಸಿಕೊಳ್ಳುವಂತಾಯಿತು ಮತ್ತು ತನ್ನ ಚಾಕಚಕ್ಯತೆಯಿಂದ ವಿಜಯನಗರ ಅರಸರ ವಿಶ್ವಾಸ ಭರವಸೆ ಬೆಳಸಿಕೊಳ್ಳುವಲ್ಲಿ ಸಫಲರಾದರು.ಒಮ್ಮೆ ಒಂದೆಡೆ ಇವರಿಗೆ ಭೂಗರ್ಭದ ನಿಧಿ - ಅಂದರೆ ಕನಕರಾಶಿ, ಚಿನ್ನದ ನಾಣ್ಯ - ಮುತ್ತುರತ್ನ ಸಿಗುತ್ತವೆ. ಹೀಗೆ ಭೂಗರ್ಭದಲ್ಲಿ ಹುದುಗಿರಬಹುದಾದ ಸಂಪತ್ತು ಗುರುತಿಸುವುದು ಇವರ ದೃಷ್ಟಿ ವಿಶೇಷ ಆಗಿತ್ತು. ಈ ಎಲ್ಲ ಕಾರಣದಿಂದ ಪ್ರಜೆಗಳು ಇವರನ್ನು ಕನಕನಾಯಕ ಎಂದು ಕರೆಯಲಾರಂಭಿಸಿ ಮುಂದೆ ಇವರು ಅದೇ ಹೆಸರಿಂದ ಪ್ರಸಿದ್ಧರಾದರು. ಆದರೆ ಮುಂದೆ ತನ್ನ ತಂದೆಯು ವೈರಿಯೂ ನೆರೆಯ ಪಾಳೆಯಗಾರನೊಂದಿಗೆ ಅನಿವಾರ್ಯವಾಗಿ ಯುದ್ಧ ಮಾಡಬೇಕಾದ ಸಂದರ್ಭ ಒದಗಿದಾಗ ಅಲ್ಲಿ ಕನಕರಿಗೆ ಸೋಲು ಉಂಟಾಗುತ್ತದೆ. ಅದು ಕಾರಣವಾಗಿ ಅವರಲ್ಲಿ ವೈರಾಗ್ಯ ಉಂಟಾಗಿ ಹರಿದಾಸ ದೀಕ್ಷೆಯನ್ನು ತೆಗೆದುಕೊಳ್ಳಲು ನಿರ್ಧರಿಸುತ್ತಾರೆ. ಇದಕ್ಕೆ ಹಿನ್ನಲೆಯಾಗಿ ಆಂತರ್ಯದಲ್ಲಿ ಭಕ್ತಿ ಭಾವವು ಸ್ಥಾಯಿ ಆಗಿ ಇದ್ದು ಪ್ರಕಟಗೊಳ್ಳಲು ಅವಕಾಶಕ್ಕಾಗಿ ಕಾಯುತ್ತಿತ್ತು. ಶಸ್ತ್ರ ವಿದ್ಯೆ ಮಾತ್ರವಲ್ಲದೆ ಕಾವ್ಯಶಾಸ್ತ್ರದಾಳ ಅಧ್ಯಯನವು ಆಗಿರಬೇಕು ಮತ್ತು ಇಷ್ಟೋತ್ತಿಗೆ ಅವರು ಕಾಗಿನೆಲೆಯಲ್ಲಿ ಇಷ್ಟದೈವ ಆದಿಕೇಶವ ದೇವಾಲಯವನ್ನು ಕಟ್ಟಿಸಿ ಆಗಿತ್ತು ಮತ್ತು ಕೆಲವು ಕಾವ್ಯಗಳನ್ನು ಬರೆದೂ ಆಗಿತ್ತು. ದಾಸದೀಕ್ಷೆ ಭಕ್ತಿ ವೈರಾಗ್ಯ ಭಾವದಿಂದ ಇವರು ವಿಜಯನಗರದ ರಾಜಗುರು ವ್ಯಾಸತೀರ್ಥರಿಂದ ದಾಸದೀಕ್ಷೆಯನ್ನು ಆದಿಕೇಶವ ಎಂಬ ಅಂಕಿತವನ್ನು ಪಡೆಯುತ್ತಾರೆ. ಅಲ್ಲಿಯೇ ಇವರಿಗೆ ಪುರಂದರದಾಸರು, ವಾದಿರಾಜರು ಮತ್ತು ಮುಂದೆ ಬೇಲೂರು ವೈಕುಂಠದಾಸರು ಇವರುಗಳ ಒಡನಾಟ ಲಭಿಸುತ್ತದೆ. ಕನಕದಾಸ - ಪುರಂದರದಾಸರ ಮಧ್ಯಒಳ್ಳೆಯ ಒಡನಾಟ ಇದ್ದಿತು. ವ್ಯಾಸತೀರ್ಥರಿಗೂ ಕನಕರೆಂದರೆ ಅಚ್ಚುಮೆಚ್ಚು, ವ್ಯಾಸರಾಯರ ಮಠದಲ್ಲಿದ್ದ ಪಂಡಿತ ಪುರೋಹಿತರಿಗೆ ಜಾತಿಯ ಕಾರಣದಿಂದ ಕನಕದಾಸರ ಮೇಲೆ ಅಸಡ್ಡೆ ಇತ್ತು ಅದನ್ನು ನಿವಾರಿಸಲು ಸಾಗುವ ವ್ಯಾಸತೀರ್ಥರು ಅನೇಕ ಸನ್ನಿವೇಶಗಳನ್ನು ನಿರ್ಮಾಣ ಮಾಡುವ ಮೂಲಕ

ಇತರರಿಗೆ ಕನಕದಾಸರ ಹಿರಿಮೆ - ವಿದ್ವತ್ತು ಇವುಗಳ ಪರಿಚಯ ಮಾಡಿಸುತ್ತಿದ್ದರು. ದಾಸರಾದ ಮೇಲೆ ಕನಕರೂ ಊರೂರು ಸಂಚರಿಸುತ್ತಿದ್ದರು. ಇವರು ಬರೆದ ಮಹಾ ಕಾವ್ಯಗಳೆಂದರೆ,

1. ಮೋಹನ ತರಂಗಿಣಿ - ಷಟ್ಪದಿ, ಛಂದಸ್ಸಿನಲ್ಲಿದೆ ಶ್ರೀಕೃಷ್ಣನ ಸುತ್ತ ಹೆಣೆದ ಕತೆ ಇಲ್ಲಿದೆ ದ್ವಾರಕೆಯ ಶ್ರೀ ಕೃಷ್ಣನ ವೈಭವ, ಅವರ ಮಕ್ಕಳು, ಮೊಮ್ಮಕ್ಕಳ ಪ್ರಸಂಗ, ಮನ್ಮಥನು ಕೃಷ್ಣ ರುಕ್ಮಿಣಿಯರ ಮಗನಾಗಿ ಅವತರಿಸುವುದು ಪ್ರದ್ಯುಮ್ನಾ ಅವನಿಂದ ಶಂಬರಾಸುರನ ಸಂಹಾರ.ಅನಿರುದ್ಧ - ಉಷೆಯರ ಪ್ರಸಂಗ, ಬಾಣಾಸರು ವಧೆ,ಮುಂತಾದ ಪ್ರಸಂಗಗಳು ಸೊಗಸಾಗಿ ಚಿತ್ರಿತ ಆಗಿವೆ. ಇಲ್ಲಿ ಬರುವ ಕೃಷ್ಣರಾಯನ ಪಾತ್ರದಲ್ಲಿ ವಿಜಯನಗರದ ಕೃಷ್ಣದೇವ ರಾಯನನ್ನು, ದ್ವಾರಕೆಯಲ್ಲಿ ವಿಜಯನಗರವನ್ನು ಗುರುತಿಸುವ ವಿದ್ವಾಂಸರಿದ್ದಾರೆ. ಲೌಕಿಕಭಾವ, ಶೃಂಗಾರ ಪರಾಕಾಷ್ಠೆ ಇಲ್ಲಿ ಎದ್ದು ಕಾಣುತ್ತದೆ. ಬಹುಶಃ ಕನಕರ ಮೊದಲ ಕೃತಿ ಇದಾಗಿರಬಹುದು.

2. ನಳಚರಿತ್ರೆ ಷಟ್ಪದಿಯಲ್ಲಿದೆ. ನಳ ಮಹಾರಾಜನ ಕತೆಯನ್ನು ನಾಲ್ಕನೂರಾ ಎಂಭತ್ತು ಷಟ್ಪದಿಗಳಲ್ಲಿ ಇಲ್ಲಿ ರಚಿಸಲಾಗಿದೆ. ಮಹಾಭಾರತದ ಮನಪುರದಲ್ಲಿ ಬರುವ ವಿಸ್ತಾರವಾದ ನಳೋಪಾಖ್ಯಾನವೇ ಇವರಿಗೆ ಮೂಲ ಆಕಾರ ಅದರ ಕಥೆಯಲ್ಲಿ ಅಲ್ಲಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ.


3. ರಾಮಧಾನ್ಯ ಚರಿತೆ :- ಕನಕದಾಸರ ಅಪೂರ್ವಕಲ್ಪನಾ ಸೃಷ್ಟಿಯ ಕಾವ್ಯವಿದು ಬಡವರ ಶ್ರೀಮಂತರ, ಮೇಲು ಕೀಳಿನ ಸಂಘರ್ಷದ ಕತೆ - ರಾಗಿ ಮತ್ತು ಬತ್ತ. ಇವುಗಳಲ್ಲಿ ರಾಗಿ ಬಡವರ ಪಕ್ಷಪಾತಿ - ಅದರ ಮೂಲ ಹೆಸರು ನರೆದಲಗ. ಆದರೆ ಅದಕ್ಕೂ ಮತ್ತು ಬತ್ತಕ್ಕೂ ನಡೆದ ಸ್ಪರ್ಧೆಯಲ್ಲಿ ಗೆದ್ದ ನರೆದಲಗಕ್ಕೆ ರಾಮ ಪ್ರೀತಿಯಿಂದ ಇಟ್ಟ ಹೆಸರು ರಾಘವ ಅದೇ ರಾಗಿ ಕತೆಗೂ ರಾಮಾಯಣಕ್ಕೂ ಶ್ರೀರಾಮನಿಗೂ ಸಂಬಂಧ ಕಲ್ಪಿಸಿರುವುದು ಇಲ್ಲಿ ನ ಸ್ವಾರಸ್ಯ. ರಾಗಿಯು ತನ್ನ ಗುಣಗಳಿಂದ ರಾಮಧಾನ್ಯವಾಗುತ್ತದೆ. ಇವೆರಡರ ನಡುವಿನ ಸಂಘರ್ಷದಲ್ಲಿ ರಾಮನು ರಾಗಿ ಯನ್ನು ಎತ್ತಿ ಹಿಡಿದರೂ ಬತ್ತವನ್ನೇ ನಾ ಅಲ್ಲಗಳೆಯುವುದಿಲ್ಲ.ಅದಕ್ಕೂಅದರದ್ದೆ ಗುಣಗ ಳಿವೆ,ಮಹತ್ವವಿದೆ. ಆದರೆ ಅಂತಃ ಸತ್ವ ಇಲ್ಲದ ಅಹಂಕಾರ, ಬಹಿರಾಡಂಬರ ಎಳ್ಳವ ರನ್ನು ಈ ಮೂಲಕ ವಿಡಂಬಿಸಲಾಗಿದೆ. ಜೊತೆಗೆ ಶ್ರೀರಾಮಚಂದ್ರ ಯಾವಾಗಲೂ ಬಡವರ ಪಕ್ಷ ಪಾತಿ, ಭಕ್ತವತ್ಸಲ ಎಂಬುದು ಇಲ್ಲಿನ ಪ್ರತಿ ಪಾದನೆ.



4. ಹರಿಭಕ್ತಿಸಾರ (ನೂರಹನ್ನೊಂದು ) 111 ಭಾಮಿನಿ ಷಟ್ಪದಿಯಲ್ಲಿ ಇರುವ ಈ ಕೃತಿಯಲ್ಲಿ ಕನಕದಾಸರ ಹರಿಭಕ್ತಿ ಉಕ್ಕಿ ಹರಿದಿದೆ. ಇದೊಂದು ಶತಕ ಸಾಹಿತ್ಯಕೃತಿ. ಹಾಗೆಯೇ ಹಾಡಿಕೆಗಳೂ ಅಳವಡುತ್ತದೆ. ದಾಸರೇನೊ ಇದನ್ನು ಹರಿಭಕ್ತಿ ಸಾರದ ಚರಿತ್ರೆ - ಕಥೆ ಎಂದು ಕರೆದರೂ ಇಲ್ಲಿ ಯಾವುದೇ ನಿರ್ದಿ ಷ್ಟಕತೆ ಇಲ್ಲ ಶ್ರೀಹರಿಯ ಕರುಣೆ, ಮಹಿಮೆ, ಲೀಲೆಗಳನ್ನು ಕೊಂಡಾಡುವ ಸ್ತೋತ್ರ ಸಾಹಿತ್ಯವಿದು. ಮಧ್ಯೆ ಮಧ್ಯೆ ಭಕ್ತರ-ಭಗವಂತನ ವಿಭಿನ್ನ ಪ್ರಸಂಗಗಳು. ಪುರಾಣ ಸಂಗತಿಗಳು ಬರುತ್ತವೆ. ಇದರೊಳಗೆ ವಿದ್ವತ್ತೂ ಇದೆ. ಅಲ್ಲಲ್ಲಿ ಕೆಲವು ತತ್ವ ಗಳೂ ಬರುತ್ತದೆ. ಒಟ್ಟಿನಲ್ಲಿ ಉತ್ತಮ ಕಾವ್ಯವಿದು.

ಇದಿಷ್ಟು ಕಾವ್ಯಗಳಾದರೆ ಕನಕದಾಸರು ಹೆಚ್ಚು ಪ್ರಚಲಿತ ಆಗಿರುವುದು ಕೀರ್ತನೆಗಳಲ್ಲಿ, ಕಾಗಿನೆಲೆಯಾದಿಕೇಶವ ಬಾಡದಾದಿಕೇಶವ, ಆದಿಕೇಶವ ಎಂದೆಲ್ಲ ಅಂಕಿತದಲ್ಲಿ ಕೃತಿ ರಚಿಸಿದ್ದಾರೆ. ಇವು ಸಂಗೀತಕ್ಕೂ ಅಳವಡುತ್ತವೆ. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಪಾರಮ್ಯ, ಭಗವಂತನಲ್ಲಿ ಆರ್ತತೆ ಆತ್ಮಸಾಕ್ಷಾತ್ಕಾರ, ಸಾಮಾಜಿಕ ವಿಡಂಬನೆ ಸಮಾಜ ಚಿಂತನೆ, ಕೃಷ್ಣ ಲೀಲೆ ದಶಾವತಾರ ಮುಂತಾದ ಕೀರ್ತನೆಗಳಿವೆ. ಸಮಾಜ ವಿಮರ್ಶೆ ವಿಡಂಬನೆಗಳಲ್ಲಿ ಕನಕದಾಸರು ನಿಷ್ಠುರವಾದಿಗಳೇ ಸರಿ. ಕೆಲವು ಕೀರ್ತನೆಗಳ ಮೊದಲ ಸಾಲು ಬರೆದಿದರೂ ಎಲ್ಲಿ ತಿಳಿಯುತ್ತದೆ. ಉದಾ: ''ಎಲ್ಲಾರು ಮಾಡುವುದು ಹೊಟ್ಟೆಗಾಗಿ'' ''ಕುಲ ಕುಲವೆಂದು ಹೊಡೆದಾಡದಿರಿ,'' ''ಕುಲಕುಲ ಕುಲವೆನ್ನುತಿಹರು,'' ''ಜಪವ ಮಾಡಿದರೇನು ತಪವ ಮಾಡಿದರೇನು'', ''ತನು ನಿನ್ನದು ಜೀವನ ನಿನ್ನದೊ'' ''ತೀರ್ಥವನು ಪಿಡಿದವರು ತಿರುನಾಮಧಾರಿಗಳೇ'', ದ್ರೋಹಗಳ ವಿವರವನು ನಾ ಪೇಳ್ವೆನಯ್ಯ ನಿಜವರಿತು ಲಿಂಗಿ ಪೂಜೆಯ ಮಾಡುವರ್ಯಾರು. ಹೀಗೆಯೇ ಅನೇಕ ಕೀರ್ತನೆಗಳನ್ನು ಉಲ್ಲೇಖಿಸಬಹುದು. ಬಯಲು ಆಲಯದೊಳಗೂ ಆಲಯವು ಬಯಲೊಳಗೊದಂಥ ಉತ್ತಮ ಕೀರ್ತನೆಗಳು ಸಾಕಷ್ಟಿವೆ. ಅನೇಕ ಒಗ್ಗಟಿನ ಕೀರ್ತನೆಗಳಲ್ಲಿ ಇದ್ದು ಅವು ಕನಕನ ಮುಂಡಿಗೆ ಎಂದೂ ಹೆಸರಾಗಿವೆ ಅಂದರೆ ಸುಲಭವಾಗಿ ಅರ್ಥ ಬಿಟ್ಟು ಕೊಡದ ಸಾಂಕೇತಿಕ ಅರ್ಥ ಧ್ವನಿಸುವ ಚಮತ್ಕಾರದ ರಚನೆ ಇವು.

ಹೀಗೆ ಕನಕದಾಸರ ಅನುಭವ ವಿಸ್ತಾರಕ್ಕೆ ತಕ್ಕ ಹಾಗೆ ಅವರ ವೈವಿಧ್ಯ ಪೂರ್ಣ ಕೀರ್ತನೆಗಳಿವೆ. ಅನುಭವಕ್ಕೆ ತಕ್ಕ ಅವರ ಭಾಷೆಯಲ್ಲೂ ವೈವಿಧ್ಯತೆ ಕಾಣಬಹುದು. ಒಂದು ಮಾತಿನಲ್ಲಿ ಹೇಳುವುದಾದರೆ ದಾಸ ಸಾಹಿತ್ಯಕ್ಕೆ ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಕನಕರ ಕೊಡುಗೆ ದೊಡ್ಡದು. ಪ್ರಧಾನವಾಗಿ ಆತ್ಮೋದ್ಧಾರದು ಭಗವದ್ಭಕ್ತಿ ಪ್ರತಿಪಾದನೆಯ ಸಾಹಿತ್ಯವಾಗಿ ವಿಶೇಷವಾಗಿ ಅವರ ಕೀರ್ತನೆಗಳು ನಮ್ಮನ್ನು ಸೆಳೆಯುತ್ತವೆ.



# ಶ್ರೀವೇಂಕಟಾಚಲ ಮಹಾತ್ಮ್ಯ

**ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್**
**ಅನುವಾದ – ಶ್ರೀಮತಿ. ಎಸ್. ಪಾರ್ವತಿ**



**ಹಿಂದಿನ ಸಂಚಿಕೆಯ ಕಥಾ ವಿಶೇಷತೆ :**

ವೈಕುಂಠ ವಾಸನಾದ ಶ್ರೀಮಹಾವಿಷ್ಣುವು ದುಷ್ಟ ಶಿಕ್ಷಣ ಹಾಗೂ ಶಿಷ್ಟ ರಕ್ಷಣೆಗಾಗಿ ಭೂಲೋಕದಲ್ಲಿ ಎಷ್ಟೋ ಅವತಾರಗಳನ್ನು ಎತ್ತಿದ್ದಾನೆ. ಅದಲ್ಲದೇ, ಹಿರಣ್ಯಾಕ್ಷನು ಭೂಮಿಯನ್ನು ತನ್ನ ವಶ ಮಾಡಿಕೊಂಡು ಪಾತಾಳಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ ಹರಿಯು ವರಾಹ ರೂಪವನ್ನು ತಾಳಿ ಹಿರಣ್ಯಾಕ್ಷನನ್ನು ಸಂಹರಿಸಿ ಭೂಮಿಯನ್ನು ಆ ದಾನವನ ಹಿಡಿತದಿಂದ ಕಾಪಾಡಿದನು. ಆ ಸಂದರ್ಭದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ಕೈಜೋಡಿಸಿ.

"ಸ್ವಾಮಿ ನೀವು ಈ ವರಾಹ ರೂಪದಲ್ಲಿ ಭೂಲೋಕದಲ್ಲಿ ಅವತಾರ ಎತ್ತಿ, ನೆಲೆಸಿದರೆ ಸರ್ವಲೋಕ ಕ್ಷೇಮವಾಗಿರುತ್ತದೆ'' ಎಂದನು. ಬ್ರಹ್ಮಪ್ರಾರ್ಥನೆಯಿಂದ ಹರಿಯು ಸಮಸ್ತ ಜನರ ದರ್ಶನಕ್ಕಾಗಿ ಶ್ವೇತ ವರಾಹ ರೂಪಧಾರಿಯಾದನು. ಅಂತಹ ಸ್ಥಿತಿಕಾರಕನಾದ ಮಹಾವಿಷ್ಣುವು ತನ್ನ ನಿವಾಸವಾದ ವೈಕುಂಠದಲ್ಲಿ ಆದಿತ್ಯ ಮಂಡಲದಲ್ಲಿಯೂ, ದೇವತೆಗಳ ವಾಸಸ್ಥಳವಾದ ಸ್ವರ್ಗದಲ್ಲಿಯೂ ಇರುತ್ತಿದ್ದನು. ಅದಲ್ಲದೆ ವೆಂಕಟಾದ್ರಿಯ ಮೇಲೆ ಸುದರ್ಶನಧಾರಿಯಾಗಿ ಸಾಕ್ಷಾತ್ಕರಿಸಿದನು ಎಂದು ಸೂತರು ಹೇಳಿದರು ನಂತರದ ವೃತ್ತಾಂತ :

ನೈಮಿಶಾರಣ್ಯದಲ್ಲಿ ಪುಣ್ಯ ಕಥೆ ಶ್ರವಣ ಮಾಡುವ ಶೌನಕಾದಿ ಮುನಿಗಳು'' ಮುನಿವರ್ಯರೇ, ಒಂದು ಪ್ರದೇಶಕ್ಕೆ ಒಂದು ಹೆಸರಿರುವುದು ಸಹಜ. ಆದರೆ ನೀವು ಪ್ರಸ್ತಾವಿಸುವಾಗ ಒಮ್ಮೆ ಶೇಷಾದ್ರಿ ಎಂದಿದ್ದೀರಿ, ಇನ್ನೊಮ್ಮೆ ಕ್ರೀಡಾದ್ರೀ ಎಂದಿದ್ದೀರಿ. ಇನ್ನೊಮ್ಮೆ ವೆಂಕಟಗಿರಿ ಅಂದಿದ್ದೀರಿ. ಒಂದು ಬೆಟ್ಟಕ್ಕೆ ಇಷ್ಟು ಹೆಸರುಗಳೇ? ಬಹಳ ಆಶ್ಚರ್ಯಕರವಾಗಿದೆ. ಇವುಗಳಲ್ಲದೆ ಇನ್ನೂ ಎಷ್ಟು ಹೆಸರುಗಳಿವೆ ಎಂದು ತಿಳಿಯಲು ಕುತೂಹಲವಾಗುತ್ತಿದೆ, ದಯವಿಟ್ಟು ತಿಳಿಸಿರಿ.

ಆಗಲಿ. ವರಾಹ ದೇವರು ಭೂಲೋಕದಲ್ಲಿ ಅವತರಿಸಿ ನೆಲೆಸಿದ ಪರ್ವತಕ್ಕೆ 'ಚಿಂತಾಮಣಿ' ಎಂದು ಹೆಸರು. ಲೋಕದಲ್ಲಿ ಭಕ್ತರು ಏನನ್ನು ಕೋರಿಕೊಂಡರು. ಆ ಕೋರಿಕೆಗಳನ್ನು ಈಡೇರಿಸುವುದರಿಂದ ಅದಕ್ಕೆ "ಚಿಂತಾಮಣಿ'' ಎಂದು ಹೆಸರು.

ಈ ಬೆಟ್ಟವನ್ನು "ಜ್ಞಾನಾದ್ರಿ'' ಎಂದು ಸಹ ಕರೆಯುತ್ತಾರೆ. ಮಾನವ ಎಂದರೆ ಜ್ಞಾನವಂತ ಎಂದು ಅರ್ಥವಲ್ಲವೇ. ಈ ಜ್ಞಾನವು ಕೆಲವರಿಗೆ ಮಾತ್ರ ಸೀಮಿತವಾಗಿದೆ. ಬಹಳ ಜನರಲ್ಲಿ ಜ್ಞಾನತೃಷ್ಣೆ ಇರುತ್ತದೆ. ಜ್ಞಾನಕ್ಕೆ ಸಮನಾದುದು ಮತ್ತೊಂದಿಲ್ಲ. ಈ ಬೆಟ್ಟವನ್ನು ಸ್ಮರಿಸುವವರಿಗೆ ಮತ್ತು ಈ ಬೆಟ್ಟದ ಮೇಲೆ ವಾಸಿಸುವವರಿಗೆ ಪರಿಪೂರ್ಣ ಜ್ಞಾನ ಸಿದ್ಧಿಸುತ್ತದೆ. ಅದಕ್ಕೆ ಅದನ್ನು "ಜ್ಞಾನಾದ್ರಿ'' ಎಂದು ಕರೆಯುತ್ತಾರೆ.

ಈ ಪರ್ವತಕ್ಕೆ "ತೀರ್ಥಾಚಲ''ವೆಂದೂ ಹೆಸರಿದೆ. ತೀರ್ಥ ಎಂದರೆ ಪವಿತ್ರಗೊಳಿಸುವುದು ಎಂದು ಅರ್ಥ. ಯಾರು ಪವಿತ್ರ ಜಲ ಸ್ನಾನ ಮಾಡುತ್ತಾರೋ, ಪಾನ ಮಾಡುತ್ತಾರೋ ಅವರವರ ಕೋರಿಕೆಗಳು, ಸಂಕಲ್ಪಗಳು ಸಿದ್ಧಿಸುತ್ತವೆ. ಈ ಬೆಟ್ಟದಲ್ಲಿ ಒಂದೇ ತೀರ್ಥವಲ್ಲ ಅನೇಕಾನೇಕ ತೀರ್ಥಗಳಿವೆ. ಆದ್ದರಿಂದ "ತೀರ್ಥಾಚಲ'' ಎಂದು ಹೆಸರು.

ಈ ಗಿರಿಗೆ "ಪುಷ್ಕರ ಶೈಲ'' ಎಂಬ ಹೆಸರು ಇದೆ. ಏನೂ ಕೋರಿಕೆಗಳನ್ನು ಹೊಂದದಿರುವ ತಪಸ್ವಿಗಳು ಹಾಯಾಗಿ ತಮ್ಮ ಸ್ನಾನ, ಪಾನ, ಪೂಜೆಗಳನ್ನು ಮಾಡಲು ಸಮರ್ಪಕವಾದ ಪುಷ್ಕರಣಿಗಳು ಈ ಬೆಟ್ಟ ದಲ್ಲಿ ತುಂಬಾ ಇದೆ. ಆದ್ದರಿಂದ ಇದಕ್ಕೆ "ಪುಷ್ಕರ ಶೈಲ '' ಎಂದು ಹೆಸರು.

ಈ ಬೆಟ್ಟಕ್ಕೆ "ವೃಷಭಾದ್ರಿ'' ಎಂಬ ಹೆಸರು ಕೂಡ ಇದೆ. ವೃಷಭ ಎನ್ನುವ ರಾಕ್ಷಸನು ತನ್ನ ಡಮರುಗವನ್ನು ಸದಾ ಬಾರಿಸುತ್ತಿದ್ದನು. ಆತನು

ಈ ಸ್ಥಳದಲ್ಲಿ ತಪಸ್ಸು ಮಾಡಿದ್ದರಿಂದ ಇದನ್ನು "ವೃಷಭಾದ್ರಿ" ಎಂತಲೂ ಕರೆಯುತ್ತಾರೆ.

ಈ ಬೆಟ್ಟಕ್ಕೆ "ಕನಕಾಚಲ"ವೆಂಬ ಇನ್ನೊಂದು ಹೆಸರು ಸಹ ಇದೆ. ದೇವಾದಿದೇವತೆಗಳು ಕೂಡಾ ದಿಗ್ಭ್ರಮೆಗೊಳ್ಳುವಂತಹ ಭವನಗಳು ಇದ್ದುದರಿಂದ ಈ ಬೆಟ್ಟವನ್ನು "ಕನಕಾಚಲ" ಎಂದು ಕರೆಯುತ್ತಾರೆ.

ಈ ಭೂಧರೆಗೆ "ನಾರಾಯಣಾದ್ರಿ" ಎಂಬ ಹೆಸರು ಸಹ ಇದೆ . ಈ ಹಿಂದೆ ನಾರಾಯಣ ಎಂಬ ಹೆಸರಿನ ಬ್ರಾಹ್ಮಣನು ತನ್ನ ತಪಸ್ಸಿಗೆ ಇದೇ ಸೂಕ್ತವಾದ ಸ್ಥಳ ಎಂದು ಆಯ್ಕೆ ಮಾಡಿಕೊಂಡ ಪ್ರದೇಶವಾಗಿರುವುದರಿಂದ ಇದಕ್ಕೆ "ನಾರಾಯಣಗಿರಿ" ಎಂಬ ಹೆಸರು ರೂಢಿಯಾಯಿತು.

ಇದಕ್ಕೆ "ವೇಂಕಟಾದ್ರಿ" ಎಂಬ ಹೆಸರು ಏಕೆ ಬಂತು ಎಂದು ಕೇಳಿದ್ದೀರಲ್ಲವೇ, ಹೇಳುತ್ತೇನೆ ಕೇಳಿ ವೈಕುಂಠದಲ್ಲಿನ ಕ್ರೀಡಾದ್ರಿಯನ್ನು ಭೂಲೋಕಕ್ಕೆ ಗರುಡನು ತಂದು ಇಲ್ಲಿ ಸ್ಥಿರಗೊಳಿಸಿದ್ದರಿಂದ ಇದಕ್ಕೆ "ವೇಂಕಟಾದ್ರಿ" ಎಂಬ ಹೆಸರು ಬಂದಿದೆ.

ಈ ಶೈಲಕ್ಕೆ "ನರಸಿಂಹಗಿರೀಂದ್ರ" ಎಂಬ ಹೆಸರು ಸಹ ಇದೆ ಮಹಾವಿಷ್ಣುವು ಪ್ರಹ್ಲಾದ ವತ್ಸಲನ ಪಾಲನೆಗಾಗಿ ನರಸಿಂಹನಾಗಿ ಹಿರಣ್ಯಾಕ್ಷನನ್ನು ಸಂಹರಿಸಿದ ಕಾರಣಕ್ಕೆ "ನರಸಿಂಹಗಿರೀಂದ್ರ" ಎಂದು ಪ್ರಖ್ಯಾತವಾಗಿದೆ.

ಇನ್ನೊಂದು ವಿಚಿತ್ರವಾದ ವೃತ್ತಾಂತವಿದೆ. ಅಂಜನಾದೇವಿಯು ಈ ಬೆಟ್ಟದಲ್ಲೇ ತಪಸ್ಸು ಮಾಡಿದಳು. ಹನುಮಂತನನ್ನು ಹೆತ್ತಳು.ಈ ವೃತ್ತಾಂತವನ್ನು ತಿಳಿದ ತಪಸ್ವಿಗಳು ಆ ಮಾತೆಯ ಗೌರವಾರ್ಥವಾಗಿದೆ. ಈ ಬೆಟ್ಟಕ್ಕೆ "ಅಂಜನಾದ್ರಿ" ಎಂದು ಹೆಸರಿಟ್ಟರು.

ಇನ್ನೊಂದು ವಿಚಿತ್ರವಾದ ಸಹಜವಾದ ಸಂಗತಿಯನ್ನು ಹೇಳುತ್ತೇನೆ. ಈ ಬೆಟ್ಟದ ಮೇಲೆ ವರಾಹ ಸಂತತಿಯು ಹೆಚ್ಚಾಗಿ ಇತ್ತು. ಆ ಕಾರಣಕ್ಕಾಗಿಯೇ ಸ್ಥಿತಿಕಾರಕರಾದ ವಿಷ್ಣುವು ವರಾಹ ರೂಪವನ್ನು ಧರಿಸಿ ಇಲ್ಲಿ ನೆಲಿಸಿದನು. ಆದ್ದರಿಂದ "ವರಹಾದ್ರಿ" ಎಂದು ಪ್ರಖ್ಯಾತವಾಗಿದೆ.

ಒಂದಾನೊಂದು ಕಾಲದಲ್ಲಿ ನೀಲ ಎಂಬ ವಾನರನು ಈ ಬೆಟ್ಟದ ಮೇಲೆ ಬಹಳ ಕಾಲ ವಾಸ ಮಾಡಿದ್ದರ ಕಾರಣ ಈ ಬೆಟ್ಟಕ್ಕೆ "ನೀಲಗಿರೀಂದ್ರ" ಎಂಬ ಹೆಸರು ಸಹ ಬಂದಿದೆ.

ಇದೆಲ್ಲದರ ಜೊತೆ ಇನ್ನೊಂದು ಸಂಗತಿಯನ್ನು ಹೇಳುತ್ತೇನೆ ಕೇಳಿ. ಇದು ಶ್ರೀ ಗೆ ನಿವಾಸ. ಲೋಕದಲ್ಲಿ ಸಮಸ್ತ ಮಾನವರು ಕೋರುವ ಎಲ್ಲವುದನ್ನು ಪ್ರಸಾದಿಸುವ ಹರಿಯು ಈ ಬೆಟ್ಟದ ಮೇಲೆ ನೆಲೆಸಿರುವುದರಿಂದ "ಶ್ರೀನಿವಾಸ ಪರ್ವತ" ಎಂಬ ಹೆಸರು ಬಂದಿದೆ.

ಇಷ್ಟೇನಾ? ಇನ್ನೂ ಒಂದಿದೆ. ಅದೆಂದರೆ "ಆನಂದಾಚಲ". ಲಕ್ಷ್ಮಿದೇವಿಯನ್ನು ತನ್ನ ವಕ್ಷಸ್ಥಲದಲ್ಲಿ ಇಟ್ಟುಕೊಂಡಿರುವುದರಿಂದ ಶ್ರೀನಿವಾಸನು ಕೋರಿದವರಿಗೆ ವರಗಳನ್ನು ಅನುಗ್ರಹಿಸುತ್ತ ಆನಂದ ಪರವಶರನ್ನಾಗಿ ಮಾಡುತ್ತಿರುವುದರಿಂದ ಇದಕ್ಕೆ "ಆನಂದಗಿರಿ" ಎಂಬ ಹೆಸರು ಬಂದಿದೆ.

ಶ್ರೀಪತಿಯು ಈ ವರಗಿರಿಯ ಮೇಲೆ ಸದಾ ವಾಸ ಮಾಡುವುದರಿಂದ ಈ ಪ್ರದೇಶವೆಲ್ಲಾ ವೈಭವೋಪೇತವಾಗಿ ರಾರಾಜಿಸುವುದರಿಂದ ಇದನ್ನು ಶ್ರೀ ಸದ್ಗರಿ ಅಂತನೂ ಕರೆಯುತ್ತಾರೆ. ಶ್ರೀ ಹರಿಯು ಲಕ್ಷ್ಮೀ ಮೊದಲಾದವರ ಸಮೇತ ಸದಾ ಕ್ರೀಡಾಚಲದಲ್ಲಿ ವಿಹಾರ ಮಾಡುವುದರಿಂದ ಎಲ್ಲಾ ಪರ್ವತಗಳಿಗಿಂತ ಭಿನ್ನವಾದ ಕೀಡಾಚಲವಾಗಿದೆ.

ಅತ್ಯಂತ ವೈಭವೋಪೇತವಾಗಿರುವ ವೈಕುಂಠದಿಂದ ಗರುಡನು ಕ್ರೀಡಾ ಪರ್ವತವನ್ನು ಭೂಲೋಕಕ್ಕೆ ತಂದಿದ್ದರಿಂದ ಇದಕ್ಕೆ ಗರುಡಾದ್ರಿ ಎಂಬ ಹೆಸರು ಬಂದಿದೆ. ಎಲ್ಲದಕ್ಕಿಂತಲೂ ಪೌರಾಣಿಕವಾಗಿರುವ ನಿದರ್ಶನವನ್ನು ಹೇಳುತ್ತೇನೆ ಕೇಳಿ. ಶ್ರೀಹರಿಯು ಶೇಷಶಯನನು. ಆದ್ದರಿಂದಲೇ ಈ ಬೆಟ್ಟವು ಶೇಷಾಕೃತಿಯಲ್ಲಿ ದರ್ಶನೀಯವಾಗಿದೆ. ಪರಸ್ಪರ ಒಂದಕ್ಕೊಂದು ಭೂಷಣಪ್ರಾಯಗಳಾಗಿವೆ. ಆದ್ದರಿಂದ ಭೂಲೋಕದಲ್ಲಿ ದರ್ಶಿಸಲು ಬರುವ ಭಕ್ತರಿಗೆಲ್ಲಾ "ಶೇಷಾಚಲ"ವಾಗಿದೆ.

ಎಲ್ಲದಕ್ಕಿಂತಲೂ ಪೌರಾಣಿಕವಾಗಿರುವ ನಿದರ್ಶನವನ್ನು ಹೇಳುತ್ತೇನೆ ಕೇಳಿ. ಶ್ರೀ ಹರಿಯು ಶೇಷಶಯನನು ಆದ್ದರಿಂದಲೇ ಈ ಬೆಟ್ಟವು ಶೇಷಾಕೃತಿಯಲ್ಲಿ ದರ್ಶನೀಯವಾಗಿದೆ. ಪರಸ್ಪರ ಒಂದಕ್ಕೊಂದು ಭೂಷಣಪ್ರಾಯಗಳಾಗಿವೆ.ಆದ್ದರಿಂದ ಭೂಲೋಕದಲ್ಲಿ ದರ್ಶಿಸಲು ಬರುವ ಭಕ್ತರಿಗೆಲ್ಲಾ ಶೇಷಾಚಲವಾಗಿದೆ.

ಈ ಅಚಲ ಬೆಟ್ಟವು ಅನೇಕ ಧರ್ಮಗಳಿಗೆ ತಾಣವಾಗಿದೆ. ಪ್ರಜೆಗಳಿಗೆ ಧರ್ಮ ಸಿದ್ಧಿಯನ್ನು ನೀಡುವ ಪುಣ್ಯ ಪರ್ವತವೂ ಹೌದು. ವೃಷ ಎಂದರೆ ಧರ್ಮ ಎಂದರ್ಥ. ಆ ಕಾರಣಕ್ಕಾಗಿ ಇದನ್ನು "ವೃಷಾದ್ರಿ" ಎನ್ನುತ್ತೇವೆ.

ಎಲ್ಲದಕ್ಕಿಂತಲೂ ಒಂದು ಪರಮಾರ್ಥವನ್ನು ಹೇಳುತ್ತೇನೆ ಕೇಳಿ. ವಕಾರವು ಅಮೃತ ಬೀಜ . ಸಂಕಟ ಹಾರಕ. ಭಕ್ತರಿಗೆ ಕಾಮಿತಫಲದಾಯಿನಿ. ಈ ಮೂರು ಕಾರಣಗಳಿಂದ ಇದನ್ನು ವೇಂಕಟಾದ್ರಿ ಎಂದು ಕರೆಯಲಾಗುತ್ತದೆ.

ಈ ಬೆಟ್ಟಕ್ಕೆ ಇರುವ ಇಷ್ಟು ಹೆಸರುಗಳನ್ನು ನಾನು ತಿಳಿಸಿದ್ದರೂ, ವಿಭಿನ್ನ ನಾಮಗಳಿಂದ ವಿಖ್ಯಾತಿಯನ್ನು ಪಡೆದಿರುವ ಪರ್ವತದಿಂದ ಮಹಾತ್ಮೆ ಇಷ್ಟೇ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಚತುರ್ಮುಖನಾದ ಬ್ರಹ್ಮ ಷಣ್ಮುಖನಾದ ಸುಬ್ರಮಣ್ಯ. ಸಹಸ್ರ ಮುಖವುಳ್ಳ ಶೇಷನೇ ವರ್ಣಿಸಲಾಗದ ಪರ್ವತವಾಗಿದೆ.

ಆದ್ದರಿಂದಲೇ ಇಂತಹ ಪರ್ವತಗಿರಿಯ ಮೇಲೆ ಶ್ರೀಮನ್ನಾರಾಯಣನು ವಾಸ ಮಾಡುತ್ತಾ ಬೆಟ್ಟ ಸಮೂಹಗಳ ಎತ್ತರ ಭಾಗದ ಒಂದು ಗಿರಿಯ ಮೇಲೆ ಸ್ವಾಮಿಯು ರಮಾಕಾಂತನಾಗಿ ಅಡವಿಯಲ್ಲಿ, ಬೆಟ್ಟದ ಸಾಲುಗಳಲ್ಲಿ, ಆಕಾಶದಲ್ಲಿ ವಿನೋದಿಸುತ್ತಾ ವಿಹರಿಸುತ್ತಿದ್ದಾನೆ - ಎಂದು ಸೂತನು ಹೇಳಲು,ಶ್ರೀ ಹರಿಯು ಇನ್ನಿಷ್ಟು ಲೀಲಾ ವಿಲಾಸ ವೈಭವಗಳನ್ನು ತಿಳಿಸಬೇಕೆಂದು ಶೌನಕಾದಿ ಮುನಿಗಳು ಕೋರಿದರು.

**- ಮುಂದುವರಿಯುತ್ತದೆ.**



# ಯೋಗೀಶ್ವರಂ ಯಾಜ್ಞವಲ್ಕ್ಯಂ

- ವೇದ ವಿದ್ವಾನ್. ಶಿವರಾಮ ಜೋಗಳೇಕರ
8275180641

ಮಹಾನ್ ಆಧ್ಯಾತ್ಮವೇತ್ತಾ ಯೋಗಿ, ಜ್ಞಾನೀ ಧರ್ಮಾತ್ಮಾ ಶ್ರೀರಾಮ ಕಥೆಯ ಪ್ರವಕ್ತನಾದ ಮಹರ್ಷಿ ಯಾಜ್ಞವಲ್ಕನ ಹೆಸರು ಸರ್ವಶ್ರುತವಾಗಿದೆ. ಪುರಾಣದಲ್ಲಿ ಇವನನ್ನು ಬ್ರಹ್ಮನ ಅವತಾರ ಎನ್ನಲಾಗಿದೆ. ಕೇದಾರನಾಥ ಕ್ಷೇತ್ರದಲ್ಲಿ ದೇವರಾತ ಮತ್ತು ಸುನಂದಾದೇವಿಯರ ತಪಸ್ಸಿಗೆ ಒಲಿದು ಭಗವಂತ ಶಿವ ಅವರ ಸಂತಾನಪೇಕ್ಷೆಯನ್ನು ಪೂರ್ಣ ಮಾಡಿದನು. ಪತಿ - ಪತ್ನಿಯರು ತಮ್ಮ ಬ್ರಹ್ಮ ವಿದ್ಯೆಯಿಂದ ಇಡೀ ಜಗತ್ತನ್ನು ಆ ಚಂದ್ರಾರ್ಕವಾಗಿ ಬೆಳಗಬಲ್ಲ ಪುತ್ರ ಬೇಕೆಂದು ಪ್ರಾರ್ಥಿಸಿದ್ದರು ಅದರಂತೆ ಭಗವಂತ ಶಿವ ಅವರ ಸಂಕಲ್ಪ ಪೂರ್ಣಗೊಳಿಸಿದ. ಯಾಜ್ಞವಲ್ಕ್ಯನು ಬಾಲ್ಯದಲ್ಲಿಯೇ ಅಪ್ರತಿಮ ಮೇಧಾವಿಯಾಗಿದ್ದು. ಆತ ಅಸಾಮಾನ್ಯವೆಂಬುದು ಅವನ ಬಾಲಲೀಲೆಗಳಿಂದಲೇ ತಿಳಿಯುತ್ತಿತ್ತು. ವಯೋಮಾನ ಸಹಜವಾದ ಆಟ ಪಾಠ-ತಿಂಡಿಗಳಲ್ಲಿ ಆಸಕ್ತನಾಗದೇ ತಂದೆ ನಡೆಸುತ್ತಿದ್ದ ಪಾಠ ಪ್ರವಚನವನ್ನು ಗಂಭೀರವಾಗಿ ಕೇಳುತ್ತಿದ್ದನು. ಯಾಜ್ಞವಲ್ಕ್ಯ ಜಿಜ್ಞಾಸೆಯಿಂದ ಕೇಳುವ ಮಾರ್ಮಿಕ ಪ್ರಶ್ನೆಗಳಿಗೆ ಉತ್ತರಿಸುವುದು ಅನೇಕ ಸಲ ಅವನ ತಂದೆಗೆ ಕಠಿಣವೆನಿಸುತ್ತಿತ್ತು ಉಪನಯನದ ಬಳಿಕ ವೈಶಂಪಾಯರ ಬಳಿ ಯಾಜ್ಞವಲ್ಕ್ಯ ಅಧ್ಯಯನ ಪ್ರಾರಂಭಿಸಿದ, ಯಾಜ್ಞವಲ್ಕ್ಯ ಏಕಸಂತೆ (ಧಿ) ಗ್ರಾಹಿ, ಅತ್ಯಲ್ಪ ಅವಧಿಯಲ್ಲಿ ಸರಹಸ್ಯವಾಗಿ ಸಂಪೂರ್ಣ ಯಜುರ್ವೇದವನ್ನು ಕಲಿತ, ಅರಿತ, ವೈಶಂಪಾಯನರಿಗೆ ಶಿಷ್ಯ ಯಾಜ್ಞವಲ್ಕ್ಯನ ಬಗ್ಗೆ ಅಪಾರ ಅಭಿಮಾನವಿತ್ತು. ತನ್ನ ಆಶ್ರಮಕ್ಕೆ ಯಾಜ್ಞವಲ್ಕ್ಯ ಭೂಷಣಪ್ರಾಯನೆಂದು ವೈಶಂಪಾಯರು ಅಭಿಮಾನದಿಂದ ಹೇಳುತ್ತಿದ್ದರು.

ವೇದವೆಂದರೇ ಬ್ರಹ್ಮಸ್ವರೂಪವು ವೇದಾಧ್ಯಯನ ಕಾಲದಲ್ಲಿ ಶಿಷ್ಯರ ಅಜಾಗರೂಕತೆಯಿಂದಲೋ, ಅವಜ್ಞೆಯಿಂದಲೋ, ವೇದಸ್ವರಗಳ ಉಚ್ಚಾರಣೆ ಸರಿಯಾಗಿ ಆಗದೇ ಹೋಗುವುದು ಉಂಟು. ಅದನ್ನು ಗಮನಿಸಿ ಗುರುಗಳು ತಿದ್ದದಿದ್ದರೆ ವೇದಪಾಠವು ಅಪದ್ಧವಾಗಿ ಗುರುಗಳಿಗೆ ಬ್ರಹ್ಮಹತ್ಯಾ ದೋಷವು ಬರುವುದು. ಒಮ್ಮೆ ವೈಶಂಪಾಯನರಿಗೆ ಈ ರೀತಿ ದೋಷವು ಬಂದಿತು. ಈ ದೋಷ ಪರಿಹಾರ ವಿಷಯದಲ್ಲಿ ವೈಶಂಪಾಯನರಿಗೆ - ಯಾಜ್ಞವಲ್ಕ್ಯನಿಗೆ ಭಿನ್ನಾಭಿಪ್ರಾಯ ಬಂದಿತು. ವೈಶಂಪಾಯನರು ಕೋಪಗೊಂಡು ಯಾಜ್ಞವಲ್ಕ್ಯನನ್ನು ದುರಹಂಕಾರಿ ಎಂದು ನಿಂದಿಸಿ ತಾನು ಕಲಿಸಿದ ವಿದ್ಯೆಯನ್ನೆಲ್ಲ ತಿರುಗಿ ಒಪ್ಪಿಸಿ ತಮ್ಮ ಆಶ್ರಮದಿಂದ ಹೊರಬೀಳಬೇಕೆಂದು ಆದೇಶಿಸಿದರು. ಈ ತತ್ಕಾಲ ಘಟನೆಯಿಂದ ಆಶ್ರಮವಾಸಿಗಳಲ್ಲೆ ಸ್ತಂಭಿಭೂತರಾದರು. ಆಗ ಯಾಜ್ಞವಲ್ಕ್ಯನು ನಿರುಪಾಯನಾಗಿ ಸ್ವಲ್ಪವು ವಿಚಲಿತನಾಗದೆ ವೈಶಂಪಾಯನರ ಬಳಿ ಕಲಿತ ಸರಹಸ್ಯವಾದ ವೇದ ವಿದ್ಯೆಯನ್ನು ವಾಂತಿ ರೂಪದಲ್ಲಿ ಹೊರಗೆ ಹಾಕಿದನು. ಆಗ ಇತರ ಮುನಿಗಳೆಲ್ಲಾ ಆ ವಿದ್ಯೆಯನ್ನು ತಿತ್ತರ ಪಕ್ಷಿಗಳ ರೂಪದಲ್ಲಿ ಸಂಗ್ರಹಿಸಿದರು. ಅದೇ "ತೈತ್ತರೀಯ ಸಂಹಿತೆ"ಯೆಂದು ಪ್ರಸಿದ್ಧವಾಯಿತು.

ಯಾಜ್ಞವಲ್ಕನ ಜೀವನ ಮತ್ತು ಸಾಧನೇ. ಪಂಚ ಭೂತಾತ್ಮಕವಾದ ಶರೀರ ರಹಸ್ಯ ಪಂಚಮಹಾ ಭೂತಗಳ ರಹಸ್ಯ ಅರಿತ ಯಾಜ್ಞವಲ್ಕ್ಯ ಕಾತ್ಯಾಯನಿ ಮತ್ತು ಮೈತ್ರೇನಿಯನ್ನು ವಿವಾಹವಾಗಿ ಮನೆಗೆ ಬಂದನು. ಗೃಹಸ್ಥನಾದರೂ ಯಾಜ್ಞವಲ್ಕ್ಯ ಇಂದ್ರಿಯದ ಸುಖಕ್ಕೆ ಮನಸೋಲದೇ ಆದಿತ್ಯನ ಉಪಾಸನೇಯನ್ನು ಮುಂದುವರಿಸಿದನು. ಅವನ ತಪಕ್ಕೆ ಮೆಚ್ಚಿ ಸುಪ್ರಿತನಾದ ಭಗವಾನ ಆದಿತ್ಯನು ತೇಜೋಮಯವಾದ ಅಶ್ವದ ರೂಪದಲ್ಲಿ ಯಾಜ್ಞವಲ್ಕ್ಯನಿಗೆ ಪ್ರತ್ಯಕ್ಷ ದರ್ಶನವನ್ನಿತ್ತು. ಹೊಸ ವೇದವೊಂದನ್ನು ಅನುಗ್ರಹಿಸಿದನು. ವೇದಗಳ ಸಂಖ್ಯೆಯು ನಾಲ್ಕೇ ಎಂದು ನಿಯತವಾಗಿರುವುದರಿಂದ ಯಾಜ್ಞವಲ್ಕ್ಯ ನು ಸಾಕ್ಷಾತ್ಕರಿಸಿಕೊಂಡ ಸಂಹಿತೆಯು ಯಜುರ್ವೇದದ್ದೇ ಇನ್ನೊಂದು ಭಾಗವೆನಿಸಿತು. ಮೊದಲು ಪ್ರಚಲಿತವಿದ್ದ ಯಜುರ್ವೇದ ಸಂಹಿತೆಯು ಕಾಲ ಮಹತ್ವವನ್ನು ಪಡೆದು "ಕೃಷ್ಣ ಯಜುರ್ವೇದ" ವೆನಿಸಿತು. ಯಾಜ್ಞವಲ್ಕ್ಯನು ಭಗವಾನ ಆದಿತ್ಯನ ಅನುಗ್ರಹದಿಂದ ಸಂಪಾದಿಸಿದ ಸಂಹಿತೆಯು "ಶುಕ್ಲಯಜುರ್ವೇದ"ವೆಂದು ಪ್ರಸಿದ್ಧಿ ಪಡೆಯಿತು. ಇವರೊಡನೆ ಯಾಜ್ಞವಲ್ಕ್ಯರಿಗೆ ಶತಪಥ ಬ್ರಾಹ್ಮಣ, ಈಶಾವಾಸ್ಯೋಪನಿಷತ್ತುಗಳೂ ದೊರಕಿದವು. ಯಾಜ್ಞವಲ್ಕ್ಯರಿಗೆ ಶುಕ್ಲಯಜುರ್ವೇದ ಸಂಹಿತೆ , ಈಶಾವಾಸ್ಯೂಪನಿಷತ್ತು, ಶತಪಥ ಬ್ರಾಹ್ಮಣಗಳ ದ್ರಷ್ಟಾರವೆನಿಸಿದರು. ಇವನ ದಿವ್ಯ ಚರಿತ್ರೆಯೇ ಬೃಹಾದಾರಣ್ಯಕ ಉಪನಿಷತ್ತೆನಿಸಿತು. ಈ ಅಪೂರ್ವ ಸಾಧನೆ

ಯಿಂದ ಯಾಜ್ಞವಲ್ಕ್ಯನು ಭಗವಾನ ಎನಿಸಿದನು. ಸರ್ವಜ್ಞ ಕಲ್ಪನಾದರು. ಇವರ ಕೀರ್ತಿ ದಶ ದಿಕ್ಕಿನಲ್ಲೂ ಪಸರಿಸಿತು. ಇಲ್ಲಿ ಅದ್ಭುತ ಬೆಳವಣಿಗೆ ಎಂದರೆ-ಸ್ವಯಂ ವೈಶಂಪಾಯನರೇ ಯಾಜ್ಞವಲ್ಕ್ಯದ ಹೊಸ ವೇದವನ್ನು ಒಪ್ಪಿಕೊಂಡು ಯಾಜ್ಞವಲ್ಕ್ಯರನ್ನು ಹರಿಸಿದರು.ಇದು ವೈಶಂಪಾಯನರ ಹೃದಯ ವೈಶಾಲ್ಯವನ್ನು ಯಾಜ್ಞವಲ್ಕ್ಯರನ್ನು ಹರಿಸಿದರು.ಇದು ವೈಶಂಪಾಯನರ ಹೃದಯ ವೈಶಾಲ್ಯವನ್ನು ಯಾಜ್ಞವಲ್ಕ್ಯರ ಅದ್ಭುತ ವ್ಯಕ್ತಿತ್ವವನ್ನು ಗಮನಿಸುವಂತಹದ್ದು ಭಗವಾನ್ ಯಾಜ್ಞವಲ್ಕ್ಯರ ಸರ್ವಜ್ಞತ್ವವನ್ನು ಜಗತ್ತಿಗೆ ಪ್ರಕಟ ಪಡಿಸುವ ಅಪೂರ್ವ ಸನ್ನಿವೇಶವೊಂದು ನಡೆದು ಹೋಯಿತು.

ವಿದೇಹದ ಮಹಾರಾಜನಾದ ಜನಕನು ಬಹುದಕ್ಷಿಣವೆಂಬ ದೊಡ್ಡ ಯಜ್ಞವನ್ನು ಮಾಡಿದನು. ಅಲ್ಲಿಗೆ ಕುರು, ಪಾಂಚಾಲ, ಕಾಶೀ ಪ್ರಾಂತಗಳ ವಿದ್ವಾಂಸರು ಆಗಮಿಸಿದರು. ಇವರಲ್ಲಿ ಅತಿಶ್ರೇಷ್ಠ ಬ್ರಹ್ಮಜ್ಞರು ಯಾರು ಎಂದು ತಿಳಿದುಕೊಳ್ಳುವ ಅಪೇಕ್ಷೆಯಿಂದ ಜನಕರಾಜನು ಒಂದು ಸಾವಿರ ಉತ್ತಮ ಗೋವುಗಳನ್ನು ನಿಲ್ಲಿಸಿದನು.ಪ್ರತಿಯೊಂದು ಗೋವಿನ ಕೊಂಬುಗಳಿಗೂ ಹತ್ತು-ಹತ್ತು ಚಿನ್ನದ ನಾಣ್ಯಗಳನ್ನು ಕಟ್ಟಿಸಿದನು.

ಈ ಸಭೆಯಲ್ಲಿ ಬ್ರಹ್ಮವಿದ್ವರಿಷ್ಠರಾದವರು ಅವನ್ನೆಲ್ಲಾ ತೆಗೆದುಕೊಂಡು ಹೋಗಬಹುದೆಂದು ಸಾರಿದನು. ಒಂದು ಹಂತದಲ್ಲಿ ಸಭೆಯು ಸ್ತಬ್ಧವಾಯಿತು. ಕೆಲವು ಸಮಯದ ನಂತರ ಅಲ್ಲಿ ಇದ್ದ ಯಾಜ್ಞವಲ್ಕ್ಯರು ತಮ್ಮ ಶಿಷ್ಯನಾದ ಸಾಮಶ್ರವನಿಗೆ ಆ ಗೋವುಗಳನ್ನು ತಮ್ಮ ಆಶ್ರಮಕ್ಕೆ ಸಾಗಿಸಲು ಅಪ್ಪಣೆ ಮಾಡಿದರು. ಈ ಅದ್ಭುತವನ್ನು (ಧಾಷ್ಟ್ಯವನ್ನು) ಕಂಡು ಕುಪಿತರಾದ ಅಲ್ಲಿಯ ವಿದ್ವಾಂಸರು ಯಾಜ್ಞವಲ್ಕ್ಯರ ಮೇಲೆ ಪ್ರಶ್ನೆಗಳ ಮಳೆಯನ್ನೇ ಕರೆದರು.ಅವರಿಗೆಲ್ಲ ಯಾಜ್ಞವಲ್ಕ್ಯರು ಸಮಾಧಾನಕರವಾದ ಉತ್ತರ ನೀಡಿದರು.ಈ ಪ್ರಶ್ನೋತ್ತರಗಳಲ್ಲಿ ಅಧ್ವೈತ ತತ್ತ್ವದ ಸಾರಸರ್ವಸ್ವವೇ ಅಡಗಿದೆ.ಯಾಜ್ಞವಲ್ಕ್ಯರ ಈ ಪ್ರಶ್ನೋತ್ತರಗಳೇ ಬೃಹದಾರಣ್ಯಕೋಪನಿಷತ್ತೆನಿಸಿದೆ.

ಅದ್ವೈತಸಾರ-ಸಂಸಾರವಸ್ಥೆಯಲ್ಲಿ ಮಾತ್ರ ಭೇದ ವ್ಯವಹಾರವಿರುತ್ತದೆ. ಜ್ಞಾನಪ್ರಾಪ್ತ್ಯ ನಂತರ ಅದು ಇಲ್ಲವಾಗುವುದನ್ನು ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ-ಯತ್ರ ತ್ವಸ್ಯ ಸರ್ವಮಾತ್ಮೈ ವಾಭೂತ್ ತತ್ಕೇನ ಕಂ ಪಶ್ಯೇತ ಎಂದು ಹೇಳಿ ಮೋಕ್ಷಾವಸ್ಥೆಯಲ್ಲಿ ದೃಕ್,ದೃಶ್ಯ, ದೃಷ್ಟಾ ಎಂಬ ತ್ರಿಪುಟಿಯು ಇಲ್ಲವಾಗಿ ನೈಜಾನಂದಾನು ಭವವೇ ಇರುವುದನ್ನು ಸ್ಪಷ್ಟಪಡಿಸುತ್ತಾರೆ. ಮೋಕ್ಷಾವಸ್ಥೆಯಲ್ಲಿ ದರ್ಶನಾದಿ ವ್ಯವಹಾರಗಳಾವವೂ ಇಲ್ಲವೆಂಬ ಅದ್ವೈತತತ್ವವು ಇಲ್ಲಿ ದೃಢವಾಗಿ ನಿರೂಪಿಸಲ್ಪಟ್ಟಿದೆ.ಅದ್ವೈತವನ್ನು ಅತ್ಯಂತ ಸ್ಪಷ್ಟವಾಗಿ ಇಂಥ ಪ್ರತಿಪಾದನೆಗಳು ಶುಕ್ಲಯಜುರ್ವೇದ ಸಂಹಿತೆಯಲ್ಲಿ ಶತಪಥ ಬ್ರಾಹ್ಮಣ. ಈಶಾವಾಸ್ಯಾದ್ಯುಪನಿಷತ್ತುಗಳಲ್ಲಿ ಸಾದ್ಯಂತ ಕಾಣಸಿಗುತ್ತದೆ. ಇನ್ನೊಂದು ಅಂಥ ಉದಾಹರಣೆ ಸಂಹಿತೆಯಲ್ಲಿದೆ.

“ಅಹಂ ಪರಸ್ತಾತ್, ಅಹಮವಸ್ತಾತ್, ಯದಂತರಿಕ್ಷಂ ತನುಮೇತಿ ನಾಸ” ಈ ಮಂತ್ರದ ದೃಷ್ಟಾರರಾದ ಭಗವಾನ್ ಯಾಜ್ಞಲ್ಕ್ಯರು ಸರ್ವಾತ್ಮಕ ವರ್ಣನೆಯನ್ನು ಸರ್ವಾತ್ಮಕ ಬ್ರಹ್ಮರೂಪತ್ವ ವರ್ಣನೆಯನ್ನು ತನ್ನನ್ನುಳಿದು ಬೇರೇನೂ ಇಲ್ಲವೆಂಬ ಘೋಷಣೆಯನ್ನು ಮಾಡಿದ್ದಾರೆ. ಅದಕ್ಕಾಗಿಯೇ ಅದ್ವೈತಾಚಾರ್ಯರುಗಳ ಪರಂಪರೆಯಲ್ಲಿ ಯಾಜ್ಞವಲ್ಕ್ಯರಿಗೆ ಮೂರ್ಧನ್ಯ ಸ್ಥಾನವಿದೆ.ಅವರ ಪರಂಪರೆಯು ಶಿಷ್ಯರುಗಳಾದ ಕಣ್ವ, ಮಾಧ್ಯಂದಿನರಿಂದಾಗಿ ಎರಡು ಶಾಖೆಗಳಲ್ಲಿ ಮುಂದುವರಿದಿದೆ.ಇನ್ನು ಬ್ರಹ್ಮ ಸೂತ್ರ ಭಾಷ್ಯದಲ್ಲಿ ಶ್ರೀಶಂಕರ ಭಗವತ್ಪಾದಾಚಾರ್ಯರು ತಮ್ಮ ತತ್ವ ಸಮರ್ಥನೆಗೆ ಭಗವಾನ್ ಯಾಜ್ಞವಲ್ಕ್ಯರ ಉಕ್ತಿಗಳನ್ನು ಹೆಜ್ಜೆ ಹೆಜ್ಜೆಗೆ ಉದ್ಧರಿಸಿದ್ದಾರೆ ಎಂಬುದು ಗಮನಾರ್ಹ.

ಬೃಹದಾರಣ್ಯಕೋಪನಿಷತ್ತಿನಲ್ಲಿಯ ಜ್ಯೋತಿ ಬ್ರಾಹ್ಮಣಕ್ಕೆ ಸುರೇಶ್ವರಾಚಾರ್ಯರು ತಮ್ಮ ವಾರ್ತಿಕದಲ್ಲಿ 1935ಶ್ಲೋಕಗಳನ್ನು ಸಾದ್ಯಂತವಾಗಿ ಬರೆದಿದ್ದಾರೆ. ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು ಆಚಾರ್ಯ ಆನಂದ ಗಿರಿಗಳು ಯಾಜ್ಞವಲ್ಕ್ಯರು ಗ್ರಂಥವನ್ನು ಗಣನೀಯವಾಗಿ ಉದ್ಧರಿಸಿದ್ದಾರೆ.

ಭಗವಾನ್ ಯಾಜ್ಞವಲ್ಕ್ಯರು ಕೇವಲ ಬ್ರಹ್ಮವಿದ್ಯಾ ಪ್ರವಚನಾದಿಗಳಿಂದ ಮಾತ್ರತೃಪ್ತರಾಗದೇ ಸಮಾಜದ ಹಿತ ರಕ್ಷಣೆಗಾಗಿ ಆಚಾರ ವ್ಯವಹಾರ ನಿರೂಪಣಾತ್ಮಕವೂ,ಪ್ರಾಯಶ್ಚಿತ ನಿರೂಪಣಾತ್ಮಕವೂ ಆದ ಸ್ಮೃತಿ ಗ್ರಂಥಗಳವೊಂದನ್ನು ರಚಿಸಿದ್ದಾರೆ. ಈ ಸ್ಮೃತಿಯು ಮನುಸ್ಮೃತಿಯಷ್ಟೆ ಮಹತ್ವ ಪಡೆದಿದೆ. ಇದಕ್ಕೆ ವಿಜ್ಞಾನೇಶ್ವರರು ಬರೆದ ಮಿತಾಕ್ಷರಾ ಎಂಬ ವ್ಯಾಖ್ಯಾನವು ಸುಪ್ರಸಿದ್ಧವಾಗಿದೆ.ಇದರಲ್ಲಿ ಆಚಾರಾಧ್ಯಾಯ, ವ್ಯವಹಾರಾಧ್ಯಾಯ ಪ್ರಾಯಶ್ಚಿತ್ತಾಧ್ಯಾಗಳೆಂದು ಮೂರು ಭಾಗಗಳಿವೆ. ಯಾಜ್ಞವಲ್ಕ್ಯರು ವೇದದಷ್ಟಾರರು, ಬ್ರಹ್ಮ ವಿದ್ವರಿಷ್ಠರು, ಸಮಾಜೋನ್ನತಿಯಲ್ಲಿ ಆಸಕ್ತರಾದ ಶ್ರೇಷ್ಠ ಸ್ಮೃತಿಕಾರರೂ, ಅವರ ಯಾಜ್ಞವಲ್ಕ್ಯಸ್ಮೃತಿ ಯಾಜ್ಞವಲ್ಕ್ಯ ಶಿಕ್ಷಾ, ಪ್ರತಿಜ್ಞಾ ಸೂತ್ರ, ಯೋಗ ಯಾಜ್ಞವಲ್ಕ್ಯ, ಶತಪಥ ಬ್ರಾಹ್ಮಣ ಗ್ರಂಥಗಳು ಬಹಳ ಪ್ರಸಿದ್ಧ ಅವರ ಚರಿತ್ರೆಯೇ ಶ್ರುತಿಯಾಗಿದೆ. ಅವರ ಮಾತುಗಳು ಅನು ಶಾಸನಗಳಾಗಿವೆ, ಅವರ ನಾಮವು ಮಂತ್ರವಾಗಿದೆ.

**ವಿಶೇಷ ವಿಷಯ**

ಇವರು ಮಹಾನ್ ಯೋಗ ಸಾಧಕರಾಗಿದ್ದು ಯೋಗದಿಂದ ಸೂರ್ಯನನ್ನು ಒಲಿಸಿಕೊಂಡು. ಅಶ್ವರೂಪಿ ಸೂರ್ಯನಿಂದ ಶುಕಯಜುರ್ವೇದವನ್ನು ಪ್ರಾಪ್ತಿಸಿಕೊಂಡರು ಅದು ಅಶ್ವರೂಪಿ ಸೂರ್ಯನಿಂದ ಪಡೆದುದಕ್ಕೆ ವಾಜಸನೇಯ ಮತ್ತು ಮಾಧ್ಯಂದಿನ ಎಂದು ಪ್ರಸಿದ್ಧವಾಯಿತು. ಆದ್ದರಿಂದ ಇವರಿಗೆ ಋಷಿ ಮುನಿವಲಯವು “ಯೋಗಿಶ್ವರಂ ಯಾಜ್ಞವಲ್ಕ್ಯ” ಎಂದು ಅವರನ್ನು ಹೊಗಳಿದೆ.



36

## ಕರ್ನಾಟಕದ ವೈಷ್ಣವ ಕ್ಷೇತ್ರಗಳು

# ಕೊಂಡಜ್ಜಿಯ ವರದರಾಜ ಸ್ವಾಮಿ ದೇವಾಲಯ



-ಕೆಂಗೇರಿ ಚಕ್ರಪಾಣಿ
94483 86886



ಹೊಯ್ಸಳರ ಪ್ರಬಲ ನೆಲೆಯಾದ ಹಾಸನ ಜಿಲ್ಲೆಯಲ್ಲಿ ಅವರು ನಿರ್ಮಿಸಿದ ಅನೇಕ ದೇವಾಲಯಗಳಿವೆ. ಹಳೇಬೀಡಿಗೆ ಸಮೀಪದಲ್ಲಿರುವ ಕೊಂಡಜ್ಜಿಯಲ್ಲಿ ಮನಮನಮೋಹಕವಾದ ವರದರಾಜ ಸ್ವಾಮಿಯ ದೇವಾಲಯವಿದೆ. ಹಾಸನ ಜಿಲ್ಲೆ ಅದೇ ತಾಲ್ಲೂಕಿನ ಕೊಂಡಜ್ಜಿಯು ಹಾಸನ-ಹಳೇಬೀಡು ರಸ್ತೆಯಲ್ಲಿ ಹಾಸನದಿಂದ ಸುಮಾರು 12ಕಿ.ಮೀ.ದೂರದಲ್ಲಿದೆ. ಆಧುನಿಕ ಜಗತ್ತಿನಿಂದ ದೂರವೇ ಉಳಿದಿರುವ ಕೊಂಡಜ್ಜಿಯಲ್ಲಿ ಕರ್ನಾಟಕದ ಅತ್ಯಂತ ಎತ್ತರದ ವರದರಾಜಸ್ವಾಮಿ ಅಥವಾ ಅಲ್ಲಾಳನಾಥ ಎಂದು ಕರೆಯುವ ಮೂರ್ತಿಯಿದೆ. ಹದಿಮೂರನೆಯ ಶತಮಾನದ ಹೊಯ್ಸಳರ ಕಾಲದ ಸುಮಾರು ಹದಿನೆಂಟು ಅಡಿ ಎತ್ತರದ ಅತ್ಯಂತ ಮನೋಹರವಾದ ವರದರಾಜ ಸ್ವಾಮಿಯನ್ನು ನೋಡಿದರೆ ಮನಸ್ಸು ಬಹಳ ಹಗುರವಾಗಿ ಒಂದು ಹೊಸ ಅನುಭವವನ್ನು ಕೊಡುವುದು ಖಚಿತ.

ಸುಮಾರು ಎರಡು ಅಡಿ ಎತ್ತರದ ಪೀಠದ ಮೇಲೆ ನಿಂತಿರುವ ವರದರಾಜಸ್ವಾಮಿಯು ಚಕ್ರ, ಶಂಖ,ಗದಾ, ಪದ್ಮಧಾರಿಯಾಗಿರುವನು, ಇದು ವಿಷ್ಣುವಿನ ಚತುರ್ವಿಂಶತಿಯಲ್ಲಿ ಬರುವ ಜನಾರ್ಧನನ ಲಕ್ಷಣವನ್ನು ಹೊಂದಿದೆ. ದೇವನು ಧರಿಸಿರುವ ಪ್ರತಿಯೊಂದು ಆಯುಧಗಳು ಅತೀ ಸೂಕ್ಷ್ಮಕೆತ್ತನೆಗಳಿಂದ ಕೂಡಿದ್ದು ಮನೋಜ್ಞವಾಗಿವೆ. ಕಿರೀಟ ಮಕುಟವನ್ನು ಧರಿಸಿರುವ ಸ್ವಾಮಿಯು ಹಸನ್ಮುಖನಾಗಿರುತ್ತಾನೆ. ಕಿರೀಟವು ಸಹಾ ಚಿತ್ತಾರದ ಅಲಂಕಾರದಿಂದ ಶೋಭಿತವಾಗಿದೆ. ದೇವನು ಧರಿಸಿರುವ ಕೇಯೂರ,ಭುಜಕೀರ್ತಿ, ಕಂಕಣ, ಕೌಸ್ತುಭ,ವೈಜಯಂತಿ,ಕರ್ಣಕುಂಡಲ, ಕಾಲುಂಗರ, ಉಪವೀತ ಎಲ್ಲವೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ಸೊಗಸಾಗಿವೆ. ಸ್ವಾಮಿಯು ಧರಿಸಿರುವ ಉಡುಗೆಯಲ್ಲಿಯೂ ಸಹಾ ಅಜ್ಞಾತ ಹೊಯ್ಸಳ ಶಿಲ್ಪಿಯು ತನ್ನ ಪ್ರೌಢಿಮೆಯನ್ನು ಮೆರೆದಿದ್ದಾನೆ. ಗಂಟು ಹಾಕಿ ಇಳಿ ಬಿಟ್ಟಂತೆ ವಸ್ತ್ರವನ್ನು ಸಹಾ ಬಿಡಿಸಿರುವುದು ಸೋಜಿಗವೆನಿಸುತ್ತದೆ. ವರದರಾಜಸ್ವಾಮಿ ಹಿಂಬದಿಯೂ ಸಹಾ ಅದೇ ರೀತಿ ಅಲಂಕೃತವಾಗಿದೆ. ಶಿರದಲ್ಲಿ ಹಿಂದೆ ಜಡೆಯೂ ಬಿಡಿಸಿದ್ದು,



ದೇವನು ಮೋಹಿನಿಯ ರೂಪದಲ್ಲಿ ಇರುವುದು ವಿಶೇಷ ಅಲ್ಲದೆ ಸ್ವಾಮಿಯ ವಕ್ಷಸ್ಥಳದಲ್ಲಿ ಶ್ರೀ ಲಕ್ಷ್ಮಿಯು ನೆಲೆಸಿರುವಳು. ಒಟ್ಟಿನಲ್ಲಿ ಇಂತಹ ಸುಂದರಮೂರ್ತಿಯನ್ನು ವರ್ಣಿಸಲು ಯಾವ ಪದಗಳೂ ಸಾಲವು ನೋಡಿಯೇ ಅನುಭವಿಸಬೇಕು.



ಕೊಂಡಜ್ಜಿಯ ವರದರಾಜನ ಬಗ್ಗೆ ಇರುವ ಐತಿಹ್ಯದ ಪ್ರಕಾರ ಇದು ಬೇಲೂರಿನ ಚನ್ನಕೇಶವನ ದೇವಾಲಯದಲ್ಲಿ ಪ್ರತಿಷ್ಠಾಪಿಸಲೂ ಇಲ್ಲಿ ನಿರ್ಮಿಸಲಾಯಿತಂತೆ ಆದರೆ ಮೂರ್ತಿಯ ಎತ್ತರವು ಚನ್ನಕೇಶವನ ದೇವಾಲಯದ ಗರ್ಭಗುಡಿಗಿಂತ ಎತ್ತರವಾಗಿದ್ದರಿಂದ ಬೇಲೂರಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಲಿಲ್ಲ.

ಅಜ್ಜಿಯೊಬ್ಬಳು ವರದರಾಜಸ್ವಾಮಿಯನ್ನು ಕೊಂಡು ಇಲ್ಲಿ ಪ್ರತಿಷ್ಠಾಪಿಸಿದಳಂತೆ ಹಾಗಾಗಿ ಅಜ್ಜಿಕೊಂಡದರಿಂದ ಈ ಗ್ರಾಮಕ್ಕೆ ಕೊಂಡಜ್ಜಿಯೆಂದು ಹೆಸರಾಯಿತೆಂದು ನಂಬಲಾಗಿದೆ.

ದೇವಾಲಯದ ವಿಗ್ರಹವನ್ನು ಒಳಗೊಂಡ ಗರ್ಭಗುಡಿಯು ಹೊಯ್ಸಳ ಶೈಲಿಯಲ್ಲಿಯೇ ಇದೆ. ನಂತರ ಭಾಗಗಳು ಇತ್ತೀಚಿನ ಸೇರ್ಪಡೆಯಾಗಿದೆ.

**ಹೀಗೆ ಬನ್ನಿ :**

ಕೊಂಡಜ್ಜಿಯು ಹಾಸನ - ಹಳೇಬೀಡು ರಸ್ತೆಯಲ್ಲಿದೆ. ಹಾಸನದಿಂದ ಹಳೇಬೀಡು ಕಡೆಗೆ ಬಂದರೆ ಸಾಲಿಗಾಮೆ ಯೆಂಬ ಗ್ರಾಮಸಿಗುತ್ತದೆ. ಈ ಗ್ರಾಮದಿಂದ ಐದು ಕಿ.ಮೀ. ದೂರದಲ್ಲಿ ಎಡಕ್ಕೆ "ಕೊಂಡಜ್ಜಿಯ ವರದರಾಜ ದೇವಾಲಯಕ್ಕೆ ದಾರಿ" ಎಂಬ ನಾಮ ಫಲಕ ಕಾಣಸಿಗುತ್ತದೆ. ಅಲ್ಲಿ ಎಡಕ್ಕೆ ತಿರುಗಿ ಸುಮಾರು ಮೂರು ಕಿ.ಮೀ.ನಷ್ಟು ಸಾಗಿ ಕೊಂಡಜ್ಜಿಯನ್ನು ಸೇರಬಹುದು, ಕೊಂಜ್ಜಿಯ ವರದರಾಜಸ್ವಾಮಿಯನ್ನು ದರ್ಶಿಸಿ ನಂತರ ಅಡಗೂರು ಮಾರ್ಗವಾಗಿ ಹಳೇಬೀಡನ್ನು ಸೇರಬಹುದು, ಅಡಗೂರಿನಲ್ಲಿಯೂ ಸುಂದರವಾದ ಹೊಯ್ಸಳರ ಕಾಲದ ಲಕ್ಷ್ಮಿನಾರಾಯಣ ದೇವಾಲಯವಿದೆ.



# ತಪತೀ

– ಡಾ॥ ವಾಣಿಶ್ರೀ ಬಿ.ಎಂ
94803 22475

ಮಹಾಭಾರತವು ನಡೆದ ವೃತ್ತಾಂತವಾಗಿದ್ದು ಇತಿಹಾಸವೆನಿಸಿದೆ. ನವರಸಗಳಿಂದ ತುಂಬಿರುವುದರಿಂದ ಮಹಾಕಾವ್ಯಾವಾಗಿದೆ. ಪಂಚಮ ವೇದವೆಂದು ಹೆಸರಾಗಿ ವೇದಗಳ ಅರ್ಥವನ್ನು ಧ್ವನಿಸುವುದರಿಂದ ಸ್ಮೃತಿ ಎನಿಸಿದೆ. ಧರ್ಮಶಾಸ್ತ್ರ , ಅರ್ಥಶಾಸ್ತ್ರ ಮೊದಲಾದ ವಿಚಾರಗಳನ್ನು ಇದು ತಿಳಿಸುತ್ತದೆ. ಮೋಕ್ಷಧರ್ಮವನ್ನು ತಿಳಿಸುವುದರಿಂದ ಮೋಕ್ಷ ಶಾಸ್ತ್ರವೂ ಆಗಿದೆ. ಇದರಲ್ಲಿ ಬರುವ ಹಲವಾರು ಸ್ತ್ರೀ ಪಾತ್ರಗಳು ಸಾಮಾನ್ಯ ಜನರಿಗೆ ಅಪರಿಚಿತವಾಗಿದೆ. ಅಂತಹ ಒಂದು ಪಾತ್ರ 'ತಪತೀ' ಮಹಾಭಾರತದ ಆದಿ ಪರ್ವದಲ್ಲಿ ಈಕೆಯ ಉಲ್ಲೇಖವು ದೊರೆಯುತ್ತದೆ.

ಪಾಂಡವರು ಪಾಂಚಾಲದೇಶಕ್ಕೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಗಂಗಾತೀರಕ್ಕೆ ಬಂದಾಗ ಅಲ್ಲಿ ಅಂಗಾರಪರ್ಣ (ಚಿತ್ರರಥ) ನೆಂಬ ಗಂಧರ್ವನು ಪತ್ನಿಯೊಡನೆ ಜಲಕ್ರೀಡೆಯಾಡುತ್ತಿದ್ದನು. ಅವರು ಪಾಂಡವರು ಎಂದು ತಿಳಿಯದೆ ನಿಂದಿಸಿ. ಅರ್ಜುನನೊಡನೆ ಯುದ್ಧ ಮಾಡಿ ಪರಾಜಿತನಾದನು. ಅಂಗಾರ ಪರ್ಣನು ಮಾಯಾಯುದ್ಧ ಚಾಕ್ಷುಷೀ ವಿದ್ಯೆಯನ್ನು ಅರ್ಜುನನಿಗೆ ಉಪದೇಶಿಸಿದನು. ಅವರ ನಡುವೆ ನಡೆದ ಸಂಭಾಷಣೆಯ ನಡುವೆ ಅರ್ಜುನನ್ನು 'ತಾಪತ್ಯ' ಎಂದು ಸಂಬೋಧಿಸಿದನು. ಅರ್ಜುನನು ಅದರ ಉದ್ದೇಶವನ್ನು ಕೇಳಿದಾಗ ಅಂಗಾರಪರ್ಣನು ತಪತಿಯ ವಿಚಾರವನ್ನು ಅರ್ಜುನನಿಗೆ ತಿಳಿಸಿದನು.

ತಪತಿಯು ಜಗಚ್ಚಕ್ಷುವಾದ, ತನ್ನ ಪ್ರಕಾಶದಿಂದ ಜಗತ್ತನ್ನೇ ಬೆಳಗುವ ವಿವಸ್ವಂತನ ಪುತ್ರಿ. ಸಾವಿತ್ರಿಯ ತಂಗಿ. ತಪತಿಯು ಯಾವಾಗಲೂ ತಪಸ್ಸಿನಲ್ಲಿ ನಿರತಳಾಗಿದ್ದರಿಂದ ತಪತಿ ಎಂದು ಮೂರು ಲೋಕಗಳಲ್ಲಿ ಹೆಸರಾದಳು. ಅನುಪಮ ಸೌಂದರ್ಯವತಿಯಾಗಿದ್ದಳು. ಸರ್ವಾಂಗ ಸುಂದರಿಯಾದ ಅವಳಲ್ಲಿ ಯಾವ ದೋಷವೂ ಇರಲಿಲ್ಲ.ವಿದ್ಯಾವತಿಯೂ,ಬುದ್ಧಿವಂತೆಯೂ, ಆಚಾರ ಶೀಲಳೂ, ಸಾಧು ಸ್ವಭಾವದವಳೂ ಆದ ತಪತಿ ಮನೋಹರವಾಗಿ ಸಿಂಗರಿಸಿಕೊಳ್ಳುತ್ತಿದ್ದಳು.ಇಂತಹ ತನ್ನ ಪುತ್ರಿಗೆ ಅನುರೂಪವಾದ ವರ ಸಿಗಲಾರನೆಂದು ಸೂರ್ಯನು ಚಿಂತೆಗೊಳಗಾದನು, ಮನಸ್ಸಿಗೆ ಶಾಂತಿ ಇಲ್ಲವಾಯಿತು.

ಅದೇ ಸಮಯದಲ್ಲಿ ಕುರುಕುಲ ಶ್ರೇಷ್ಠನಾದ ಋಕ್ಷಪುತ್ರ ಸಂವರಣನು ಸೂರ್ಯನ ಅನುಗ್ರಹಕ್ಕಾಗಿ ವ್ರತ, ನಿಯಮ, ಉಪವಾಸ, ಪೂಜಾದಿಗಳಿಂದ ಸೂರ್ಯನನ್ನು ಆರಾಧಿಸುತ್ತಿದ್ದನು. ಅಹಂಕಾರ ರಹಿತನಾಗಿ, ಧರ್ಮಜ್ಞನಾಗಿ ಅತಿ ಸುಂದರವಾಗಿ, ಸೌಶೀಲ್ಯ ಗುಣಗಳಿಂದ ಕೂಡಿದ ಸಂವರಣನೇ ತನ್ನ ಪುತ್ರಿಗೆ ಸರಿಯಾದ ವರನೆಂದು ನಿಶ್ಚಯಿಸಿದನು. ಸರ್ವಗುಣ ಸಂಪನ್ನನಾಗಿ, ಚಂದ್ರನಂತೆ ಆಹ್ಲಾದವೀಯುತ್ತ ಸೂರ್ಯನ ತೇಜಸ್ಸಿಗೆ ಸಮನಾಗಿದ್ದ ಸಂವರಣ ತನಗೆ ತಕ್ಕ ಅಳಿಯನೆಂದು ನಿಶ್ಚಯಿಸಿದನು.

ಒಮ್ಮೆ ಬೇಟೆಗಾಗಿ ಹೋದ ಸಂವರಣನು ತ್ರಿಲೋಕ ಸುಂದರಿಯಾದ ಯುವತಿಯೊಬ್ಬಳನ್ನು ದರ್ಶಿಸಿದನು. ಆಕೆಯ ಸೌಂದರ್ಯವನ್ನು ಕಂಡು ಆಕೆ ಶ್ರೀಲಕ್ಷ್ಮೀಯೇ ಇರಬಹುದೆಂದು ಭ್ರಮಿಸಿದನು. ಅವಳ ತೇಜಸ್ಸು ಯಜ್ಞೇಶ್ವರನ ಜ್ವಾಲೆಗೆ ಸಮವಾಗಿತ್ತು. ಶರೀರವು ಚಂದ್ರನ ಕಾಂತಿಯನ್ನು ಅನುಕರಿಸುತ್ತಿತ್ತು. ಸ್ವರ್ಣ ಪುತ್ಥಳಿಯಂತೆ ಆ ಕಾಮಿನಿಯು ಶೋಭಿಸುತ್ತಿದ್ದಳು. ಅವಳ ದರ್ಶನ ಮಾತ್ರದಿಂದ ಬಹುವಾಗಿ ಆಕರ್ಷಿತನಾದ ಸಂವರಣನು ಅವಳನ್ನು ಮಾತನಾಡಿಸಿ ತನ್ನ ಮನೋಭಿಲಾಷೆಯನ್ನು ಅವಳನ್ನು ಹೊಂದುವ ಬಯಕೆಯನ್ನು ಅವಳೆದುರು ಹೇಳಿಕೊಂಡನು. ವರಾಂಗನೆ ತಪತಿಯು ತಕ್ಷಣ ಮಾಯವಾಗಿ ಬಿಟ್ಟಳು. ಕಮಲ ನೇತ್ರೆಯಾದ ಅವಳನ್ನು ಅರಸುತ್ತಾ ರಾಜನು ಹುಚ್ಚನಂತೆ ಅಲೆಯುತ್ತಾ ಬಲಹೀನನಾಗಿ ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟನು. ಆಗ ತಪತಿಯು ಅವನ ಮುಂದೆ ಪ್ರತ್ಯಕ್ಷಳಾಗಿ ರಾಜನನ್ನು ಸುಮಧುರವಾದ ಮಾತುಗಳಿಂದ ಸಂವರಣನೊಂದಿಗೆ ಸಂಭಾಷಿಸಿದಳು. "ಅಖಂಡ ಭೂಮಂಡಲದಲ್ಲಿ ಮಹಾಪರಾಕ್ರಮಿಯೆಂದೂ, ಧರ್ಮಾತ್ಮನೆಂದೂ ಖ್ಯಾತಿ ಹೊಂದಿರುವ ನೀನು ಈ ರೀತಿಯಲ್ಲಿ ಕಾಮ ಮೋಹಿತನಾಗಿರುವುದು ಸರ್ವಥಾ ಯೋಗ್ಯವಲ್ಲ'' ಎಂದಳು . ಸಂವರಣನು ಮತ್ತೆ ಅವಳೆಲ್ಲಿ ಅದೃಶ್ಯಳಾಗುವಳೋ ಎಂಬ ಭಯದಿಂದಲೇ ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿಸತೊಡಗಿದನು. ಸಂವರಣನ ಪ್ರಿಯವಾದ ಮಾತುಗಳನ್ನು ಕೇಳಿದ ತಪತಿ ಧರ್ಮ ಸಮ್ಮತವಾದ ಮಾತುಗಳನ್ನು ಆಡಿದಳು.

ನಾಹಮೀಶಾತ್ಮನೋ ರಾಜನ್ಕನ್ಯಾ ಪಿತೃಮತೀ ಹ್ಯಹಮ್ ।
ಮಯಿ ಚೇದಸ್ತಿ ತೇ ಪ್ರೀತಿರ್ಯಾಚಸ್ವ ಪಿತರಂ ಮಮ ॥

ಗಾಂಧರ್ವರೀತ್ಯಾ ವಿವಾಹವಾಗೋಣ ಎಂದು ಸಂವರಣನು ಹೇಳಿದಾಗ ತನ್ನ ಆತ್ಮಕ್ಕೆ ಶರೀರಕ್ಕೆ ತಾನು ಒಡತಿಯಲ್ಲ. ಕನ್ಯೆಯಾಗಿರುವುದರಿಂದ ತಂದೆಗೆ ಅಧೀನಳು. ತನ್ನಲ್ಲಿ ಸಂವರಣನಿಗೆ ನಿಜವಾದ ಪ್ರೀತಿ ಇದ್ದರೆ ತಂದೆಯಾದ ಸೂರ್ಯ ದೇವನನ್ನೇ ಪ್ರಾರ್ಥಿಸಲು ಹೇಳಿದಳು. ತನಗೂ ಮೊದಲ ನೋಟದಲ್ಲಿಯೇ ಸಂವರಣನ ಮೇಲೆ ಮನಸಾಗಿರುವುದಾಗಿ ಹೇಳಿ ತನ್ನ ತಂದೆ ಸುಪ್ರೀತನಾಗಿ ವಿವಾಹ ಮಾಡಿದರೆ ನಿಶ್ಚಯವಾಗಿಯೂ ವಿಧೇಯಳಾದ ಪತ್ನಿಯಾಗುವೆನೆಂದು ಸ್ತ್ರೀಯರಿಗೆ ಉಚಿತವಾದ ಮಾತುಗಳನ್ನೇ ಆಡಿದಳು.


ರಾಜನು ರಾಜಧಾನಿಗೆ ಹಿಂದಿರುಗಿ ಸೂರ್ಯೋಪಾಸನೆಗೆ ತೊಡಗಿದನು. ತಪೋಧನರೂ ಜಿತೇಂದ್ರಿಯರೂ ಆದ ಗುರು ವಸಿಷ್ಠರನ್ನು ಸ್ಮರಿಸಿದನು. ಶಿಷ್ಯನಾದ ಸಂವರಣನ ಮನಸ್ಸಿನ ಅಭಿಲಾಷೆಯನ್ನು ಅರಿತ ವಸಿಷ್ಠರು ಸೂರ್ಯನ ಬಳಿ ತೆರಳಿ ಕನ್ಯಾಪೇಕ್ಷೆಯನ್ನು ವ್ಯಕ್ತಪಡಿಸಿದರು. ಭಾನುಮಂತನು ಅತ್ಯಂತ ಆನಂದದಿಂದ ಮಗಳಿಗೆ ಅನುರೂಪನಾದ ವರನನ್ನು ಹುಡುಕಿ ಕೊಟ್ಟಿದ್ದಕ್ಕೆ ವಸಿಷ್ಠರನ್ನು ಅಭಿನಂದಿಸುತ್ತಾ ಸ್ತ್ರೀಕುಲ ಶ್ರೇಷ್ಠಳಾದ, ಸರ್ವಾಲಂಕಾರ ಭೂಷಿತೆಯಾದ ತಪತಿಯನ್ನು ತಾನೇ ಸ್ವತಃ ಕರೆತಂದು ವಸಿಷ್ಠರಿಗೆ ಒಪ್ಪಿಸಿದನು. ತಪತಿಯನ್ನು ಸಂವರಣನಿಗಾಗಿ ವಸಿಷ್ಠರು ಪರಮ ಸಂತೋಷದಿಂದ ಸ್ವೀಕರಿಸಿದರು.

ತಪತಿಯೊಡನೆ ವಿವಾಹವಾದ ನಂತರ ಸಂವರಣನು ಗುರುಗಳ ಅನುಜ್ಞೆ ಪಡೆದು ತಾನು ತಪತಿಯೊಂದಿಗೆ ವಿಹಾರಕ್ಕೆ ಹೊರಟು ಹೋದನು. ರಾಜ್ಯಭಾರವನ್ನು ಅಮಾತ್ಯನಿಗೆ ಒಪ್ಪಿಸಿ 12 ವರ್ಷಗಳ ಕಾಲ ಯಜ್ಞ ಯಾಗಾದಿಗಳಿಲ್ಲದೆ ರಾಜ್ಯವು ಬರ, ಭೂತ ಪ್ರೇತಗಳಿಂದ ಕೂಡಿ ದುರವಸ್ಥೆಗೆ ತಲುಪಿತು. ಸಂವರಣನು ತಪತಿಯೊಡನೆ ತನ್ನ ರಾಜಧಾನಿಗೆ ಒಂದೊಡನೆ ಮಳೆಯಾಗಿ ಪ್ರಜಾಕೋಟಿಗೆ ಆಹ್ಲಾದ ಉಂಟಾಯಿತು.ಸಂವರಣ ತಪತಿಯರು 12 ವರ್ಷಗಳ ಕಾಲ ಯಜ್ಞಯಾಗಾದಿಗಳನ್ನು ಮಾಡಿ ರಾಜ್ಯವು ಸುಭಿಕ್ಷವಾಯಿತು.

ತಪತಿ ಸಂವರಣರ ಮಗ ಕುರುರಾಜನಿಂದ ಅರ್ಜುನನು ಕೌರವನೆಂದಾಯಿತು. ಹಾಗೆಯೇ ತಪತಿಯಿಂದ ತಾಪತ್ಯನೆಂದಾಯಿತು ಎಂದು ಹೇಳಿ ತಪತಿಯ ವೃತ್ತಾಂತವನ್ನು ಅಂಗಾರಪರ್ಣನು ತಿಳಿಸಿದನು.

# ಪ್ರಹ್ಲಾದ ರಾಜರ ನ್ಯಾಯ ನಿಷ್ಠೂರತೆ

– ಧೀರೇಂದ್ರ ನಾಗರಹಳ್ಳಿ
98458 91228





ಹರಿ ನಾಮ ಸ್ಮರಣೆಯಲ್ಲಿ ಅನುಗಾಲವೂ ಕಳೆಯುವ ಎನ್ನುವ ಒಂದೇ ಕಾರಣಕ್ಕೆ ಬಾಲಕ ಪ್ರಹ್ಲಾದನನ್ನು ತಂದೆ ಹಿರಣ್ಯಕಶಿಪು ಏನೇನೂ ತಂತ್ರಗಳನ್ನು ಹೂಡಿ ಸಾಯಿಸಲು ಪ್ರಯತ್ನಿಸಿದರೂ ಯಾವುದು ಸಫಲವಾಗಲಿಲ್ಲ. ಪ್ರತಿಕ್ಷಣವೂ ಹೆಜ್ಜೆ ಹೆಜ್ಜೆಗೂ ಪ್ರಹ್ಲಾದನನ್ನು ಅಕ್ಷರಶಃ ಮಡಿಲಲ್ಲಿ ಹಾಕಿಕೊಂಡು ಕಾಪಾಡಿದ್ದು, ಅದೇ ಹರಿ!! ಪ್ರಹ್ಲಾದನನ್ನು ನೆನದಾಗಲೊಮ್ಮೆ ನಮಗೆ ಪ್ರಹ್ಲಾದನ ಮುಗ್ಧ ವ್ಯಕ್ತಿತ್ವವೆ ಕಣ್ಣ ಮುಂದೆ ಬರುತ್ತದೆ. ಇಂತಹ ಬಾಲಕ ಮುಂದೆ ನ್ಯಾಯ ನಿಷ್ಠೂರತೆಯನ್ನು ಮರೆದಿದ್ದ ಎಂದರೆ ನಂಬಲಾಗುವುದೆ? ಹೌದು ಅದಕ್ಕೆ ನಿದರ್ಶನವೇ ಈ ಮುಂದಿನ ಕಥೆ.ನರಸಿಂಹ ರೂಪದಲ್ಲಿದ್ದ ಭಗವಂತ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ನಂತರ ಪ್ರಹ್ಲಾದನನ್ನು ಪಟ್ಟದಲ್ಲಿ ಕುಳ್ಳಿರಿಸಿದನು. ನ್ಯಾಯ - ಸತ್ಯ ಮತ್ತು ಧರ್ಮದ ಆಧಾರದ ಮೇಲೆಯ ಪ್ರಹ್ಲಾದರ ರಾಜರು ರಾಜ್ಯ ಭಾರ ಮಾಡಲು ಶುರು ಮಾಡಿದರು. ಮುಂದಿನ ದಿನಗಳಲ್ಲಿ ಪ್ರಹ್ಲಾದ ರಾಜರು ಮತ್ತು ಧ್ರಿತಿ ದಂಪತಿಯರಿಗೆ - ಆಯುಷ್ಕಾಮ, ಶಿಬಿ, ಭಾಷ್ಕಲ ಹಾಗೂ ವಿರೋಚನ ಎನ್ನುವ ನಾಲ್ಕು ಪುತ್ರ ರತ್ನರು ಜನಿಸಿದರು. ಮಹಾರಾಜರ ನಾಲ್ಕು ಪುತ್ರರು ಶಾಸ್ತ್ರಾಭ್ಯಾಸವನ್ನು ಮಾಡಿ ಸದಾ ಸನ್ಮಾರ್ಗದಲ್ಲಿ ನಡೆಯುವಂತಾಗಲು ಗುರುಕುಲದಲ್ಲಿ ಶಿಕ್ಷಣದ ವ್ಯವಸ್ಥೆಯುಯಾಯಿತು. ಸೂಕ್ಷ್ಮಮತಿಗಳಾಗಿದ್ದ ನಾಲ್ಕು ಯುವರಾಜರು ಗುರುಗಳು ಹೇಳುವುದನ್ನು ಗ್ರಹಿಸುತ್ತಾ ಎಲ್ಲಾ ವಿಷಯಗಳಲ್ಲಿ ಚೆನ್ನಾಗಿಯೆ ಪರಿಣಿತಿಯನ್ನು ಪಡೆದರು. ಆದರೆ ಪ್ರಹ್ಲಾದ ರಾಜರ ನಾಲ್ಕು ಮಕ್ಕಳಲ್ಲಿ, ವಿರೋಚನನಿಗೆ ಮಾತ್ರ ತಾನು ರಾಜ ಪುತ್ರನೆನ್ನುವ ಸ್ವಲ್ಪ ಅಹಂಕಾರಿವಿತ್ತು.

ಒಮ್ಮೆ ಗುರುಕುಲದಲ್ಲಿ ಗುರುಪುತ್ರನಾದ ಸುಮತಿಯೊಂದಿಗೆ ಲೋಕಾಭಿರಾಮವಾಗಿ ಸಂಭಾಷಣೆಯಲ್ಲಿರುವಾಗ ವಿರೋಚನನು ರಾಜಪುತ್ರರಾದ ನಾವೇ ಶ್ರೇಷ್ಠರು ಎಂದು ಹೇಳಿದನು. ಇದಕ್ಕೆ ಪ್ರತಿಯಾಗಿ ಸುಮತಿಯು ಶಾಸ್ತ್ರ ಜ್ಞಾನವನ್ನು ಪಡೆದು ಎಲ್ಲರಿಗೂ ಸೌಖ್ಯವನ್ನು ಬಯಸುತ್ತಲೆ ಪ್ರಜೆಗಳನ್ನು ಸನ್ನಡೆತೆಯಲ್ಲಿ ನಡೆಯುವಂತೆ ಮಾಡುವ ಬ್ರಾಹ್ಮಣನೇ ಶ್ರೇಷ್ಠ ಎಂದು ಹೇಳುತ್ತಾನೆ. ಸುಮತಿ ಮತ್ತು ವಿರೋಚನರ ಈ ಮಾತು ಮುಂದೆ ವಾಗ್ವಾದಕ್ಕೆ ತಿರುಗಿತು. ಯಾವ ಪ್ರಮಾಣವನ್ನು ಕೊಟ್ಟರು ವಿರೋಚನ ತನ್ನ ಅಭಿಪ್ರಾಯವನ್ನು ಬದಲಿಸಲೇ ಇಲ್ಲ, ತಾನು ಹೇಳಿದ್ದೆ ಸತ್ಯ ಮತ್ತು ಅದೇ ಕೊನೆಯ ಮಾತು ಎಂದು ಹೇಳಿದನು. ಸುಮತಿಯು ಕೊನೆಯ ಪ್ರಯತ್ನವೆನ್ನುವಂತೆ ವಿರೋಚನ ನಿನ್ನ ಈ ಅಭಿಪ್ರಾಯ ತಪ್ಪು ಜಗತ್ತಿನಲ್ಲಿ ಸದಾಕಾಲ ಸರ್ವರಿಗೂ ಒಳಿತನ್ನು ಬಯಸಿ ಎಲ್ಲರೂ ಸನ್ನಡತೆಯಲ್ಲಿ ನಡೆಯುವುದಕ್ಕೆ ಪ್ರೇರೇಪಿಸುವ ಬ್ರಾಹ್ಮಣನೇ ಶ್ರೇಷ್ಠ ವ್ಯಕ್ತಿ ಎಂದು ಮತ್ತೊಮ್ಮೆ ಹೇಳಿದನು. ವಿರೋಚನನು ಸುಮತಿಯ ಈ ಮಾತಿನಿಂದ ಒಳಗೊಳಗೆ ಕುದ್ದು ಹೋದನು ಸುಮತಿಯ ಈ ಮಾತು ವಿರೋಚನನ ಆತ್ಮಾಭಿಮಾನವನ್ನು ಕೆರಳಿಸಿತ್ತು. ವಿರೋಚನನು ಕೃದ್ಧನಾಗಿ ಯಾರು ಶ್ರೇಷ್ಠರು ಎನ್ನುವುದು ತನ್ನ ತಂದೆಯಾದ ಮಹಾರಾಜ ಪ್ರಹ್ಲಾದ ರಾಜರ ಸಮ್ಮುಖದಲ್ಲೇ ತಿರ್ಮಾನ ವಾಗಬೇಕು ಎಂದು ಹೇಳಿದನು. ಅಷ್ಟೇ ಅಲ್ಲದೆ ಯಾರ ಪರವಾಗಿ ತೀರ್ಪು ಬರುತ್ತದೆಯೋ ಅವರಿಗೆ ವಾದದಲ್ಲಿ ಸೋತವರು ಅಕ್ಷರಶಃ ತಲೆ ದಂಡವನ್ನು ಕೊಡಬೇಕು ಎನ್ನುವ ಭಯಾನಕವಾದ ಒಪ್ಪಂದವನ್ನು ಮಂಡಿಸಿದನು. ವಿರೋಚನನ ಈ ಒಂದು ಭಯಾನಕವಾದ ಒಪ್ಪಂದವು ಸುಮತಿಯನ್ನು ಒಂದೀಷ್ಟು ವಿಚಲಿತನನ್ನಾಗಿ ಮಾಡಲಿಲ್ಲ ಕಾರಣ ಸುಮತಿಯ ಅಭಿಪ್ರಾಯದಲ್ಲಿ ಅಣು ವಷ್ಟೂ ಲೋಪವಿರಲಿಲ್ಲ.ಕೊನೆಗೆ ವಿರೋಚನ ಮತ್ತು ಸುಮತಿಯರ ಈ ವಾಗ್ವದ ಪ್ರಕರಣವು ಮಹಾರಾಜ ಪ್ರಹ್ಲಾದರಾಜರ ಮುಂದೆ ಬಂದು ನಿಂತಿತು!

ಪ್ರಹ್ಲಾದರಾಜರು ಈ ಪ್ರಕರಣದ ಹಿನ್ನೆಲೆ ಮತ್ತು ವಾಗ್ವಾದದ ಸೋಲು = ಗೆಲುವಿಗಿರುವ ಭಯಾನಕವಾದ ತಲೆ ದಂಡದ ಕರಾರು ಎಲ್ಲವನ್ನುತಿಳಿದುಕೊಂಡರು ಒಂದರೆಡು ಕ್ಷಣವೂ ಯೋಚಿಸದೆ ಜಗತ್ತಿನಲ್ಲಿ ಶ್ರೇಷ್ಠತೆ ಎನ್ನುವುದು ಹಣ, ಅಧಿಕಾರ,ಸಿರಿ ಸಂಪತ್ತು ರಾಜ - ವೈಭೋಗಗಳಿಂದ ಬರುವುದಿಲ್ಲ.ಇವೆಲ್ಲವೂ ಜನರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಮತ್ತು ಲೋಕಹಿತಕ್ಕಾಗಿ ಸದಾ ಮಿಡಿಯುವ ಬ್ರಾಹ್ಮಣನೇ ಶ್ರೇಷ್ಠ ವ್ಯಕ್ತಿ ಎನ್ನುವುದನ್ನು ಪ್ರಮಾಣ ಸಮೇತ ವಿವರಿಸಿದರು. ಪ್ರಹ್ಲಾದ ರಾಜರು ತಮ್ಮ ಅಭಿಪ್ರಾಯವನ್ನು ತಿಳಿಸಿಯಾದ ಮೇಲೆ ಯಾವ ಮಮಕಾರವನ್ನು ತೋರದೆ ಒಪ್ಪಂದದ ಪ್ರಕಾರ ವಿರೋಚನನ ತಲೆಯನ್ನು ತೆಗೆಯಲು ಸುಮತಿಗೆ ಹೇಳಿದರು. ಆದರೆ ಸುಮತಿಯು ನಾವು ವಿಪ್ರರು ಹೀಗೆ ತಲೆಯನ್ನು ತೆಗೆಯುವ ಕೆಲಸವನ್ನು ಮಾಡುವುದಿಲ್ಲ ಕ್ಷಮಾಗುಣವೇ ನಮಗೆ ಸಾಧು ಎಂದು ಹೇಳುತ್ತಾನೆ.

ಈ ಘಟನೆಯನ್ನು ಗಮನಿಸಿ, ನಮಗೆ ಪ್ರಹ್ಲಾದ ರಾಜರೆಂದರೆ ಭಗವಂತನ ನಾಮವನ್ನು ಜಪಿಸಿದ್ದರಿಂದಲೇ ಸಾಕಷ್ಟು ತೊಂದರೆಗಳನ್ನು ಅನುಭವಿಸಿದ ಮುಗ್ಧ ಬಾಲಕನೆ ಕಣ್ಣ ಮುಂದೆ ಬರುತ್ತದೆ.

ಆದರೆ ಪ್ರಹ್ಲಾದ ರಾಜರ ನ್ಯಾಯ ತೀರ್ಮಾನ ಮತ್ತು ಯಾವ ವಿಕಾರಗಳನ್ನು ಪ್ರದರ್ಶಿಸದೆ ಪ್ರಾಂಜಲ ಮನಸ್ಸಿನಿಂದ ಎಲ್ಲವನ್ನು ನೋಡುವ ವ್ಯಕ್ತಿತ್ವ ಅರ್ಥವಾಗುತ್ತದೆ. ಅದಕ್ಕೆ ಹೇಳಿದ್ದು ''ಪ್ರಹ್ಲಾದೋ ವೈ ಕಾಯಾಧವಃ ಸ್ವಪುತ್ರಂ ವಿರೋಚನಂ ಅಪನ್ಯದತ್ತ''



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

ದಿ॥ ಬಿ.ಎಸ್. ಶ್ರೀನಿವಾಸನ್

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

ಹೈಂದವ ಧರ್ಮಕ್ಕೆ ಈ ರೀತಿಯ ಸೇವೆಯನ್ನು ಸಲ್ಲಿಸಿದ್ದೇ ಅಲ್ಲದೆ ಅಚ್ಯುತರಾಯನು ತನ್ನ ರಾಜಧಾನಿ ಯಾದ ವಿಜಯ ನಗರದಿಂದ ಸ್ವಾಮಿಯ ಸೇವೆಯನ್ನು ಮಾಡಲು ನರ್ತಕಿಯರನ್ನು ಕಳುಹಿಸಿ,ಅವರು ಆಲಯ ದಿಂದ ದೊರೆಯುವ ಪ್ರಸಾದಗಳಿಂದ ಜೀವನವನ್ನು ನಡೆಸುವಂತೆ ಏರ್ಪಾಡು ಮಾಡಿದ.

-ಹೀಗೆ ಅಚ್ಯುತರಾಯನಿಂದ ಶಕ 1453 ರ ಖರ ಸಂವತ್ಸರದಲ್ಲಿ (ಕ್ರಿ,ಶ,6-6-1531) ಕಳುಹಿಸಲ್ಪಟ್ಟ ವರಲ್ಲಿ ವಿದ್ವತ್ ಸಭಾ ರಾಯರಂಜಕ ಬಿರುದಾಂಕಿತ ಶ್ರೀರಂಗ ರಾಜನ ಮಗಳು ಕುಪ್ಪಾಯಿಯ ಮಗಳು ಮುದ್ದುಕುಪ್ಪಾಯಿಯೂ ಒಬ್ಬಳು.(ಜಿ.ಟಿ1)ಈಕೆ ತಿರು ಪತಿಯಲ್ಲಿ ಶಾಶ್ವತವಾಗಿ ಇರುವಂತೆಯೂ,ಇವಳಿಗೆ ಗೋವಿಂದರಾಜ ಸ್ವಾಮಿ ಆಲಯದಿಂದ ದಿನವೂ ಒಂದು ತಳಿಗೆ ಪ್ರಸಾದ ನೀಡಬೇಕೆಂದೂ ಆಜ್ಞೆ ಹೊರಟಿದ್ದಿತು. ಆಕೆಯ ವಂಶಸ್ಥರು ಈ ರೀತಿಯಲ್ಲಿಯೇ ತಮ್ಮ ಸೇವೆ ಯನ್ನು ಮುಂದುವರಿಸಬೇಕೆಂದು ತಿಳಿಸಲಾಗಿದ್ದಿತು. ಉತ್ತಿಡ ತಿಮ್ಮಯ್ಯನ ಮಗಳು ಹನುಮಾಸಾನಿ ಇಂತಹ ನರ್ತಕಿಯರಲ್ಲಿ ಇನ್ನೊಬ್ಬಳು. ತಿ.ತಿ. 820 ನರ್ಪಣಗಳ ದಾನವನ್ನು ನೀಡಿದಳೆಂದೂ,ತಿರುಪತಿಯ ನಿವಾಸಿ ಯಾದ ಈಕೆಯು ದೇವರ ಸೇವೆಗಾಗಿ ಅಚ್ಯುತರಾಯ ನಿಂದ ಕಳುಹಿಸಲ್ಪಟ್ಟವಳೆಂದೂ ತಿಳಿಸುತ್ತದೆ.

ಕ್ರಿ.ಶ.1561 ರ ಒಂದು ಶಾಸನವು ಅರ ವೀಡು ತಿರುಮಲರಾಯನು ಆಲಯದ ಸಂಪಂಗಿ ಪ್ರದಕ್ಷಿಣೆ ಯಲ್ಲಿ ಒಂದು ಊಂಜಲ್ ಮಂಟಪವನ್ನು ನಿರ್ಮಿಸಿದ ಎಂದೂ (ಇಲ್ಲಿ ಮೊದಲೇ ಸಾಳುವನರ ಸಿಂಹನು ಊಂಜಲ್ ಸೇವೆಯನ್ನು ಆರಂಭಿಸಿದ್ದ) ತಿಳಿಸುತ್ತದೆ. (ತಿ.ತಿ.633) ಆ ಕಾಲದಲ್ಲಿ ಆಲಯದಲ್ಲಿ ನಡೆಯುತ್ತಿದ್ದ ಉತ್ಸವಗಳನ್ನು ಈ ಶಾಸನವು ಹೆಸರಿಸುತ್ತದೆ. ಅವುಗ ಳೆಂದರೆ- ಪವಿತ್ರೋತ್ಸವ, ಸಹಸ್ರನಾಮಾರ್ಚನೆ, ಸಹಸ್ರ ಕಲಶಾಭಿಷೇಕ, ಅಧ್ಯಯನೋತ್ಸವ, ವಸಂತೋತ್ಸವ, ಊಂಜಲ್ ಉತ್ಸವ, ಪೆಂಡ್ಲಿ ತಿರುನಾಳ್, ಲಕ್ಷ್ಮೀದೇವಿ ಉತ್ಸವ, ಕೋಡೈ ತಿರುನಾಳ್, ಪ್ಲವೋತ್ಸವ, ಪಲ್ಲವೋ ತ್ಸವ, ಫಲೋತ್ಸವ, ಮೇಷ ಸಂಕ್ರಮಣ, ಅಮಾವಾಸ್ಯೆ, ಪುರ್ಣಿಮೆ, ಉತ್ತರ, ಮೂಲ, ಪೂರ್ವಾಷಾಢ, ಉತ್ತರಾ ಷಾಢ- ನಕ್ಷತ್ರ ದಿನಗಳೂ, ಶ್ರೀಜಯಂತಿ, ಉರಿ ಅಡಿ, ಉತ್ಥಾನ ದ್ವಾದಶಿ,ಅಲ್ಪಸಿಪುರಾಢಂ,ದೀಪಾವಳಿ, ಯುಗಾದಿ, ಕಾರ್ತೀಕ, ಮಕರಸಂಕ್ರಮಣ, ಪಡಿಯ ವೇಟ್ಟು,ತೈಪೂಸಂ, ತನ್ನೀರಮುದು. (ತಿ.ತಿ.633). ಕ್ರಿ.ಶ. 1564ರ ಒಂದು ಶಾಸನವು ರಥಸಪ್ತಮಿ ಉತ್ಸವವನ್ನು (ಜಿ.ಟಿ. 376) ಹೆಸರಿಸುತ್ತದೆ.

ಕ್ರಿ.ಶ.1586ರ ಒಂದು ಶಾಸನವು ಹೇಳುವಂತೆ ಒಬ್ಬಾನೊಬ್ಬ ಅವಸರದ ಚೆನ್ನಪ್ಪನೆಂಬುವವನು ಕಲ್ಯಾಣ ಮಂಟಪವನ್ನು ನಿರ್ಮಿಸಿದನು.(ತಿ.ತಿ.150) ಕ್ರಿ.ಶ.1614 ಒಂದು ದಾಖಲೆಯು ಶ್ರೀರಾಮನವ ಮಿಯ ನಂತರದ ದಿನದಲ್ಲಿ ತಿರುಮಲೆಯ ವೆನ್ರುಮಲ್ಲೈ ಯಿಟ್ಟಾನ್ ಮಂಟಪದಲ್ಲಿ ರಾಮಪಟ್ಟಾಭಿ ಷೇಕ ಮಹೋತ್ಸವವು ನಡೆಯುತ್ತಿತ್ತೆಂದು ತಿಳಿಸುತ್ತದೆ. ಉತ್ಸವ ದಲ್ಲಿ ವಾಯುಪುರಾಣ ಪಠಣ ಸಂಪ್ರದಾಯ ಇದ್ದಿತು. (ತಿ.ತಿ.686) ಕ್ರಿ.ಶ.1623 ರ ಎರಡು ದಾಖಲೆಗಳು ಮಟ್ಲ ಅನಂತರಾಜನು ಸ್ವರ್ಣಾಶ್ವ,ಗಜ,ಸಮರ ಭೂಪಾಲ ವಾಹನಗಳು, ಪದ್ಮಪೀಠ,ಉನ್ನತ ಕೇಳಿ ಮಂಟಪಗಳನ್ನು ನಿರ್ಮಿಸಿ ನೀಡಿದನೆಂದೂ ಮೆಟ್ಟಿಲ

ಮಾರ್ಗದಲ್ಲಿನ ಗಾಳಿಗೋಪುರವನ್ನು ನಿರ್ಮಿಸಿದನೆಂದೂ ತಿಳಿಸುತ್ತವೆ. (6-25-26) ಇದೇ ರಾಜನು ಅಲಿಪಿರಿಯ ಬಳಿಯ ಕೊತ್ತ ಗೋಪುರವನ್ನೂ ನಿರ್ಮಿಸಿದ. (ಜಿ.ಟಿ.279)

(ಮೇಲಿನ ಎರಡು ಪ್ಯಾರಾಗಳಲ್ಲಿನ ವಿಷಯ ಸದಾಶಿವರಾಯನ ಹಾಗೂ ನಂತರದ ಅರವೀಡು ಮನೆತನದ ಕಾಲದವು. ಶಾಸನ ಸಂಪುಟ-5,6ಗಳಲ್ಲಿ ದಾಖಲಾಗಿರುವ ಅನುಕ್ರಮವಾಗಿ 168 (ಪು -445) 173 ಪು(459) ಹಾಗೂ 7 (ಪು 45) 18 (ಪು 103) ಹಾಗೂ 25, 26 (ಪು151) ರ. ಸಂಖ್ಯೆಯವುಗಳು- ಅನುವಾದಕ)

**ಸದಾಶಿವರಾಯನ ಕಾಲದ ತಿರುಮಲೆ**

ನಂತರದ ರಾಜನಾದ ಸದಾಶಿವರಾಯನ ಕಾಲದಲ್ಲಿ ತಿರುಮಲೆಯ ಆಲಯದ ಗೋಡೆಗಳ ಮೇಲೆ ಸುಮಾರು ನೂರ ಐವತ್ತು ಶಾಸನಗಳನ್ನು ಕೆತ್ತಿಸಿಲಾಗಿದೆ. ಇಲ್ಲಿನ ಪ್ರಶಸ್ತಿಗಳ ಒಂದು ವೈಶಿಷ್ಟ್ಯವೆಂದರೆ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳವರೆಗಿನ ರಾಜನೆಂದು ಇವನನ್ನು ಕರೆದಿರುವುದು. ಭೂಭಾಗದ ದೃಷ್ಟಿಯಿಂದ ಸರಿಯಿರಬಹುದಾದರೂ ಇಂಡಿಯಾದ ಮೇಲ್ಮೈ ಲಕ್ಷಣದಲ್ಲಿಯೇ ಇಲ್ಲದ ಉತ್ತರ ಸಮುದ್ರದವರೆಗಿನ ಭೂಮಿಯನ್ನೂ ಇವನ ಆಳ್ವಿಕೆಗೆ ಸೇರಿಸಲಾಗಿರುವುದು. ಈತನ ಶಾಸನಗಳಲ್ಲಿ ಕಂಡು ಬರುವ ಅತಿ ಹಿಂದಿನ ದಿನಾಂಕವೆಂದರೆ ಶಕ ವರ್ಷ 1463 ರ ಪ್ಲವನಾಮ ಸಂವತ್ಸರದ ಕರ್ಕಾಟಕ ಮಾಸದ ಬಹುಳ ದ್ವಾದಶಿಯ ಪುನರ್ವಸು ನಕ್ಷತ್ರ ವಿದ್ದ ಗುರುವಾರದ್ದು. (ಕ್ರಿ.ಶ.21-7-1541) ಇದು (ತಿ.ತಿ.659) ರಲ್ಲಿದ್ದು - ತಿರುಮಲೈ ಜೋಯಿಸರ ಮಗ ಶ್ರೀರಾಮಭಟ್ಟರ್ ಆಲಯಕ್ಕೆ ಮುತ್ತೂರು ಮತ್ತು ಇನ್ನೊಂದು ಗ್ರಾಮವನ್ನು ನೀಡಿದ್ದನ್ನು ಗುರುತಿಸುತ್ತದೆ. ಇದು ತಿ.ತಿ.504 ರಲ್ಲಿ ಇವನ ಪೂರ್ವಿಕನಾದ ಅಚ್ಯುತರಾಯನಿಗೆ ನೀಡಿದ ಈಚಿನ ದಿನಕ್ಕಿಂತ ಎಂದರೆ ಶಕವರ್ಷ 1463 ರ ಪ್ಲವ ಸಂವತ್ಸರದ ಮೀನಮಾಸದ ಶುದ್ಧ ಸಪ್ತಮಿ ಆರ್ದ್ರಾ ನಕ್ಷತ್ರದ ಗುರುವಾರಕ್ಕಿಂತ ಎಂಟು ತಿಂಗಳು ಹಿಂದಿನದು. (ಕ್ರಿ.ಶ. 1537-ಮಾರ್ಚ್ 23) ಸುಮಾರು ಐದು ವರ್ಷಗಳ ಮೊದಲೇ ಎಂದರೆ ಶಕವರ್ಷ 1459 ಹೇವಿಳಂಬಿ ನಾಮಸಂವತ್ಸರದಲ್ಲಿ (ಕ್ರಿ.ಶ.1537-ರಲ್ಲಿ) ಈತನನ್ನು ಯುವರಾಜನಾಗಿ ಘೋಷಿಸಲಾಯಿತು ಎಂದು ಹೇಳಲಾಗಿದೆ. ಈ ಹೇಳಿಕೆಯು ದೇವರಾಯಪುರಕ್ಕೆ ಸದಾಶಿವಪುರ ವೆಂಬ ಹೆಸರು ನೀಡಿದ ಶಾಸನದಿಂದ (ಶಕ-1460) ಸಮರ್ಥಿತವಾಗುತ್ತದೆ.

ಅರವೀಡು ವಂಶದವರೊಬ್ಬರ ದತ್ತಿಯನ್ನು ದಾಖಲಿಸುವ ಜಿ.ಟಿ 133 ರ ಶಾಸನವು ಸದಾಶಿವರಾಯನ ಇಲ್ಲಿನ ತೀರ ಈಚಿನ ಶಾಸನದ ವರ್ಷವನ್ನು ಶಕವರ್ಷ 1495 ಶ್ರೀಮುಖ ಸಂವತ್ಸರದ ಕುಂಭ ಮಾಸದ್ದು (ಕ್ರಿ.ಶ. 1574 ಜನವರಿ 20). ಆದರೆ ಬೇರೆ ಕಡೆ ದೊರೆಯುವ ಒಂದು ಇತ್ತೀಚಿನ ಶಾಸನವು ಕ್ರಿ.ಶ.1575ಕ್ಕೆ ಸಮನಾದ ಶಕವರ್ಷ 1497 ರ ಯುವನಾಮ ಸಂವತ್ಸರದ್ದು ಎಂದು ಗುರುತಿಸಿದ್ದು ಇದರಿಂದಾಗಿ ಒಂದನೇ ತಿರುಮಲನು ಮಹಾಮಂಡಲೇಶ್ವರ ಮೊದಲಾದ ಚಕ್ರವರ್ತಿಯ ಬಿರುದುಗಳನ್ನು ಪಡೆದ ಮೇಲೂ ಎಂದರೆ ಶಕವರ್ಷ 1492 ರ ನಂತರವೂ ಸದಾಶಿವರಾಯನು ನಾಮ ಮಾತ್ರ ರಾಜನಾಗಿದ್ದನೆಂಬುದನ್ನು ತಿಳಿಯಬಹುದು. ಹೀಗಾಗಿ ಸದಾಶಿವರಾಯನ ಆಳ್ವಿಕೆಯು ಅಚ್ಯುತರಾಯನ ಕೊನೆಯ ದಿನಗಳನ್ನೂ ಸೇರಿದಂತೆ ಶಕ 1459 ರಿಂದ ಶಕ 1497 ರ ವರೆಗೆ ಸುಮಾರು 40 ವರ್ಷ ಕಾಲ ವಿಸ್ತರಿಸಿದ್ದಿತು ಎನ್ನ ಬರುತ್ತದೆ.

- ಮುಂದುವರೆಯುತ್ತದೆ.





## ಲಕ್ಷಕುಂಕುಮಾರ್ಚನೆ

ಅಮ್ಮನವರಿಗೆ ಪ್ರತೀವರ್ಷವೂ ನಡೆಯುವ ವಾರ್ಷಿಕ ಬ್ರಹ್ಮೋತ್ಸವಕ್ಕೆ ಮೊದಲು ಅತ್ಯಂತ ವೈಭವದಿಂದ ಲಕ್ಷ ಕುಂಕುಮಾರ್ಚನೆ ನಡೆಯುತ್ತದೆ. ಶತಸಹಸ್ರನಾಮಗಳಿಂದ, ಅಷ್ಟೋತ್ತರ ಶತನಾಮಗಳಿಂದ, ವೇದಮಂತ್ರಗಳಿಂದ ಅರ್ಚಕರು ಪ್ರತೀ ಕುಂಕುಮದ ಬಿಂದುವಿನಲ್ಲಿ ಅಮ್ಮನವರ ಪ್ರಾಶಸ್ತ್ಯವನ್ನು ತಿಳಿಯ ಪಡಿಸುತ್ತಾ ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ. ಸ್ತ್ರೀಯರ ಸೌಭಾಗ್ಯದ ಚಿಹ್ನೆ ಕುಂಕುಮವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತಹಾ ಪರಮ ಪವಿತ್ರವಾದ ಸೌಭಾಗ್ಯವನ್ನು ಅಮ್ಮನವರಿಗೆ ಅರ್ಪಿಸಿ, ಆ ತಾಯಿ ಪ್ರತಿ ಘಳಿಗೆಯಲ್ಲೂ ಪ್ರಶಾಂತವಾಗಿ ಇದ್ದರೆ, ಬ್ರಹ್ಮೋತ್ಸವಗಳು ನಿರ್ವಿಘ್ನವಾಗಿ, ಆನಂದದಾಯಕವಾಗಿ ನೆರವೇರುತ್ತದೆಂದು ಹಿರಿಯರ ನಂಬಿಕೆ. ಇದರಲ್ಲೂ ಅನೇಕ ಭಕ್ತರು ಪಾಲ್ಗೊಂಡು ತಮ್ಮ ಸೌಭಾಗ್ಯವನ್ನು ಕಾಪಾಡಬೇಕೆಂದು ಆ ತಾಯಿಯನ್ನು ಬೇಡಿಕೊಂಡು ಕಟಾಕ್ಷಸಿದ್ಧಿಯನ್ನು ಪಡೆಯುತ್ತಾರೆ.

# ಸಂಪ್ರದಾಯ ಹಾಡುಗಳಲ್ಲಿ ಲಕ್ಷ್ಮೀದೇವಿ

ಡಾ|| ಎ. ಕುಮುದ
97319 03752

**-ಕಳೆದ ಸಂಚಿಕೆಯಿಂದ**

ಶ್ರೀ ಗುರು ಜಗನ್ನಾಥದಾಸರು ಲಕ್ಷ್ಮೀ ದೇವಿಯನ್ನು ಪ್ರಾರ್ಥಿಸುವ ಪರಿ

ಶಿರಿಯೆ ನೀ ವೈಕುಂಠಲೋಕದಿ
ಶಿರಿಯೆ ನೀ ಪಾಲ್ಗಡಲ ಮಧ್ಯದಿ
ಇರುವ ತೆರದಲಿ ಎನ್ನ ಮನಿಯೊಳು ವಿಷ್ಣು ಸಹಿತಾಗಿ
ನಿರುತ ದಾನಿಯ ಹೃದಯ ಮಧ್ಯದಿ
ಮಿರುಗುವಂದದಲೆನ್ನ ಸದನದಿ
ಹರಿಯ ಸಹಿತದಿ ನಿತ್ಯ ರಾಜಿಸು ನೀಡು ಕಾಮಿತವ ||೫||

ಸಂಪತ್ತಿಗೆ ಅಧಿದೇವತೆ ಲಕ್ಷ್ಮೀದೇವಿ. ಆಕೆ ವೈಕುಂಠಲೋಕದಲ್ಲಿ ಶ್ರೀ ಹರಿಯನ್ನು ಸೇವಿಸುವ ಪರಿ ಈ ರೀತಿಯಿದೆ.

ಛತ್ರ ಚಾಮರ ವ್ಯಜನ ಪರಿಯಂಕ
ಪಾತ್ರ ರೂಪದಲ್ಲಿ ನಿಂತು ನಿತ್ಯ ಸೇವೆ ಮಾಡುತಿಹಳು।
ಎಂದು

ಪುರಂದರದಾಸರು ನಿರೂಪಿಸಿರುವರು. ಇದೇ ರೀತಿ ವಿಜಯ ದಾಸರ 'ಶರಣು ಶರಣು ಭಕ್ತರ ಪ್ರೇಮಿ' ಎಂಬ ಕೃತಿಯಲ್ಲೂ ಲಕ್ಷ್ಮೀ ದೇವಿಯು ಹರಿಗೆ ಮನೆ ಮಂಟಪ, ಸಿಂಹಾಸನ, ಛತ್ರಿ, ಚಾಮರ,ರಥ,ಪಲ್ಲಕ್ಕಿ,ಪುಷ್ಪಹಾರ ಕನ್ನಡಿ, ವಸ್ತ್ರ ಆಭರಣ,ಪೀಕದಾನಿ ಎಲ್ಲವೂ ಆಗಿ ಸೇವಿಸುತ್ತಿರು ವಳು ಎಂದು ಅಭಿಪ್ರಾಯಪಟ್ಟಿರುವರು.

**ಗೋಪಾಲದಾಸರು**

ಈ ಪರಿ ಹರಿಯ ದಯಾ ಪಾತ್ರಳೆ ಶುಭ
ನೂಪುರಾದಿ ಸುಖಲಾಪೆ ಶೋಭಿಪೆ ಭ್ರೂ
ಚಾಪ ಚಲನದಿಂದಾ ಪವಮಾನನಿ
ಗೆ ಪದದೇ ಭವತಾಪಗಳನು

ಕರುಣಾಮಯಿಯಾದ ಲಕ್ಷ್ಮೀದೇವಿಯು ಧನಸ್ಸಿನಂತೆ ಬಾಗಿರುವ ತನ್ನ ಹುಬ್ಬಿನ ಚಲನ ಮಾತ್ರದಿಂದಲೇ ಜೀವೋತ್ತಮರಾದ ವಾಯುದೇವರಿಗೆ ವಾಯುಪದವಿಯನ್ನೂ ಬ್ರಹ್ಮನಿಗೆ ಬ್ರಹ್ಮಪದವಿಯನ್ನು ನೀಡುವಳು. ಅವರಿಗೆ ಸಂಸಾರ ದುಃಖದ ಸ್ಪರ್ಶವೇ ಇಲ್ಲದಂತೆ ಇಟ್ಟಿರುವಳು ಎಂದಿರುವರು.

ಶ್ರೀನಿವಾಸನ ವಕ್ಷೋನಿವಾಸಿನಿಯಾಗಿರುವ ಇಂಥಾ ಲಕ್ಷ್ಮೀದೇವಿಯನ್ನು ಗುರುಜಗನ್ನಾಥದಾಸರು ನಾರಾಯಣನ ಜೊತೆಯಲ್ಲಿ ಬಂದು ತಮ್ಮ ಹೃದಯ ಮಂದಿರದಲ್ಲಿ ನಿಲ್ಲಬೇಕೆಂದೂ,ತಮ್ಮ ಮನದಭಿಲಾಶೆಯನ್ನು ಪೂರ್ಣಗೊಳಿಸಬೇಕೆಂದು ಪ್ರಾರ್ಥಿಸುವರು.

**ದಾಸರ ಶರಣಾಗತಿ (ಆತ್ಮನಿವೇದನೆ)**

ದೋಷಮಂದಿರವೆನಿಪ ಎನ್ನಲಿ
ಲೇಶ ಪುಡುಕಲು ಗುಣಗಳಿಲ್ಲ

ಎಂಬ ಈ ಪದ್ಯದಲ್ಲಿ ದಾಸರು ತಮ್ಮ ಹೃದಯ ಮಂದಿರದಲ್ಲಿ ದೋಷ ಹಾಗೂ ಅವಗುಣಗಳೇ ತುಂಬಿಕೊಂಡಿವೆ. ಅವುಗಳನ್ನು ಎಣಿಸಲು ಸಾಧ್ಯವಿಲ್ಲ. 'ನಿನ್ನ ಮಗನೆಂದು ತಿಳಿದು ನನ್ನ ತಪ್ಪುಗಳನ್ನು ಸಹಿಸಿಕೊಳ್ಳಬೇಕೆಂದು ಬೇಡಿಕೊಳ್ಳುತ್ತಿದ್ದಾರೆ.

ಪಾಪಿ ಜನರೊಳಗಗ್ರಣ್ಯನು
ಕೋಪ ಪೂರಿತ ಚಿತ್ತ ಮಂದಿರ
ಈ ಪಯೋಜಭವಾಂಡದೊಳು
ಹುಡುಕಿದರಾರು ಸರಿಯಿಲ್ಲ।

ತಾವು ಪಾಪಿಜನರಲ್ಲೇ ಮೊದಲಿಗನಾಗಿದ್ದೇನೆ. ಈ ಪ್ರಪಂಚದಲೆಲ್ಲಾ ಹುಡುಕಿದರೂ ನನ್ನಂಥವನು ಸಿಗಲಾರರು. ತಮ್ಮದು ಕೋಪಿಷ್ಠ ಸ್ವಭಾವ ಎಂದು ಅಳಲನ್ನು ತೋಡಿಕೊಂಡಿರುವರು. ತಮ್ಮ ಗುಣ ದೋಷಗಳನ್ನು ಪರಿ ಹರಿಸಿ ಸಲಹಬೇಕೆಂದು ಹರಿಯ ರಾಣಿಯನ್ನು ಬೇಡಿಕೊಳ್ಳುತ್ತಿರುವರು.

ತಂದೆ - ತಾಯಿಯು ನೀನೆ ಲಕುಮಿ
ಬಂಧು - ಬಳಗವು ನೀನೆ ದೇವಿ
ಹಿಂದೆ ಮುಂದೆ ಎನಗೆ ನೀನೆ ಗುರುವು
ಸದ್ಗುತಿಯು



ಇಂದಿರೆಯೆ ಎನ ಜೀವಕಾರಿಣಿ
ಸಂದೇಹ ಎನಗಿಲ್ಲ ಪರಮಾ
ನಂದ ಸಮುದಯ ನೀಡೆ ಕರುಣವ ಮಾಡೆ ವರನೀಡೆ ॥

ನೀನೆ ತಂದೆ ತಾಯಿ ಗುರು ಬಂಧು ಬಳಗ ಎಲ್ಲವೂ ನೀನೆ ಕರುಣದಿಂದ ಸದ್ಗತಿಯನ್ನಿತ್ತು ಆನಂದವನ್ನು ನೀಡಬೇಕೆಂದು ದಾಮೋದರನ ರಾಣಿಯಾದ ಇಂದಿರೆಯನ್ನು ವರವನ್ನು ಬೇಡುತ್ತಿದ್ದಾರೆ ದಾಸರು. ಈ ಪದ್ಯಗಳಲ್ಲಿ ಆತ್ಮನಿವೇದನಾ ಭಾವವು ತುಂಬಿ ತುಳುಕುತ್ತಿದೆ.

**ವಿಜಯದಾಸರು :**

ಎಂದಿಗಾಹುದೋ ನಿನ್ನ ದರುಶನ ॥
ತಂದೆ ತಾಯಿ ನೀನೆ ಬಂಧು ಬಳಗವು ನೀನೆ
ಎಂದು ಭಜಿಸುವ ಆನಂದ ಗೋವಿಂದ
ಸರಸಿಜೋದ್ಭವ ಹರಿನಾದ ನಿನ್ನ
ಸ್ಮರಿಸುವ ಸುಖವು ಎಂದಿಗಾಹುದೋ ಹರಿಷ ॥

ಶ್ರೀಹರಿಯೇ ತಂದೆ ತಾಯಿ ಬಂಧು ಬಳಗ ಆಗಿರುವನು. ಕ್ಷೀರ ಸಾಗರ ಶಯನನಾದ ಭಗವಂತನನ್ನು ಭಕ್ತಿಯಿಂದ ಸ್ತುತಿಸುವುದೇ ಪರಮಾನಂದವೆಂಬುದೇ ವಿಜಯದಾಸರ ಅಭಿಪ್ರಾಯವಾಗಿದೆ. ಅಂದರೆ ಎಲ್ಲಾ ಜೀವಿಗಳಿಗೂ ಹರಿಯೇ ಜನನಿ ಜನಕರೆಂಬುದನ್ನು ತಿಳಿಯಬಹುದು. ನವವಿಧ ಭಕ್ತಿಗಳಲ್ಲಿ ಕೊನೆಯದಾದ ಆತ್ಮನಿವೇದನಾ ಭಕ್ತಿಯನ್ನು ಕಾಣಬಹುದು.

ಗುರುಜಗನ್ನಾಥದಾಸರು ಲಕ್ಷ್ಮೀದೇವಿಯ ಗುಣಗಳನ್ನು ಈ ರೀತಿ ಹಾಡಿ ಹೊಗಳಿದ್ದಾರೆ.

ಸಕಲ ವಿಧ ವಿಘ್ನಾಪಹಾರಿಣಿ
ಸಕಲ ಭಕ್ತೋದ್ಧಾರಕಾರಿಣಿ
ಸಕಲ ಸುಖ ಸೌಭಾಗ್ಯದಾಯಿನಿ ।
ಕಾಮಧೇನು ಸುಕಲ್ಪತರು ಚಿಂ
ತಾಮಣಿ ಸಹವಾಗಿ ನಿನ್ನಯ
ಕಾಮಿತಾರ್ಥಗಳೀವ ಕಳೆಗಳೆನಿಸಿ ಇರುತಿಹವು ।

ಹೀಗೆ ಆಕೆಯ ಗುಣಾವಲೋಕನ ಮಾಡಿದ ನಂತರ ಬಿನ್ನೈಸಿಕೊಂಡಿರುವ ಪರಿ :

ಆದಿವಿಷ್ಣುವಿನ ಧರ್ಮಪತ್ನಿಯೆ
ಸಾದರದಿ ಹರಿ ಸಹಿತ ಎನ್ನಲಿ
ಮೋದದಿಂದಲಿ ಸನ್ನಿಧಾನವ ಮಾಡೆ ಕರುಣದಿ ।

ಸರ್ವೋತ್ತಮವಾದ ಹರಿಯ ಪತ್ನಿಯೆ ನಾರಾಯಣನ ಜೊತೆಗೂಡಿ ಎನ್ನ ಹೃದಯ ಮಂದಿರದಲ್ಲಿ ಬಂದು ನೆಲೆಸುವಂತೆ ಪ್ರಾರ್ಥಿಸುತ್ತಿದ್ದಾರೆ.

ಆವ ಲಕ್ಷ್ಮೀಹೃದಯ ಮಂತ್ರವ
ಸಾವಧಾನದಿ ಪಠನಗೈವನೋ
ಆವಕಾಲದಿ ರಾಜ್ಯಲಕ್ಷ್ಮಿಯನೈದು ಸುಖಿಸುವನು
ಆವ ಮಹಾದಾರಿದ್ರ್ಯದೋಷಿಯು
ಸೇವಿಸೆ ಮಹಾಧನಿಕನಾಗುವ
ದೇವಿಯವನಾಲಯದಿ ಸರ್ವದ ಸ್ಥಿರದಿ ನಿಲಿಸುವಳು ॥94॥

ಈ ಲಕ್ಷ್ಮೀಹೃದಯವನ್ನು ಭಕ್ತಿಯಿಂದ ಯಾರು ಪಠನ ಮಾಡುವರೋ ಅವರ ದಾರಿದ್ರ್ಯವು ಕಳೆದು ಧನಿಕರಾಗುವರು. ಅಂಥಹವರ ಮನದಲ್ಲಿ ಲಕ್ಷ್ಮಿಯು ಸ್ಥಿರವಾಗಿ ನಿಲ್ಲುವಳು ಎಂದು ಫಲಶ್ರುತಿ ಹೇಳಲಾಗಿದೆ.

ಮಾತೆ ನಿನ್ನಯ ಜಠರಕಮಲಸ -
ಜಾತನಾಗಿಹ ಸುತನ ತೆರದಲಿ
ಪ್ರೀತಿಪೂರ್ವಕ ಭಾಗ್ಯಗಳನಿತ್ತು ನಿತ್ಯದಲಿ
ನೀತ ಭಕುತಿ ಜ್ಞಾನಪೂರ್ವಕ
ದಾತಗುರುಜಗನ್ನಾಥವಿಠಲನ
ಪ್ರೀತಿಗೊಳಿಸುವ ಭಾಗ್ಯ
ಪಾಲಿಸಿ ಪೊರಿಯೆ ನೀ ಎನ್ನ ॥

ಈ ಲಕ್ಷ್ಮೀ ಹೃದಯ ಪ್ರತಿ ಪದ್ಯಗಳು ಆದಿ ಪ್ರಾಸದಲ್ಲಿದ್ದು ಪಠನೆಗೆ ಅತಿ ಸುಲಭವಾಗಿದೆ. ಸರಳ ಕನ್ನಡದ ಅನುವಾದ ಮನ ಮುಟ್ಟುವಂತಿದೆ ಹಾಗೂ ಅರ್ಥಗರ್ಭಿತವಾಗಿದೆ.

**- ಮುಂದುವರೆಯುತ್ತದೆ.**




## ಸಪ್ತಗಿರಿ ಕ್ವಿಜ್ ಸೆಪ್ಟೆಂಬರ್ 2023
## ತಿಂಗಳ ರಸಪ್ರಶ್ನೆಯ ಉತ್ತರಗಳು

1. ಭಾದ್ರಪದ ಶುಕ್ಲ ಪಕ್ಷದ ಪಂಚಮಿ
2. ಗಣೇಶ
3. ಶ್ರೀವಾದಿರಾಜರು
4. ಮೋಡ
5. ಇಂದ್ರ, ಶಕ್ರ
6. ಸೌಮ್ಯನಾಯಕಿ
7. ಶ್ರೀಕೃಷ್ಣ
8. ಶ್ರೀಕೃಷ್ಣ
9. ಋಷ್ಯಮೂಕ
10. ಕೆಂಪು ಬಣ್ಣದ ದಾರ
11. ಕ್ರಿ.ಶ.1727 ಶಾಲಿ ವಾಹನ ಶಕ
12. ವಿಶ್ವಕರ್ಮ
13. ವಿಶ್ವನಾಥನ
14. ಫಲ್ಗುಣಿನದಿ, ಹಸು, ಬ್ರಾಹ್ಮಣ, ತುಳಸಿ ಗಿಡ
15. ರಮಣ ದ್ವೀಪಕ್ಕೆ



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

## 2023 ನವೆಂಬರ್ 10 ರಿಂದ 18 ರ ವರೆಗೆ

**10-11-2023**
ಶುಕ್ರವಾರ
ಹಗಲು : ಧ್ವಜಾರೋಹಣ
ರಾತ್ರಿ : ಚಿಕ್ಕ ಶೇಷವಾಹನ

**11-11-2023**
ಶನಿವಾರ
ಹಗಲು : ದೊಡ್ಡ ಶೇಷವಾಹನ
ರಾತ್ರಿ : ಹಂಸವಾಹನ

**12-11-2023**
ಭಾನುವಾರ
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹವಾಹನ

**13-11-2023**
ಸೋಮವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**14-11-2023**
ಮಂಗಳವಾರ
ಹಗಲು : ಪಲ್ಲಕ್ಕಿ ಉತ್ಸವ
ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**15-11-2023**
ಬುಧವಾರ
ಹಗಲು : ಸರ್ವಭೂಪಾಲವಾಹನ
ರಾತ್ರಿ : ಗರುಡ ವಾಹನ

**16-11-2023**
ಗುರುವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**17-11-2023**
ಶುಕ್ರವಾರ
ಹಗಲು : ಸ್ವರ್ಣ ರಥೋತ್ಸವ
ರಾತ್ರಿ : ಅಶ್ವವಾಹನ

**18-11-2023**
ಶನಿವಾರ
ಹಗಲು : ಚಕ್ರಸ್ನಾನ
ರಾತ್ರಿ :ಧ್ವಜಾವರೋಹಣ

ತಿರುಮಲೆ ಸ್ವಾಮಿಯವರಿಗೆ ನಡೆದ ವಾರ್ಷಿಕ ಬ್ರಹ್ಮೋತ್ಸವಗಳ ಸಂದರ್ಭದಲ್ಲಿ ಸ್ವಾಮಿಯವರಿಗೆ ಆಂಧ್ರಪ್ರದೇಶದ ರಾಜ್ಯದ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ಮುಖ್ಯಮಂತ್ರಿ ಗೌ॥ ಶ್ರೀ. ವೈ. ಎಸ್. ಜಗನ್‌ಮೋಹನ್ ರೆಡ್ಡಿ ಯವರು. ನಂತರ ಸ್ವಾಮಿಯವರ ನೂತನ ಕ್ಯಾಲೆಂಡರ್(2024) ಗಳನ್ನು ಬಿಡುಗಡೆ ಮಾಡಿದರು. ಸ್ವಾಮಿಯ ದರ್ಶನಾನಂತರ ಮುಖ್ಯಮಂತ್ರಿಯವರಿಗೆ ಚಿತ್ರಪಟ ಮತ್ತು ತೀರ್ಥ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಯವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ . ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

















ತಿರುಮಲೆ ಸ್ವಾಮಿಯವರಿಗೆ ನಡೆದ ವಾರ್ಷಿಕ ಬ್ರಹ್ಮೋತ್ಸವಗಳು ಬಹಳ ವೈಭವವಾಗಿ ನಡೆಯಿತು. ಈ ವಾಹನ ಸೇವೆಗಳಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ಮತ್ತು ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಇತರ ಉನ್ನತಾಧಿಕಾರಿಗಳು ಮತ್ತು ಭಕ್ತರು ಪಾಲ್ಗೊಂಡರು.










# ತಿರುಮಲೆ ತಿರುಪತಿ ದೇವಸ್ಥಾನಗಳು

ತಿರುಮಲೆ ಸ್ವಾಮಿಯವರಿಗೆ ನಡೆದ ವಾರ್ಷಿಕ ಬ್ರಹ್ಮೋತ್ಸವಗಳು ಬಹಳ ವೈಭವವಾಗಿ ನಡೆಯಿತು. ಈ ವಾಹನ ಸೇವೆಗಳಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ಮತ್ತು ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಇತರ ಉನ್ನತಾಧಿಕಾರಿಗಳು ಮತ್ತು ಭಕ್ತರು ಪಾಲ್ಗೊಂಡರು.










## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ 27-09-2023 ರಿಂದ 29-09-2023 ರ ವರೆಗೆ ನಡೆದ ಪವಿತ್ರೋತ್ಸವಗಳು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ದಂಪತಿಗಳು ಪಾಲ್ಗೊಂಡರು.













## ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರಿಗೆ 25-09-2023 ರಿಂದ 27-09-2023 ರ ವರೆಗೆ ನಡೆದ ಪವಿತ್ರೋತ್ಸವಗಳು







# ಶ್ರೀ ಅಲಮೇಲು ಮಂಗಾಪುರದಲ್ಲಿ ಶ್ರೀ ಪದ್ಮಾವತಿ ದೇವಾಲಯ

– ಕೆ.ಪಿ. ರತ್ನಾಕರ ಭಟ್ಟ

ಪದ್ಮಾವತೀನಾಮಮಾಕಾಶಪುತ್ರೀಂ
ಶ್ರೀವೇಂಕಟೇಶವಕ್ಷಸ್ಥಳ ಶೋಭನಾಂಗೀಂ
ಭೂದೇವಿನಾಮಾರ್ಕಸಹಸ್ರತೇಜಾಂ
ಶ್ರೀದೇವಿರೂಪಂ ಪ್ರಕಾಶಮಾನಾಂ।
ಶ್ರೀಚಕ್ರಾಂ ಬಿಂದುಮಧ್ಯವಸನಾಮಲಮೇಲು
ಮಂಗಾಪುರೀ ಶೋಭಿನೀಂ
ವಂದೇಽಹಂ ಶ್ರೀ ವಿಶ್ವೇಶ್ವರೀಂ
ಭಗವತೀಂ ಜಗದಾದಿಶಕ್ತಿಂ ಪರಾಂ ॥

ಶ್ರೀದೇವಿಯೇ ಭೂಮಿಗಿಳಿದು ಬಂದು, ಆಕಾಶರಾಜ - ಧಾರಿಣಿಯ ಮಗಳಾಗಿ ಪದ್ಮಾವತೀ ಎಂಬ ಶುಭನಾಮದಿಂದ ಶೋಭಿಸಿದಳು. ಶ್ರೀನಿವಾಸ-ಪದ್ಮಾವತಿಯರ ಕಲ್ಯಾಣವಾಯ್ತು ಆದಿಶಕ್ತಿ ಸ್ವರೂಪಿಣಿಯಾದ ಪದ್ಮಾವತಿಯೇ ತಿರುಪತಿ ಕ್ಷೇತ್ರದಲ್ಲಿ ಶ್ರೀಅಲುಮೇಲುಮಂಗಾ ಎಂಬ ಮಹಾಮಾತೆಯ ಹೆಸರಿನಿಂದ ವಿಜೃಂಭಿಸಿದ್ದಾಳೆ. ಶ್ರೀಪದ್ಮಾವತಿ ಅಮ್ಮನವರ ದೇವಾಲಯವು ತಿರುಪತಿಯ ಬಸ್ ಸ್ಟೇಷನ್ನಿನಿಂದ ಐದು ಕಿಲೋಮೀಟರ್‌ಗಳ ದೂರದಲ್ಲಿಯೂ ಹಾಗೂ ತಿರುಪತಿಯ ರೈಲ್ವೇ ಸ್ಟೇಷನ್ನಿನಿಂದ ಐದುವರೆ ಕಿಲೋಮೀಟರ್ ದೂರದಲ್ಲಿಯೂ ಅಪ್ಯಾಯಮಾನವಾಗಿ ಪರಿಶೋಭಿಸಿದೆ.

ಸಾಕ್ಷಾತ್ ಶ್ರೀಪದ್ಮಾವತೀ ದೇವಿಯಿಂದಲೇ ಅಂತಃಸ್ಫುರಿತವಾದ ಮೇಲಿನ ಶ್ಲೋಕದ ಪ್ರಕಾರ, ಆಕಾಶರಾಜನ ಮಗಳಾಗಿ ಶ್ರೀವೇಂಕಟೇಶ್ವರನ ವಕ್ಷಸ್ಥಳ ಶೋಭಿನಿಯಾಗಿ ಭೂದೇವಿ ನಾಮಕಳಾಗಿ ಸಹಸ್ರಸೂರ್ಯರ ತೇಜಸ್ಸಿನಿಂದ ಪ್ರಕಾಶಮಾನ ಆದ ಶ್ರೀಪದ್ಮಾವತೀದೇವಿಯು ಶ್ರೀಚಕ್ರ ಸ್ವರೂಪಿಣಿಯೂ, ಶ್ರೀಚಕ್ರ ಮಧ್ಯದಲ್ಲಿರುವ ಬಿಂದುವಾಸಿನಿಯೂ ಹಾಗೂ ಅಲಮೇಲು ಮಂಗಾಪುರ ನಿವಾಸಿನಿಯೂ ಆಗಿ ಶೋಭಿಸುತ್ತಿರುವ ವಿಶ್ವೇಶ್ವರಿಯಾಗಿ ಭಗವತಿಯಾಗಿರುವ ಜಗದಾದಿ ಪರಾಶಕ್ತಿಗೆ ನಾನು ಅಭಿವಂದಿಸುತ್ತೇನೆ.

ಈ ಕ್ಷೇತ್ರವನ್ನು ತಿರುಚಾನೂರು ಕ್ಷೇತ್ರವೆಂದೂ ಕರೆಯುತ್ತಾರೆ. ಇಲ್ಲಿಯೂ ಕೂಡಾ ಶ್ರೀಪದ್ಮಾವತಿ ಅಮ್ಮನವರ ದೇವಾಲಯದ ಪ್ರಮುಖ ಭಾಗದಲ್ಲಿ ಭವ್ಯವಾಗಿ ವಿರಾಜಮಾನವಾಗಿರುವ ಐದಂತಸ್ತಿನ ಏಳು ಸ್ವರ್ಣಕಳಸಗಳಿರುವ ರಾಜಗೋಪುರವಿದೆ. ರಾಜಗೋಪರದ ಮೇಲೂ ಕೂಡಾ ಅನೇಕ ಪೌರಾಣಿಕ ಚಿತ್ರಗಳನ್ನು ನಿರ್ಮಿಸಲಾಗಿದೆ. ಬಹು ವಿಶಾಲವಾದ ಪ್ರಾಕಾರದಲ್ಲಿ ದೊಡ್ಡ ದೊಡ್ಡ ಒಳಾವರಣಗಳನ್ನೊಳಗೊಂಡ ದೇವಾಲಯವಿದೆ. ಶ್ರೀಜಗದೀಶ್ವರಿಯು ಸುಂದರವಾದ ಮೂರ್ತಿಯು ದರ್ಶನಕ್ಕಾಗಿ ಬಂದ ಭಕ್ತರನ್ನು ಭಕ್ತಿಯಲ್ಲಿ ಮೈ ಮರೆಯುವಂತೆ ಮಾಡುತ್ತದೆ. ಕಣ್ಮನಗಳಿಗೆ ಪರಮಾನಂದದಾಯಕವಾಗಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಸುಂದರವಾದ ಮತ್ತು ಭವ್ಯವಾದ ಪುಷ್ಕರಣಿಯೂ ಇದೆ.

ಶ್ರೀವೇಂಕಟೇಶ್ವರನ ದರ್ಶನವನ್ನು ಮಾಡುವ ಮೊದಲ ಅಥವಾ ದರ್ಶನಾನಂತರ ಅಮ್ಮನವರ ದರ್ಶನವನ್ನು ಮಾಡಿದಾಗಲೇ ಯಾತ್ರೆಯ ಪೂರ್ಣ ಫಲವು ಪ್ರಾಪ್ತಿಯಾಗುವುದೆನ್ನಲಾಗಿದೆ. ಆದ್ದರಿಂದ ಶ್ರೀತಿರುಮಲೆ ಕ್ಷೇತ್ರಕ್ಕೆ ಬಂದ ಭಕ್ತರೆಲ್ಲರೂ ನಿಶ್ಚಯವಾಗಿ ಅಮ್ಮನವರ ದರ್ಶನವನ್ನೂ ಮಾಡಿಯೇ ಮಾಡು





ತ್ತಾರೆ. ಬ್ರಹ್ಮೋತ್ಸವಾದಿ ಅನೇಕ ಮಹೋತ್ಸವ ಗಳನ್ನು ಮಾಡುತ್ತಾರೆ. ಹಾಗೆಯೇ ಶ್ರೀಪದ್ಮಾವತೀ ದೇವಾಲಯದಲ್ಲೂ ಕೂಡಾ ವಿಶೇಷವಾಗಿ ಅಮ್ಮನವರ ಆರಾಧ ನೆಯು ವಿವಿಧ ವಿಶೇಷ ಸೇವೆಗಳೊಂದಿಗೆ ನಡೆ ಯುತ್ತದೆ.

ತ್ತಾರೆ. ಶ್ರೀಲಕ್ಷ್ಮಿಯ ಹೃದಯದಲ್ಲಿ ನಾರಾಯಣ ಮತ್ತು ಶ್ರೀಮನ್ನಾರಾಯಣನ ಹೃದಯದಲ್ಲಿ ಶ್ರೀಲಕ್ಷ್ಮೀದೇವಿ ಎಂಬುದು ಸರ್ವವಿದಿತವಾಗಿದೆ. ಆಶ್ವಯುಜಶುದ್ಧ ಪಾಡ್ಯದಿಂದ "ನವರಾತ್ರಿ" ಎಂಬಂತೆ ವಿಜಯದಶಮಿಯ ವರೆಗೂ ಎಲ್ಲಾ ದೇವಾಲಯಗಳಲ್ಲಿಯೂ ವಿಶೇಷ ಪೂಜೆ ಗಳಿರುತ್ತದೆ. ತಿರುಮಲೆಯಲ್ಲಿ ಕೂಡಾ ಬ್ರಹ್ಮ ರಥೋತ್ಸವ ಗಳಿರುತ್ತದೆ. ಆಗ ಶ್ರೀವೇಂಕಟೇಶ್ವರನನ್ನು ವಿವಿಧ ವಾಹನ ಗಳ ಮೇಲೆ ಸಾಲಂಕೃತನನ್ನಾಗಿಸಿ ಶ್ರೀ - ಭೂದೇವಿಯ ರೊಡನೆ ಮೆರವಣಿಗೆ ಮಾಡಲಾಗುತ್ತದೆ. ಶ್ರೀಪದ್ಮಾವತೀ ದೇವಾಲಯದಲ್ಲಿಯೂ ಕೂಡಾ ವಿಶೇಷ ಕಾರ್ಯಕ್ರಮಗಳಿ ರುತ್ತವೆ. ಆದಿ ಶಕ್ತಿಯು ನವರಾತ್ರಿಯ ಅವಧಿಯಲ್ಲಿ ವಿಶೇಷ ಶಕ್ತಿ ಸಂಪನ್ನಳಾಗಿ ನವ ರಾಕ್ಷಸರನ್ನು ಸಂಹರಿಸಿದವ ಳಾಗಿದ್ದಾಳೆ ಮಹಿಷಾಸುರ, ರಕ್ತ ಬೀಜಾಸುರ,ಚಂಡಾಸುರ, ಮುಂಡಾಸುರ,ಶುಂಭಾಸುರ, ನಿಕುಂಭಾಸುರ, ಮಧು ಮತ್ತು ಕೈಟಭಾಸುರ ಹಾಗೂ ಧೂಮ್ರಾಸರರು. ಆದರಿಂದಲೇ ದೇವಿಯನ್ನು ನವದುರ್ಗಾ ಒಂದು ಸಂಕೀರ್ತನೆ ಮಾಡ ಲಾಗಿದೆ. ಇವುಗೆಳಲ್ಲವೂ ಮಾನವರಲ್ಲೂ ಇರುವ ದುರ್ಗುಣ ಗಳಾಗಿವೆ.


ಶೈಲಪುತ್ರೀ ಬ್ರಹ್ಮಚಾರೀ ಚಂದ್ರಘಂಟಾ ಚ ನಾಮಕೀ
ಕೂಷ್ಮಾಂಡಾ ಸ್ಕಂದಮಾತೇತಿ ಕಾತ್ಯಾಯಿನೀತಿ ವಿಶ್ರುತೇ।
ಕಾಲರಾತ್ರೀ ಮಹಾಗೌರೀ ಸಿದ್ಧಿ ಧಾತ್ರೀ ಚ ನಾಮಕೀ
ನವದುರ್ಗಾ ಮಹಾದೇವಿ ಜಗನ್ಮಾತರ್ನಮೋಸ್ತುತೇ

ಎಂಬಂತೆ, ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರ ಘಂಟಾ,ಕೂಷ್ಮಾಂಡಾ,ಸ್ಕಂದಮಾತಾ, ಕಾತ್ಯಾಯಿನಿ, ಕಾಲ ರಾತ್ರಿ ಮಹಾಗೌರಿ ಹಾಗೂ ಸಿದ್ಧಿಧಾತ್ರೀ ಎಂಬುವವರೇ ನವದುರ್ಗೆಯರು. ಆ ಸಂದರ್ಭದಲ್ಲಿ ಎಲ್ಲಾ ದೇವಾಲಯ ಗಳಲ್ಲೂ ವಿಶೇಷವಾದ ದೇವ ಕಾರ್ಯಗಳನ್ನು ಮಾಡು

ಕಾರ್ತೀಕ ಮಾಸದ ದೀಪೋತ್ಸವ ಕಾರ್ಯಕ್ರಮದ ವೇಳೆ ಯಲ್ಲಿ ಶ್ರೀವೇಂಕಟೇಶ್ವರ ಸ್ವಾಮಿಯು ತನ್ನ ಪ್ರೀತಿಯ ಮಡದಿಗಾಗಿ ವಿಶೇಷವಾದ ಉಡುಗೊರೆಗಳನ್ನು ಕಳುಹಿಸುತ್ತಾನೆ. ಅಮೂಲ್ಯವಾದ ಮತ್ತು ಬೆಲೆ ಬಾಳುವ ಪೀತಾಂಬರ,ಕುಬುಸದವಸ್ತ್ರ,ಪವಿತ್ರ ತುಳಸಿ, ಅರಿಷಿಣ ಪತ್ರೆ ಮತ್ತು ಆಭರಣಗಳನ್ನು ಕಳುಹಿಸುತ್ತಾರೆ. ಸಾಲಂಕೃತ ವಾದ ಗಜೇಂದ್ರನ ಮೇಲೆ ಹೊರಿಸಿದ ಅನೇಕ ಉಡುಗೊರೆಗಳನ್ನು ಶ್ರೀಪದ್ಮಾವತೀ ದೇವಿಗೆ ಜನ್ಮ ದಿನೋತ್ಸವದ ಅಂಗವಾಗಿ ಕಳುಹಿಸಿ ಕೊಡಲಾಗುತ್ತದೆ. ಅಮ್ಮನವರಿಗೆ ಆ ದಿನ ಪದ್ಮಸರೋವರದಲ್ಲಿ ಅಭ್ಯಂಜನವನ್ನು ಮಾಡಿಸಲು ಉತ್ಸವದಲ್ಲಿ ಕರೆತರಲಾಗುತ್ತದೆ. ಜ್ಯೇಷ್ಠ ಮಾಸದಲ್ಲಿ ಐದು ದಿನಗಳ ಕಾಲ ತೆಪ್ಪೋತ್ಸವವನ್ನು ನೆರ ವೇರಿಸಲಾಗುತ್ತದೆ.ಶ್ರೀವೇಂಕಟೇಶ್ವರ ಹಾಗೂ ಶ್ರೀಪದ್ಮಾವತಿ ಅಮ್ಮ ನವರ ಉತ್ಸವಗಳಲ್ಲಿ ಚಾರಿತ್ರಿಕವಾಗಿ ಒಂದು ಅವಿನಾಭಾವ ಸಂಬಂಧವಿದೆ. ವಸಂತೋತ್ಸವದ ವೇಳೆಯಲ್ಲಿ ಶ್ರೀಪದ್ಮಾವತೀ ದೇವಿಗೂ ಕೂಡಾ ಸ್ವರ್ಣರಥೋತ್ಸವವನ್ನು ಎರಡು ದಿನಗಳ ಕಾಲ ಸಂಪನ್ನಗೊಳಿಸಲಾಗುವುದು. ವೈಶಾಖಮಾಸದಲ್ಲಿ ಶ್ರೀಪದ್ಮಾವತಿ ಪರಿಣಯವನ್ನು ನವಮಿ-ದಶಮಿ-ಏಕಾದಶಿ ಈ ಮೂರು ದಿನ ಗಳಂದು ಆಚರಿಸಲಾಗುತ್ತದೆ. ಆ ಸಮಯದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯ ವಿಗ್ರಹವನ್ನು ಕ್ರಮವಾಗಿ ಗಜವಾಹನ, ಅಶ್ವವಾಹನ ಹಾಗೂ ಗರುಡ ವಾಹನನನ್ನಾಗಿಸಿ ಕೊಂಡು ಬಹಳ ವಿಜೃಂಭಣೆ ಯಿಂದ ಕರೆತರಲಾಗುತ್ತದೆ.

**ಪೌರಾಣಿಕ ಹಿನ್ನೆಲೆ**

ಈ ಮೊದಲೇ ತಿಳಿಸಿದಂತೆ ಭೃಗುಮಹರ್ಷಿಯು ಸತ್ಯ ಲೋಕದಲ್ಲಿ ಬ್ರಹ್ಮನನ್ನೂ,ಕೈಲಾಸದಲ್ಲಿ ಶಿವನನ್ನೂ ನೋಡಿ ಕೊಂಡು, ವೈಕುಂಠಕ್ಕೆ ಬಂದಾಗ ಶ್ರೀಮನ್ಮಹಾವಿಷ್ಣುವು ಶ್ರೀಮನ್ಮ ಹಾಲಕ್ಷ್ಮೀ ದೇವಿಯಿಂದ ಪಾದ ಸೇವೆಯನ್ನು ಕೈಗೊಳ್ಳುತ್ತಾ ಯೋಗ ನಿದ್ರೆಯಲ್ಲಿದ್ದಾಗ, "ತಾನು ಬಂದಿದ್ದರೂ ಅಲಕ್ಷ್ಯೆಯಿಂದ ತನ್ನನ್ನು







ನೋಡದೇ ಇದ್ದ ವಿಷ್ಣುವಿನ ಮೇಲೆ ಕೋಪಗೊಂಡ ಋಷಿಯು ದೇವನ ಎದೆಗೆ ಕಾಲಿನಿಂದ ಘಾತಿಸುತ್ತಾನೆ. ಆಗಲೂ ಕೋಪಗೊಳ್ಳದ ವಿಷ್ಣುವು ಮಹರ್ಷಿಯನ್ನು ಉಪಚರಿಸುವ ನೆಪದಲ್ಲಿ ಹಣೆಯಲ್ಲಿರಬೇಕಾದ ಕಣ್ಣು ಕಾಲಿನದಲ್ಲಿದೆಯಲ್ಲಾ ಎಂದು ಕಾಲನ್ನೊತ್ತುವ ನೆಪದಿಂದ ಅಧೋಗತಿಯಲ್ಲಿದ್ದ ಅಹಂಕಾರವೆಂಬ ಕಣ್ಣನ್ನು ಒತ್ತಿ ಕಳೆದು ಬಿಡುತ್ತಾನೆ. ಎಚ್ಚರನಾದ ಮುನಿಯು ಕೃತಜ್ಞತೆಯಿಂದ ದೇವನಿಗೆ ನಮಿಸಿ ಹಿಂತಿರುಗುತ್ತಾನೆ. ಆದರೆ ತನ್ನ ಪತಿಗೆ ಅಗೌರವವನ್ನು ತೋರಿಸಿದರೂ ಆ ಮುನಿಯನ್ನು ಉಪಚರಿಸಿದ ಕೃತ್ಯಕ್ಕೆ ಕೋಪಗೊಂಡ ಶ್ರೀಲಕ್ಷ್ಮೀ ದೇವಿಯು ವೈಕುಂಠವನ್ನು ತೊರೆದು ಭೂಲೋಕಕ್ಕೆ ಬಂದು ಸ್ವರ್ಣಮುಖೀ ಸರೋವರದ ಬಳಿ ಕುಳಿತು ತಪಸ್ಸನ್ನಾಚರಿಸುತ್ತಾಳೆ. ಹನ್ನೆರಡು ವರ್ಷಗಳ ಗಾಢ ತಪಸ್ಸಿನ ನಂತರ ಹದಿಮೂರನೇ ವರ್ಷದಲ್ಲಿ ಕಾರ್ತೀಕ ಬಹುಳ ಪಂಚಮಿಯಂದು ಸ್ವರ್ಣಕಮಲದಿಂದ ಹೊರಬರುತ್ತಾಳೆ. ಅಂದು ಹೊಳೆ ಹೊಳೆಯುತ್ತಿದ್ದ ಉತ್ತರಾಷಾಢ ನಕ್ಷತ್ರವು ಭೂಮಿಯೆಡೆಗೆ ನೋಡುತ್ತಿದ್ದಾಗ, ಶ್ರೀಲಕ್ಷ್ಮಿಯು ಭೂಮಿಯಲ್ಲಿ ಒಂದು ದಿವ್ಯ ಶಿಶುವಿನ ರೂಪದಲ್ಲಿ ಆವಿರ್ಭವಿಸುತ್ತಾಳೆ. ಆಕಾಶರಾಜನು ಈ ಶಿಶುವನ್ನು ಪದ್ಮಾವತಿ ಎಂಬ ಹೆಸರನ್ನಿಟ್ಟು ಪ್ರೀತಿಯಿಂದ ಬೆಳೆಸುತ್ತಾನೆ. ಅದೇ ವೇಳೆಗೇ ಶ್ರೀ ಲಕ್ಷ್ಮೀ ದೇವಿಯನ್ನರಸುತ್ತಾ ಬಂದ ವಿಷ್ಣುವೂ ಶ್ರೀವೇಂಕಟೇಶ್ವರನಾಗಿ ಆಗಮಿಸಿ ಪದ್ಮಾವತಿಯನ್ನು ವಿವಾಹ ನಾಗಿದ್ದಾನೆ.

# ತುಳಸಿ ಹಬ್ಬ



**ದೀಪಾವಳಿ ಕಾರ್ತಿಕ ಮಾಸದಲ್ಲಿ ಶುಕ್ಲ ಪಕ್ಷದ 12 ನೇ ದಿನ ಅಂದರೆ ದ್ವಾದಶಿಯಂದು "ಉತ್ಥಾನದ್ವಾದಶಿ" ಹಬ್ಬವನ್ನು ಆಚರಿಸಲಾಗುತ್ತದೆ. ಈ ಪವಿತ್ರ ದಿನದಂದು ವಿಷ್ಣು ತುಲಸಿಯರ ವಿವಾಹ ಮಾಡುವುದು ಪಾರಂಪರ್ಯವಾಗಿ ಆಚರಿಸಲಾಗುತ್ತದೆ. ತುಳಸಿ ಗಿಡದೊಂದಿಗೆ ಬೆಟ್ಟದ ನೆಲ್ಲಿಕಾಯಿ ತುಂಬಿರುವ,ಗಿಡದ ಕೊಂಬೆಯನ್ನು ನೆಟ್ಟು ಪೂಜಿಸಲಾಗುತ್ತದೆ. ದೀಪಗಳಿಂದ ತುಳಸಿ ಬೃಂದಾವನವನ್ನು ಅಲಂಕರಿಸಲಾಗುವುದು. ಮಣ್ಣಿನ ಹಣತೆ, ನೆಲ್ಲಿಕಾಯಿಯ ದೀಪ ಹಚ್ಚುವುದನ್ನು ನೋಡುವುದೇ ಸಂತೋಷ ತುಲಸಿಯ ಜೊತೆಯಲ್ಲಿ ಭಗವಾನ್ ಶ್ರೀ ಕೃಷ್ಣನ ಮೂರ್ತಿಯನ್ನು ಇಟ್ಟು ಪೂಜಿಸಲಾಗುವುದು. ಅಂದು ದೀಪಾವಳಿ ಹಬ್ಬದಂತೆ ಪಟಾಕಿ-ಬಿರುಸು ಬಾಣ ಹಚ್ಚಿ ಸಂತೋಷಿಸುತ್ತಾರೆ.ಇದನ್ನು ಕಿರು ದೀಪಾವಳಿ ಎಂದು ಹೇಳುತ್ತಾರೆ.**



# ಕರ್ನಾಟಕದ ಭಕ್ತಿ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ

ಡಾ॥ ಆರ್.ವಾದಿರಾಜು
97317 33245

ಭಗವಂತ ಮತ್ತು ಭಕ್ತ ನಡುವಿನ ಸಂಬಂಧ ಇಂದಿನದಲ್ಲ ಪುರಾತನವಾದದ್ದು. ಭಕ್ತಿಯ ಪ್ರಾಚೀನತೆ 5000 ವರ್ಷಗಳಷ್ಟು ಹಿಂದಿನದು ಎಂದು ತಿಳಿದು ಬರುತ್ತದೆ. ವೇದಗಳ ಕಾಲದಿಂದಲೂ ಸಹ ಭಕ್ತಿಯ ಪ್ರಧಾನತೆಯನ್ನು ಗುರುತಿಸಬಹುದು. ಸಿಂಧೂ ನಾಗರೀಕತೆ ಹರಪ್ಪ ಮತ್ತು ಮೊಹೆಂಜೋದಾರೋಗಳಲ್ಲಿಯೂ ಸಹ ಭಕ್ತಿಯ ಕುರುಹು ಪತ್ತೆಯಾಗಿದೆ. ವೇದಗಳ ಕಾಲವನ್ನು ಕ್ರಿ.ಪೂ. ಸುಮಾರು 1200 ಎಂದು ಹೇಳಬಹುದು. ಆಗಿನ ಜನರು ಆ ಕಾಲದಲ್ಲಿ ಪ್ರಕೃತಿಯ ಎಲ್ಲ ಕಾರ್ಯಗಳಿಗೂ ಒಂದೇ ಒಂದು ಕಾರಣೀಭೂತವಾದ ಶಕ್ತಿಯಿದೆ ಎಂದು ನಂಬಿದ್ದರು.

ಈ ರೀತಿ ದಾರ್ಶನಿಕರ ಮೂಲಕ ಬಂದ ವೇದಗಳಲ್ಲಿ ತಾನೇತಾನಾಗಿ ಹೊರಹೊಮ್ಮಿರುವ ಭಕ್ತಿಯ ಪ್ರೀತಿ ಉಪನಿಷತ್ತುಗಳಲ್ಲಿ ಗುಪ್ತಗಾಮಿಯಾಗಿದೆ. ಇದರಲ್ಲಿ ಭಕ್ತಿ ಪ್ರಾರ್ಥನಾ ರೂಪವನ್ನು ತಾಳಿದೆ.

ಅಸತೋಮ ಸದ್ಗಮಯ
ತಮಸೋಮ ಜ್ಯೋತಿರ್ಗಮಯ
ಮೃತ್ಯೋಮ ಅಮೃತಂಗಮಯ

ಇಂತಹ ಪ್ರಾರ್ಥನೆಗಳಲ್ಲಿ ಭಕ್ತಿ ಭಾವದ ಹೊಳಪನ್ನು ಕಾಣಬಹುದು. ಭಕ್ತಿ ಎಂಬ ಪದವು ನಮಗೆ ಶ್ವೇತಾಶ್ವದ ಉಪನಿಷತ್ತಿನಲ್ಲಿಯೇ ಮೊಟ್ಟ ಮೊದಲು ಕಾಣಸಿಗುವುದು.

ಯಸ್ಯದೇವೇ ಪರಾಭಕ್ತಿಃ ಯಥಾ ದೇವೇ ತಥ ದೇವೇ ತಥಾಗುರೌ
ತಸ್ಯತೇ ಕಥಿತಾಹ್ಯರ್ಥಾ ಪ್ರಕಾಶಂತೇಹಾತ್ಮನಃ

ಎಂದು ಹೇಳುವಲ್ಲಿ ಭಕ್ತಿ ಎಂಬ ಪದವನ್ನು ಬಳಸಲಾಗಿದೆ.

ಮುಂಡಿ ಸೂತ್ರಗಳ ಕಾಲಕ್ಕೆ ಬಂದರೆ (ಕ್ರಿ.ಪೂ. 5-6 ನೇ ಶತಮಾನ)ಪಾಣಿನಿಯ ಸೂತ್ರಗಳಲ್ಲಿಯೂ ಭಕ್ತಿ ಎಂಬ ಪದವನ್ನು ಕಾಣುತ್ತೇವೆ.

ಶ್ರೀ ಮದ್ಭಗವದ್ಗೀತೆಯಲ್ಲಂತೂ ಭಕ್ತಿ ಒಂದು ಯೋಗವಾಗಿದೆ. ಶ್ರೀ ಕೃಷ್ಣನೇ ಕರ್ಮಮಾರ್ಗವನ್ನು ಕುರಿತು "ಗಹನಾಕರ್ಮಣೋಗತಿಃ'' ಎಂದಿದ್ದಾನೆ ವರ್ತನೆಯಲ್ಲೂ ಭಕ್ತಿಯು ಇರಬೇಕಾದ್ದು ಅತ್ಯವಶ್ಯವಾದುದು ಎಂದಿದ್ದಾರೆ. ಕ್ರಿ.ಪೂ. 500 ರಲ್ಲಿ ಪ್ರಾರಂಭವಾದ ಬೌದ್ಧ ಮತ್ತು ಜೈನ ಧರ್ಮಗಳ ಭಕ್ತಿಯ ಬೆಳವಣಿಗೆಯನ್ನು ಕಾಣಬಹುದು. ವೇದಗಳ ಕಾಲದಿಂದಲೂ ಬೆಳೆದು ಬಂದ ಭಕ್ತಿಯ ಪ್ರವಾಹ ತಮಿಳುನಾಡಿನ ಶೈವ - ವೈಷ್ಣವ ಸಂತರಿಂದ ಮತ್ತೆ ಪ್ರವಹಿಸಿ ಜನರಲ್ಲಿ ದೇವಾಲಯಗಳ ಪ್ರಾಮುಖ್ಯತೆಯ ಅರಿವು ಮೂಡಿಸಿದರು. ತುಂಬಾ ಕಷ್ಟಕರವಾಗಿರುವ ಸಂದರ್ಭದಲ್ಲಿ ಭಕ್ತಿ ಪಥವನ್ನು ಸಾಮಾನ್ಯ ಜನರಿಗೂ ಅನುಸರಿಸಲು ಸಾಧ್ಯವಾಗುವಂತೆ ಸರಳೀಕರಿಸಿರುವರು. ಭಕ್ತಿ ಸಾಧನೆಯಲ್ಲಿ ಪ್ರವೃತ್ತಿ ಮಾರ್ಗವನ್ನು ಅಳವಡಿಸಿ ಕೊಳ್ಳಲು ದಾರಿ ಮಾಡಿಕೊಟ್ಟರು.

ಇಪ್ಪತ್ತನೇ ಶತಮಾನ ವಿಜ್ಞಾನದಲ್ಲಿ ಮುಂದೆ ಇದ್ದರೂ ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದರೂ, ಸಹಾ ಭಕ್ತಿ ಮಾರ್ಗವನ್ನು ಜೊತೆಜೊತೆಯಾಗಿ ಕೈಗೊಂಡು ಕೃತಕೃತ್ಯತೆಯನ್ನು ಪಡೆದಂತಹ ಆಧುನಿಕ ಮಹಾ ವ್ಯಕ್ತಿಗಳಿಗೆ ಏನೂ ನಮ್ಮಲ್ಲಿ ಕೊರತೆಯಿಲ್ಲ. ರಾಮಕೃಷ್ಣ ಪರಮಹಂಸರು,ಅರವಿಂದರು,ರಮಣಮಹರ್ಷಿಗಳು ಮಹಾತ್ಮ ಗಾಂಧೀಜಿ ಅವರು ಮುಂತಾದವರೂ ಹೆಮ್ಮೆಯಿಂದ ಹೇಳಬಹುದಾದ ಶ್ರೇಷ್ಠ ಭಕ್ತರು ಇಂದಿಗೂ ನಮ್ಮಲ್ಲಿ ಭಕ್ತಿ ಮಾರ್ಗದ ಸಾಧನೆಯಲ್ಲಿ ತೊಡಗಿ ರುವವರನ್ನು ಕಾಣಬಹುದು.

ಹೀಗೆ ಸುಗುಣ ಹಾಗೂ ಸಾಕಾರ ಬ್ರಹ್ಮತತ್ವವನ್ನು ಒಪ್ಪಿಕೊಂಡು ಮುಂದುವರಿದ ಹಾಗೂ ಸಿದ್ದಿಯ ಹಂತವನ್ನು ಮುಟ್ಟುವ ಹರಿದಾಸರ ಭಕ್ತಿಯ ಸಾಹಿತ್ಯವನ್ನು ಕಾಣಬಹುದು. ಮುಕ್ತಿ ಬಯಸುವವನಿಗೆ ಭಕ್ತಿ ಬೇಕೆಂಬುದೇ ಹರಿದಾಸರೆಲ್ಲರ ಮತ. ಶ್ರೀಕೃಷ್ಣನ ಪಾದಸೇವೆ ಮುಕ್ತಿಕನ್ಯಾ ಸೇರಿವುದು ಎಂದರು. ವ್ಯಾಸರಾಯರು ಸೃಷ್ಟೀಶ ಸಿರಿ ವಿಜಯ ವಿಟ್ಟಲನ ಪದಪದ್ಮಾ ಮುಟ್ಟದ ಭಜಿಸಿ ಮುಕ್ತಿ ಪಡೆಯುವವರು ಎಂದರು ವಿಜಯದಾಸರು.

ಹೀಗೆ ಹರಿನಾಮ ಮಹಿಮೆ ಗುರು ಮೂಲಕ ಮುಕ್ತಿ ಸಾಧ್ಯ ಎಂಬ ತತ್ವಗಳು ಸಾಮಾನ್ಯವಾಗಿ ಎಲ್ಲಾ ಹರಿದಾಸರ ಕೃತಿಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಈ ಎಲ್ಲಾ ತತ್ವಗಳನ್ನು ನಂಬಿ ಇವುಗಳ ಆಧಾರದ ಮೇಲೆ ಹರಿದಾಸರು ಭಕ್ತಿ ಸಾಧನೆಗೆ ತೊಡಗಿದ್ದಾರೆ. ಹರಿದಾಸರು ಹಂಗಿಗಿಂತ ಹರಿ ನಾಮವೇ ಮಿಗಿಲೆಂಬ ಸಿದ್ಧಾಂತಕ್ಕೆ ಬಂದಿದ್ದಾರೆ.

ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ

ನಾಮದ ಬಲವೊಂದಿದ್ದರೆ ಸಾಕೋ

ಎಂದಿದ್ದಾರೆ.

ನಾಮ ಸಂಕೀರ್ತನೆ ಹರಿ ಭಕ್ತರ ಜೀವನದ ಉಸಿರು. ಹರಿದಾಸರು ಅನುದಿನವೂ ಹರಿನಾಮವನ್ನು ಭಜಿಸುತ್ತಿರುತ್ತಾರೆ.

ಹರಿದಾಸರು ಈ ನವವಿಧ ಭಕ್ತಿ ಮಾರ್ಗದ ಮೂಲಕ ತಮ್ಮ ಭಕ್ತಿಯನ್ನು ಅಭಿವ್ಯಕ್ತಿಸಿದ್ದಾರೆ ಸಂಬಂಧಿಸಿದ ವಿಷಯಗಳನ್ನು ಅವನ ಅನಂತಗುಣಗಳನ್ನು ಅವನ ಚೆಲುವಿನ ವರ್ಣನೆಗಳನ್ನು ಶ್ರದ್ಧೆಯಿಂದ ಕೇಳುವುದು ಶ್ರವಣ ಭಕ್ತಿ. ಭಗವಂತನಿಗೆ ಸಂಬಂಧಿಸಿದ ಯಾವುದೇ ವಿಷಯವಾಗಲಿ ಅದನ್ನು ಮನಸ್ಸಿಟ್ಟು ಕೇಳುವುದೇ ಶ್ರವಣ ಭಕ್ತಿ. ಹರಿದಾಸರಿಗೆ ಶ್ರವಣ ಭಕ್ತಿಯ ಮಹಿಮೆಯ ಅರಿವಿದೆ.ಆದುದರಿಂದಲೇ ತಮ್ಮ ಕೀರ್ತನೆಗಳಲ್ಲಿ ಈ ರೀತಿ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಪಾದರಾಯರು ಭಕ್ತಿ ಹಿರಿಮೆಯನ್ನು:-

ಭೂಷಣಕ್ಕೆ ಭೂಷಣ ಇದು ಭೂಷಣ
ಶೇಷಗಿರಿವಾಸ ಶ್ರೀವೆಂಕಟೇಶ

ಎಂಬ ಕೀರ್ತನೆಯನ್ನು ಕಿವಿಗೆ ಭೂಷಣ ವಿಷ್ಣು ಕಥೆ ಎಂದು ಸ್ಪಷ್ಟ ಪಡಿಸುವ ಮೂಲಕ ತೋರಿಸಿ ಕೊಟ್ಟಿದ್ದಾರೆ.

ವ್ಯಾಸರಾಯರು ಈ ರೀತಿ ಹೇಳಿದ್ದಾರೆ. "ಸಂತಸ ಸವಿ ಕೃಷ್ಣ ಚರಿತೆಯ ಕೇಳಿದವನೇ ಜಡಮತಿ ಕಿವುಡನೊ ಎಂದೆಂದಿಗೂ" ಎಂಬುದು ಅವರ ಭಾವನೆ. ಹರಿನಾಮವನ್ನು ಕೇಳದವ ಕಿವಿಯಿದ್ದು ಕಿವುಡನೆಂಬ ಅಭಿಪ್ರಾಯ ಅವರದು. ವಾದಿರಾಜರು 'ಅನುದಿನವು ಶ್ರವಣ ಮೇನನಾದಿ ಸಾಧನ ಮಾಡೋ' ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ. ಪುರಂದರದಾಸರಂತೂ ನವವಿಧ ಭಕ್ತಿ ಸುಳಾದಿಯನ್ನೇ ರಚಿಸಿದ್ದಾರೆ.

ವಿಜಯದಾಸರು ಹಿತಾಯಿತವನ್ನು ಹೇಳಿ ಎಚ್ಚರಿಸುತ್ತ

ಲೋಕವಾರ್ತೆಯ ನಿನ್ನ ಕಿವಿಗೆ ಕೇಳಿಸಬೇಡ
ಶ್ರೀಕಾಂತ ಚರಿತೆಯನ್ನು ಕೇಳಿದರಬೇಡ

ಎಂದು ಅದರ ಅವಶ್ಯಕತೆ ಮನದಟ್ಟಾಗುವಂತೆ ನುಡಿದಿದ್ದಾರೆ. ಪ್ರಸನ್ನ ವೆಂಕಟದಾಸರು ಶ್ರವಣ ಭಕ್ತಿಯನ್ನು ಪ್ರತಿಪಾದಿಸುತ್ತಾ

ಹರಿಕಥಾಶ್ರವಣ ಸಾಧನವೇ ಮುಕುತಿ ಇದಕೆ
ಸರಿ ಧರ್ಮ ವಿಲ್ಲೆಂದು ಪೇಳ್ವವು ಶ್ರುತಿತತಿ

ಎಂದು ಫಲ ಸಮೇತವಾಗಿ ಶ್ರವಣ ಭಕ್ತಿಯ ಹೆಚ್ಚಳವನ್ನು ಸಾರಿದ್ದಾರೆ.

ಭಗವಂತನ ಅನಂತ ಗುಣಗಳನ್ನು ಕೇಳುವುದು ಶ್ರವಣ ಭಕ್ತಿಯಾದರೆ ಅವನು ಹೇಳುವುದು, ಕೀರ್ತಿಸುವುದು, ಸ್ತುತಿಸುವುದು ಕೀರ್ತನ ಭಕ್ತಿ ಕರಣಗಳಿಂದಲೂ ಪೂರ್ಣ ಮನಸ್ಸಿನಿಂದಲೂ ಹರಿಕೀರ್ತನೆ ಮಾಡಬೇಕು.

**ಶ್ರೀ ಪಾದರಾಜರು ತಮ್ಮ ಒಂದು ಉಗಾಭೋಗದಲ್ಲಿ :-**


ಧ್ಯಾನವು ಕೃತಯುಗದಲ್ಲಿ ಯಜನ
ಯಜ್ಞವು ತ್ರೇತಾಯುಗದಲ್ಲಿ
ದಾನವಾಂತಕನ ದೇವತಾರ್ಚನೆಯು
ದ್ವಾಪರಯುಗದಲ್ಲಿ ಕಲಿಯುಗದಿ ಗಾನದಿ
ಕೇಶವಂ ಎಂದರೆ ಕೈಗೂಡುವನು ರಂಗವಿಠಲ

ಎಂದು ಕೇಶವನನ್ನು ಒಲಿಸಿಕೊಳ್ಳುವ ಪ್ರೀತಿಯನ್ನು ಹೇಳಿದ್ದಾರೆ.

ಈ ಅಚಲ ನಂಬಿಕೆಯನ್ನು ವ್ಯಕ್ತಪಡಿಸಿ ದೃಢಮನಸ್ಸಿನಿಂದ ಹೊರಟ ಹರಿದಾಸರು ಸಂಗೀತ ಪ್ರಪಂಚಕ್ಕೆ, ಸಾಹಿತ್ಯ ಪ್ರಪಂಚಕ್ಕೆ ಅಮೂಲ್ಯವಾದ ಕೀರ್ತನೆ ಎಂಬ ಪ್ರಾಕಾರದ ಕಾಣಿಕೆಯಿತ್ತು ಅದರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಹರಿದಾಸರು ಕೀರ್ತನ ಭಕ್ತಿಯ ಅಗತ್ಯವನ್ನು ಹೇಳಿ, ಹರಿಯ ಗುಣಗಳನ್ನು ಕೀರ್ತಿಸಿ ಕೃತಾರ್ಥರಾಗಬೇಕೆಂದು ಕೇಳುತ್ತಾರೆ.

ಕೀರ್ತಿಸಿ ಜನರೆಲ್ಲ ಹರಿಯ ಗುಣ
ಕೀರ್ತಿಸಿ ಜನರು ಕೃತಾರ್ಥರಾಗಿರೋ

ಎಂದು ಹೇಳಿದ ಶ್ರೀಪಾದರಾಜರು ಎಲುಬಿಲ್ಲದ ನಾಲಿಗೆ ಹೇಗೆ ಬೇಕಾದರೂ ಹೊರಳಬಲ್ಲದು ಆದರೆ ಅದಕ್ಕೆ ಭೂಷಣವಾದದ್ದು



ಹರಿಯ ನಾಮವೊಂದೆ ಎಂಬ ತಮ್ಮ ಅಭಿಪ್ರಾಯವನ್ನು ನಾಲಿಗೆ ಭೂಷಣ ನಾರಾಯಣನ ನಾಮ ಎಂಬ ಮಾತುಗಳಲ್ಲಿ ಚಿತ್ರಿಸಿದ್ದಾರೆ.

ಶ್ರವಣ ಕೀರ್ತನೆಗಳಿಂದ ಸಂಗ್ರಹಿಸಿದ ಭಗವನ್ನಾಮ ರೂಪ ಗುಣಗಳನ್ನು ಸ್ಮರಿಸುವುದು ಸ್ಮರಣ ಭಕ್ತಿ. ಈ ಸ್ಮರಣ ಭಕ್ತಿಯಲ್ಲಿ ನಾಮಸ್ಮರಣೆಗೆ ವಿಶೇಷ ಸ್ಥಾನವಿದೆ.

ವಾದಿರಾಜರು ಹರಿನಾಮಾಮೃತದ ಸ್ಮರಣೆಯನ್ನು ಕುರಿತು

ಪಾವನ ಮಾಡುವುದು ನಾಮಾಮೃತ ರಸ
ಪಾವನ ಮಾಡುವುದು

ಎನ್ನುತ್ತಾರೆ.

ನಿರ್ಮಲ ಮನಸ್ಸಿನಿಂದ ತ್ರಿಕರಣ ಪೂರ್ವಕವಾಗಿ ಶ್ರೀಹರಿಯ ಪಾದಗಳನ್ನು ಸದ್ಗುರುಗಳನ್ನು ಪಾದಗಳನ್ನು ಸೇವಿಸುವುದು ಪಾದಸೇವನ ಭಕ್ತಿ. ಶ್ರೀವಾದಿರಾಜರು ಶ್ರೀ ಹರಿಯನ್ನು ಕುರಿತು

ಬಿಡೆನು ಬಿಡೆನು ನಿನ್ನ ಚರಣ ಕಮಲವ, ಎನ್ನ
ಹೃದಯ ಮಧ್ಯದೊಳಿಟ್ಟು ಭಜಿಸುವೆ ಅನುದಿನ

ಎಂದು ತಮ್ಮ ದಿವ್ಯ ಭಕ್ತಿಯ ಮೂಲಕ ಅವನ ಪಾದಗಳನ್ನು ಕಟ್ಟಿ ತಮ್ಮ ಹೃದಯ ಮಧ್ಯದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಪ್ರಸನ್ನ ವೆಂಕಟದಾಸರು ತಮ್ಮ ಪಾದ ಸೇವನ ಭಕ್ತಿಯನ್ನು ಐದು ನುಡಿಗಳುಳ್ಳ ಕೀರ್ತನೆಯನ್ನು ಹೇಳಿದ್ದಾರೆ.

ಶ್ರೀರಮಣನ ಪಾದ ಸೇವನೆ ಮಾಡಿ ಬುಧರು
.............................................
ಮುಕುತರಿಗೆ ವ್ಯಕ್ತಪಾದ
ಭಕುತರಿಗೆ ಪೊಳೆವ ಪಾದ
ಶ್ರೀಕರ ಪ್ರಸನ್ವೆಂಕಟ ವಲ್ಲಭ
ಸುಖಮುನೀಶಗೋಷನಾಗಿಪ್ಪ

- ಎಂದಿದ್ದಾರೆ ವೆಂಕಟದಾಸರು

ಭಕ್ತಿಯ ವಿವಿಧತೆಯನ್ನು ಸಾಧಿಸಿದಂತಹ ಭಕ್ತರ ಸಾಹಿತ್ಯವನ್ನು ಸವಿಯುವ, ರಸಾಸ್ವಾದನೆ ಮಾಡುವ ದೃಷ್ಟಿಯಿಂದ ಆ ಭಕ್ತಿ ಸಾಹಿತ್ಯವನ್ನು ವಿವಿಧ ಭಕ್ತಿ ಭಾವಗಳಿಗನುಗುಣವಾಗಿ ಮಾಡಬಹುದು.ಹೀಗೆ ಇಡೀ ಭಕ್ತಿ ವಾಕ್ಯವನ್ನೇ ನೋಡುವ ಹೊಸನೋಟ ಬೇಕು. ಆಗ ಅದರ ಮಹತ್ವ ಇಂದಿನ ಜನಾಂಗಕ್ಕೆ ಅರಿವಾಗುತ್ತದೆ. ಆ ದೃಷ್ಟಿಯನ್ನು ತಂದುಕೊಳ್ಳುವುದು ಬಿಡುವುದು ಆಯಾ ವ್ಯಕ್ತಿಯ ತಂತ್ರ ಬುದ್ಧಿವಂತಿಕೆಗೆ ಸೇರಿದ್ದು.



# ಪ್ರಧಾನ ಪ್ರಕೃತಿ ಮಾತೆ ಶ್ರೀ ಲಕ್ಷ್ಮೀಃ

- ಶ್ರೀಮತಿ. ಸ್ನೇಹಾ ಜೋಗಳೇಕರ
94237 67609



ಲಕ್ಷ್ಮೀಃ ಈ ಶಬ್ದದ ವ್ಯುತ್ಪತ್ತಿ ಹೀಗಿದೆ. ಲಕ್ಷಯತಿ ಪಶ್ಯತಿ ನೀತಿಜ್ಞಮ್ ಲಕ್ಷ (ದರ್ಶನಾಂಕ ನಯೋಃ) ಈಃ + ಮುಟ್ ಚ ಇಲ್ಲಿ ಲಕ್ಷ ಎಂಬ ಪದಕ್ಕೆ ಒಂದು ನೂರು ಸಾವಿರ ಲಕ್ಷ, ಚಿಹ್ನೆ, ಗುರುತು, ಕುರುಹು, ಲಾಂಛನ, ಗಮನ, ಧ್ಯಾಸ, ಸೂಚನೆ, ನಟನೆ, ಮುಂತಾದ ಹಲವಾರು ಅರ್ಥಗಳಿವೆ. ಇದರಿಂದ ಲಕ್ಷ, ಲಕ್ಷಣ, ಲಕ್ಷ್ಮಣ, ಲಕ್ಷ್ಮ ಎಂಬ ಶಬ್ದಗಳು ರೂಪಗೊಂಡಿವೆ. ಇವುಗಳಲ್ಲಿ ಲಕ್ಷ್ಮಃ ಎಂದರೆ ಶ್ರೇಷ್ಠ. ಉತ್ತಮವಾದ ಪ್ರಧಾನವಾದ, ಮುಖ್ಯವಾದ ಕಲೆ, ಶುಭ ಚಿಹ್ನೆಯುಳ್ಳ ಎಂಬ ಅರ್ಥಗಳಿವೆ. ಲಕ್ಷ್ಮ ವನ್ನು ಉಳ್ಳವಳು ಲಕ್ಷ್ಮೀ,ಲಕ್ಷ್ಮೀ ಎಂಬ ಶಬ್ದವು ಇವೆಲ್ಲ ಅರ್ಥಗಳನ್ನೂ ಒಳಗೊಂಡಿ ರುವುದಲ್ಲದೇ ನೀತಿಜ್ಞನವನ್ನು ಗುರುತಿಸಿ, ಗಮನಿಸಿ, ಅವನನ್ನು ಅನುಗ್ರಹಿಸಿ, ಐಹಿಕ ಮುಷ್ಮಿಕ ಭಾಗ್ಯವನ್ನು ಕರುಣಿಸಿ,ದಿವ್ಯಕಾಂತಿಯ ಅಪರಿ ಮಿತ ಸೊಬಗಿನ ವೈಭವೋಪೇತವಾಗಿ ಕಂಗೊ ಳಿಸುವ ಮಂಗಳಕರವಾದ ಐಶ್ವರ್ಯ, ಯಶಸ್ಸು, ಸೌಭಾಗ್ಯಗಳ ಅಧಿದೇವತೆ ಎಂಬ ಬಹು ಮುಖ್ಯ ಅರ್ಥವನ್ನು ಒಳ ಗೊಂಡಿದೆ.

ಸೃಷ್ಟಿಯ ಆರಂಭದಲ್ಲಿ ಎಲ್ಲವೂ ಒಂದೇ ಆಗಿತ್ತು. ಅದು ಕಾಲ ದೇಶಗಳ ವಿಡಂಬಣೆಗಳಿಲ್ಲದ ಅನಂತ ಏಕತ್ವ ಅಲ್ಲಿದ್ದುದು ಶಕ್ತಿಯೊಂದೇ ಆ ಶಕ್ತಿಯಿಂದ ತಾವಸ, ರಾಜಸ, ಸಾತ್ವಿಕವೆಂಬ ಮೂರು ಗುಣಗಳು ಹುಟ್ಟಿದವು. ಆ ಮೂರು ಮಹಾಕಾಳಿ ಮಹಾಲಕ್ಷ್ಮಿ, ಮಹಾಸರಸ್ವತಿಯರೆಂಬ ಮೂರು ಮೂರ್ತ ರೂಪಗಳನ್ನು ಸೃಷ್ಟಿಸಿದವು. ಮಹಾಕಾಳಿ ತನ್ನ ಬಲದಿಂದ ಸರಸ್ವತೀ ಹಾಗೂ ಶಿವನನ್ನು ಮಹಾಲಕ್ಷ್ಮಿ ತನ್ನ ಸಾಮರ್ಥ್ಯದಿಂದ ಲಕ್ಷ್ಮೀ ಹಾಗೂ ಬ್ರಹ್ಮರನ್ನು, ಮಹಾಸರಸ್ವತೀ ತನ್ನ ಸಂಕಲ್ಪದಿಂದ ಗೌರಿ ಹಾಗೂ ವಿಷ್ಣುವನ್ನು ಸೃಷ್ಟಿಸಿದರು. ಸರಸ್ವತಿಯು ಬ್ರಹ್ಮನನ್ನು, ಲಕ್ಷ್ಮಿಯು ವಿಷ್ಣುವನ್ನು ಗೌರಿಯೂ ಶಿವನನ್ನು ಪರಸ್ಪರ ಇಚ್ಛಿಸಿ ವಿವಾಹವಾದರು. ಬ್ರಹ್ಮನೂ ವಿಶ್ವದ ಸೃಷ್ಟಿಯ ಕಾರ್ಯವನ್ನೂ ವಿಷ್ಣುವು ಪಾಲನೆಯ ಜವಾಬ್ದಾರಿಯನ್ನೂ ಶಿವನು ಲಯದ ಕೆಲಸವನ್ನೂ ವಹಿಸಿಕೊಂಡರು. ಸೃಷ್ಟಿ ಮೊದಲಾಯಿತು. ಸಾತ್ವಿಕ - ರಾಜಸ ತಾಮಸಗಳೆಂಬ ಈ ಮೂರು ಗುಣಗಳ ಮಹಾಶಕ್ತಿಯೇ ಒಂದು ಸ್ತ್ರೀ ಎಂಬುದು ಗಮನಾರ್ಹ.

ಅವಳಿಗೆ ನೂರಾರು ಹೆಸರು, ಯಾಕೆಂದರೆ ಅವಳು ಲಿಂಗಾತೀತಳು. ಲೋಕದ ಸಮಸ್ತ ದಿಕ್ಕುಗಳೂ ಅವಳೇ ತೇಜಃಪುಂಜವೂ ಗಾಢ ಕತ್ತಲೆಯೂ ಅವಳೇ. ಅವಳೇ ಜಗತ್ತಿನೆಲ್ಲ ಮೂರ್ತಿ ವಸ್ತುಗಳ ಪ್ರತೀಕ. ಅಮೂರ್ತವೂ ಅವಳದ್ದೇ ಲೋಕದಲ್ಲಿ ಕೇಳಿಬರುವ ಎಲ್ಲ ಶಬ್ದ ಸಂಗೀತಗಳ ಉತ್ಪತ್ತಿ ಅವಳಿಂದ ಜಾಗ್ರತ, ಸ್ವಪ್ನ ಸುಷುಪ್ತಿಗಳಲ್ಲಿ ಅವಳ ಇರವು. ಅವಳೇ ವೇದವಿದ್ಯೆ ಸಕಲದಲ್ಲಿ ಆಕೆಯ ನೆಲೆ.

**ತಾವರೆಯ ಪರಿಕಲ್ಪನೆ:-** ಲಕ್ಷ್ಮಿಯು ಪದ್ಮಾಲಯೆ, ತಾವರೆಯಲ್ಲಿ ಹುಟ್ಟಿ ಬಂದವಳು ಕಮಲವು ಆಕೆಯ ಆಸನ ಆಕೆಯ ಅನೇಕ ಹೆಸರುಗಳಲ್ಲಿ ಕಮಲಾ, ಪದ್ಮಾ ಸೇರಿವೆ. ತಾವರೆಗೆ ವಿಶಿಷ್ಟವಾದ ಆಧ್ಯಾತ್ಮಿಕ ಮಹತ್ವವಿದೆ. ಶ್ರೀಃ ಎಂದರೆ ಸೌಂದರ್ಯ ಮತ್ತು ಶಿಲವೆಂದು ಅರ್ಥ. ಕಮಲಾ ಎಂಬ ಹೆಸರೂ ಸಹ ಶೀಲ- ಸೌಂದರ್ಯಗಳ ಪ್ರತೀಕ. ಕಮಲದ ರೂಪ ವಿನ್ಯಾಸದಲ್ಲಿ ಸೌಂದರ್ಯವಿದೆ. ಹೂವು ಮತ್ತು ದಳಗಳು ಕೋಮಲತೆಯ ಮತ್ತು ಸೌಂದರ್ಯದ ಅಭಿವ್ಯಕ್ತಿಯಾಗಿದೆ. ಸೌಂದರ್ಯದ ದೇವತೆಗಳ ಸುಂದರ ಆತನ ಕಮಲ! ನೀರಿನಲ್ಲಿದ್ದರೂ ನೀರಿಗೆ ಅಂಟದ ಪುಷ್ಪ ಕಮಲ. ಪ್ರಪಂಚದಲ್ಲಿದ್ದರೂ ಪ್ರಾಪಂಚಿಕ ವಿಚಾರಕ್ಕೆ ಅಂಟದಿರಬೇಕು. ಸಾಧಕ ಜೀವಿ. ತಾವರೆಯ ದಳಗಳ

ಮೇಲೆ ನೀರಿನ ಹನಿಗಳು ನಿಲ್ಲುವುದಿಲ್ಲ. ಅಲೆಗಳ ಹೊಡೆತ ಎಷ್ಟೇ ಬಿರುಸಾಗಿದ್ದರೂ ಅದರಿಂದ ಕಮಲವು ನಾಶ ಹೊಂದುವುದಿಲ್ಲ. ಶೋಕ-ಮೋಹಾದಿಗಳಿಗೆ ಒಳಗಾಗದ ಸಂಯಮ ಅಲ್ಲಿ ಸಿದ್ಧಿಸುತ್ತದೆ. ಪ್ರಪಂಚದ ನಶ್ವರವಸ್ತುಗಳು ಆತ್ಮನಿಷ್ಠನನ್ನು ಆಕರ್ಷಿಸಲಾರವು ಆಸಕ್ತಿಯಿರುವಂತೆ ಕಂಡು ಬಂದರೂ ಅಲಿಪ್ತ ಪವಿತ್ರ ಭಾವನೆಯೇ ಅಲ್ಲಿನ ಸಂಯಮ ಮತ್ತು ಗ್ರಹಿಕೆ ನೀರಿಗೆ ಅಂಟ ದಿದ್ದರೂ ನೀರಿನ ಮೇಲೆಯೇ ನಿಂತಿದೆ ತಾವರೆ, ಆತ್ಮನಿಷ್ಠನು ಪ್ರಪಂಚದಿಂದ ನಿರ್ಲಿಪ್ತನಾಗಿಯೂ ಪ್ರಪಂಚದಲ್ಲಿಯೇ ಇರುತ್ತಾನೆ. ಇದು ಸಂತುಲನ ಮತ್ತು ಸಮತ್ವದ ದ್ಯೋತಕ, ಕೆಸರಿನಲ್ಲಿ ಹುಟ್ಟಿದರೂ ತಾವರೆ ಶುಭ್ರತ್ವವನ್ನು ಸಾಧಿಸುತ್ತದೆ. ಶುಭ್ರವರ್ಣದ ಮೃಣಾಲವನ್ನು ಅಲಂಬನ ಮಾಡಿಕೊಂಡು ಅರಳಿ ನಿಲ್ಲುತ್ತದೆ. ದರ್ಶನ ಶಾಸ್ತ್ರದ ಪ್ರಕಾರ ಸತ್ತ್ವಗುಣದ ಅಲಂಬನದಿಂದಲೇ ಆಧ್ಯಾತ್ಮಿಕ ಆದರ್ಶ ಮೂಡುತ್ತದೆ. ತಾವರೆಯು ಅಂತಹ ಸಾಧನೆಯ ಪ್ರತೀಕ, ಕೊನೆಯದು ಪ್ರಸನ್ನತೆ. ಆತ್ಮನಿಷ್ಠನ ನಿರಂಜನತ್ವದ ದ್ಯೋತಕ, ತಾವರೆಯ ಪ್ರಫುಲ್ಲತೆ ಅರಳುವಿಕೆಯನ್ನು ನಗುವಿನೊಡನೆ ಹೋಲಿಸಿದೆ. ಆದ್ದರಿಂದಲೇ ಪ್ರಫುಲ್ಲತೆಯ ಪ್ರಸನ್ನತಾ ವಾಚಕವಾಗಿದೆ.

ಸಂಸ್ಕೃತ ಸಾಹಿತ್ಯದಲ್ಲಿ ಜೀವನವು ಜಲ ಪರ್ಯಾಯವಾಚಕ - ಜಲಗೋಳದ ಮೇಲೆ ತಾವರೆ! ಜೀವನದ ಪ್ರಾಕೃತಿಕ ಪರಿಸ್ಥಿತಿಗಳ ಮೇಲೆ ಆಧ್ಯಾತ್ಮಿಕ ಆದರ್ಶ! ಪರಿಸ್ಥಿತಿಗಳ ಪ್ರಭಾವದ ಮೇಲೆಯೇ ಈ ಆದರ್ಶ ಮೂಡಬೇಕು. ಜೀವನದಲ್ಲಿದ್ದರೂ ವಿಷಮ ಪರಿಸ್ಥಿತಿಗಳಿಗೆ ಒಳಗಾಗದೆ ಸಂಯಮ ಸಾಧನೆಗಳಿಂದ ಸಮತ್ವ ಪ್ರಸನ್ನತೆಗಳನ್ನು ಸಾಧಿಸಬೇಕು ಎಂಬುದು ಜೀವನದಲ್ಲಿ ಕಲಿಸುತ್ತದೆ. ಈ ಸಮನ್ವಯ ಸಂತುಲಿತ - ಪ್ರತಿಕ ಲಕ್ಷ್ಮಿಯ ಆಸನವಾಗಿ ತಾವರೆಯ ಕಲ್ಪನೆಯಾಗಿದೆ. ಪರಾಶಕ್ತಿ. ದೇವೀಶಕ್ತಿಗಳೆಲ್ಲವೂ ಮಹಾಲಕ್ಷ್ಮಿಯ ಮೂಲದಲ್ಲೇ ಅಡಗಿವೆ. ಈಕೆ ಪರಾಶಕ್ತಿ ಎಲ್ಲ ವಿಕೃತಿಗಳ ಪ್ರಧಾನ ಪ್ರಕೃತಿ, ಪ್ರಪಂಚವೆಲ್ಲಾ ಈಕೆಯಿಂದಲೇ ಪ್ರಕಟಿತ ಅವ್ಯಕ್ತವಾಗಿ ಸರ್ವತ್ರ ವ್ಯಾಪಿಸಿರುವ ಈಕೆ ಭಕ್ತಾನುಗ್ರಹಕ್ಕಾಗಿ ತತ್ಕಾಲೋಚಿತವಾದ ಗುಣ ರೂಪವನ್ನು ಧರಿಸಿದ್ದಾಳೆ. ಮಹಿಷಾಸುರನಿಂದ ಪರಾಜಿತರಾಗಿ ನೊಂದ ದೇವತೆಗಳು ಅವನ ಪ್ರಾಬಲ್ಯವನ್ನು ಅಡಗಿಸಲು ಯೋಚಿಸಿದರು. ಬ್ರಹ್ಮ- ವಿಷ್ಣು ರುದ್ರರೇ ಮೊದಲಾದವರು ತಮ್ಮ ತೇಜಸ್ಸುಗಳನ್ನು ಕೂರಿಸಿದಾಗ ಶಕ್ತಿ ದೇವತೆ ಮೈದೋರಿದ ಆಕೆಯನ್ನು ಮಹಾಲಕ್ಷ್ಮಿಯೆಂದು ಕರೆದು ಮಾಡಿದ ಸ್ತೋತ್ರ.

ಅಕ್ಷಸ್ರಕ್ ಪರಶೂ ಗದೇಶು ಕ ಕುಲಿಶಂ ಪದ್ಮಂ ಧನುಷ್ಕುಂಡಿಕಾಂ
ದಂಡಂ ಶಕ್ತಿಮಸಿಂ ಚ ಚರ್ಮ ಜಲಜಂ ಘಂಟಾಂ ಸುರಾಭಾಜನಮ್
ಶೂಲಂ ಪಾಶಸುದರ್ಶನೇ ಚ ದಧತಿಂ ಹಸ್ತೈಃ ಪ್ರವಾಲಪ್ರಭಾಂ
ಸೈವೇ ಸೈರಿಭಮರ್ದಿನೀಮಿಹ ಮಹಾಂ ಲಕ್ಷ್ಮೀಂ ಸರೋಜಸ್ಥಿತಾಂ (ದುರ್ಗಾಸಪ್ತಶತೀ ಧ್ಯಾನ ಶ್ಲೋಕ)

ಲಕ್ಷ್ಮಿಯ ವಾಹನ ಸಾಧಾರಣವಾಗಿ ಉಲೂಕವೆಂದಿದ್ದರೂ ಯುದ್ಧಕಾಲದಲ್ಲಿ ಆಕೆ ರಜೋಗುಣದ ದೇವತೆಯಾಗಿ ಸಿಂಹವಾಹನೆಯಾಗು ವುದುಂಟು ಆಕೆ ಸರ್ವಭೂತಗಳ ಒಡತಿಯೆಂಬ ವಿಷಯ ಶ್ರೀಸೂಕ್ತದಲ್ಲಿ ಕಾಣಬಹುದು. ಆಕೆ ಸ್ತುತಿಪೂರ್ವಕವಾಗಿ ಆವ್ಹಾನಿಸುವಾಗ - ಗಂಧ ದ್ವಾರಾಂ.... ಈಶ್ವರೀಂ ಸರ್ವ ಭೂತಾನಾಂ'' ಎಂದು ಹೇಳಲಾಗುತ್ತದೆ. ದುರ್ಗಾಸಪ್ತಶತಿಯ ಪ್ರಕಾರ ಪರಾಶಕ್ತಿತ್ವದ ಮಹಾಲಕ್ಷ್ಮಿಯು ಶಕ್ತಿಯ ಅವ ತಾರ, ವಿಷ್ಣುವಿನ ಅಷ್ಟಶಕ್ತಿಗಳಾದ ಶ್ರೀ - ಭೂ, ಸರಸ್ವತೀ, ಪ್ರೀತಿ - ಕೀರ್ತಿ, ಶಾಂತಿ, ಪುಷ್ಟಿ ತುಷ್ಟಿಗಳ ಪ್ರತೀಕವೇ ಲಕ್ಷ್ಮಿಯೆಂದು ಪದ್ಮಪುರಾಣವು ಹೇಳು ತ್ತದೆ. ಇನ್ನು ಲಲಿತಾ ಸಹಸ್ರನಾಮದಲ್ಲಿ ಶ್ರೀ ಮಾತ್ರೆನಮಃ ಎಂಬುದು ಈಕೆಯ ಮೊದಲನಾಮ ಇಲ್ಲಿನ ಶ್ರೀ ಶಬ್ದದಲ್ಲಿರುವ ಶ - ರ-ಈ ಅಕ್ಷರಗಳು ಕ್ರಮವಾಗಿ ಪರಬ್ರಹ್ಮದ ಸತ್ - ಚಿತ್- ಆನಂದಗಳನ್ನು ಸೂಚಿಸುವುದೆಂದು ವ್ಯಾಖ್ಯಾನಕಾರರ ಮತ, ಎಂಬುದು ಲಕ್ಷ್ಮೀಯ ಬೀಜಮಂತ್ರ ಇಲ್ಲಿನ ಅನು ಸ್ವಾರವು ಪ್ರಪಂಚದ ಪ್ರಕೃತಿಭೂತತ್ವದ ಚಿಹ್ನೆಯೆಂದು ಮಂತ್ರಶಾಸ್ತ್ರದ ಹೇಳಿಕೆ, ಆದ್ದರಿಂದ ಶ್ರೀಃ ಎಂಬುದು ಸಚ್ಚಿದಾನಂದ ಸ್ವರೂಪದ ಮತ್ತು ಎಲ್ಲಾ ಭೂತ ಶಕ್ತಿಗಳ ಏಕೀಕೃತ ಸಂಕೇತವೆನ್ನಲಾಗುತ್ತದೆ. ಶ್ರೀ ಲಕ್ಷ್ಮಿಯೂ ವಿಶ್ವರೂಪಿಯಾಗಿ ಸರ್ವಸಿದ್ಧಾಂತ ಮಾರ್ಗಸ್ಥಳಾಗಿ - ಸರ್ವತತ್ವ ಪ್ರಸೂತಿಕಾ ಎನಿಸಿ - ವಿಶ್ವೇಶ್ವರಿಯಾಗಿ ಯೋಗಿಲಿಂಗಾ ಧಾರಣೆಯಾಗಿ ಶಕ್ತಿ ಬೀಜಾತ್ಮಕಳಾಗಿ ಶ್ರೀಮಹಾಲಕ್ಷ್ಮೀ ಎನ್ನಿಸಿದ್ದಾಳೆ. ಇಂತಹ ಶ್ರೀ ಶಕ್ತಿಯನ್ನು ನಮಿಸುತ್ತಾ ಕೊನೆಯದಾಗಿ:-

**ನಮಸ್ತೇ ಗರುಡಾರೂಢೇ ಕೋಲಾಸುರ ಭಯಂಕರೀ**
**ಸರ್ವಪಾಪಹರೇ ದೇವಿ ಮಹಾಲಕ್ಷ್ಮೀ ನಮೋಽಸ್ತುತೇ॥**





# ವಿಜಯನಗರದ ಅರಸರ ದಾನ

ಡಾ॥ ಕೆ. ರಮಾನಂದ
99010 78969







ಸಂಪದ್ಭರಿತವಾದ ಕರ್ನಾಟಕವನ್ನು ಅನೇಕ ರಾಜವಂಶಗಳು ಆಳಿದವು. ಬನವಾಸಿಯ ಕದಂಬರು, ತಲಕಾಡಿನ ಗಂಗರು,ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಳಚೂರ್ಯರು, ದ್ವಾರಸಮುದ್ರದ ಹೊಯ್ಸಳರು, ದೇವಗಿರಿಯ ಯಾದವರು, ವಿಜಯನಗರದರಸರು, ಮೈಸೂರಿನ ಒಡೆಯರು, ಈ ರಾಜವಂಶಗಳು ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ವಿಜಯನಗರ ಸಾಮ್ರಾಜ್ಯ ಮಹತ್ವದ ಘಟನಾವಳಿಗಳನ್ನು ಇತಿಹಾಸದಲ್ಲಿ ಮೂಡಿಸಿ ಮೆರೆಯಾಯಿತು. ಕರ್ನಾಟಕದ ಸುವರ್ಣಯುಗವೆಂಬ ಖ್ಯಾತಿ ಈ ಸಾಮ್ರಾಜ್ಯದ ನಿರ್ಮಾಪಕರು ಸಾಕಷ್ಟು ಶ್ರಮವಹಿಸಿ ಸಾಮ್ರಾಜ್ಯವನ್ನು ಕಾಪಾಡಿದುದರಿಂದಲೂ ಹಾಗೂ ತಮ್ಮ ದಕ್ಷತೆಯ ಆಡಳಿತದಿಂದ ಪ್ರಜಾಜನಗಳಿಗೆ ಸುಖವನ್ನುಂಟು ಮಾಡಿದುದರಿಂದರಿಂದಲೂ ಬರಲು ಸಾಧ್ಯವಾಯಿತು. ವಿಜಯನಗರ ಸ್ಥಾಪನೆಯ ಪೂರ್ವರಂಗದಲ್ಲಿ ಕರ್ನಾಟಕದ ಹಾಗೂ ದಕ್ಷಿಣ ಭಾರತದ ಸ್ಥಿತಿಗತಿಗಳು ಹೇಗಿದ್ದವೆಂಬುದನ್ನು ಪರಾಮರ್ಶಿಸಿದರೆ ವಿಜಯನಗರ ಸಾಮ್ರಾಜ್ಯವು ಚರಿತ್ರೆಯಲ್ಲಿ ಪ್ರಧಾನಸ್ಥಾನ ಪಡೆದುಕೊಳ್ಳಲು ಕಾರಣವಾದ ಮೂಲ ಅಂಶಗೋಚರಿಸುತ್ತದೆ.

ವಿಜಯನಗರದರಸರು ಹಿಂದೂಧರ್ಮವನ್ನು ರಕ್ಷಿಸುವಲ್ಲಿ ಸಮರ್ಥರಾಗಿದ್ದರು. ಪ್ರಾಚೀನ ವರ್ಣಾಶ್ರಮಧರ್ಮದ ಪಾಲನೆ ವಿಜಯನಗರದರಸರ ಕಾಲದಲ್ಲಿ ಮುಂದುವರೆದುಕೊಂಡು ಬಂದಿತ್ತು.ವಿಜಯನಗರದ ಧಾರ್ಮಿಕ ಇತಿಹಾಸವನ್ನು ಗಮನಿಸಿದಾಗ ಅನೇಕ ಅಂಶಗಳು ಗೋಚರಿಸುತ್ತವೆ. ವಿಜಯನಗರದ ಅರಸರ ಶಾಸನಗಳಲ್ಲಿ ಆ ಕಾಲದ ಧಾರ್ಮಿಕ ವಿಚಾರದ ಬಗೆಗೆ ಅನೇಕ ಶಾಸನಗಳು ಬೆಳಕು ಚೆಲ್ಲುತ್ತವೆ. ವಿಜಯನಗರದರಸರು ಕೇವಲ ವೀರರು ಮಾತ್ರ ವಲ್ಲ.ಅನೇಕ ದಾನಗಳನ್ನು ನೀಡುವಂತಹ ಉದಾತ್ತರಾಗಿದ್ದರು. ಧಾರ್ಮಿಕ ದೃಷ್ಟಿಯಿಂದ ನೋಡಿದಾಗ ಅಲ್ಲಿ ಎಲ್ಲ ಮನೆತನದವರೂ ಸೌಹಾರ್ದದಿಂದ ಬದುಕುತ್ತಿದ್ದ ಸಂಗತಿ ಅಚ್ಚರಿಯನ್ನುಂಟು ಮಾಡುತ್ತದೆ. ವಿಜಯನಗರದರಸರು ಅನೇಕ ಅಗ್ರಹಾರಗಳನ್ನು ನಿರ್ಮಾಣ ಮಾಡಿ ದಾನ ಮಾಡಿದ ವಿಷಯಗಳನ್ನು ಹಲವಾರು ಶಾಸನಗಳು ಮುಕ್ತ ಕಂಠ ದಿಂದ ಪ್ರಶಂಸೆ ಮಾಡಿವೆ.

ದೊರೆ ಕೃಷ್ಣದೇವರಾಯನು ಬಹುಮನಿ ಅರಸರನ್ನು ಹೊಡೆದಟ್ಟುವಲ್ಲಿ ಸಫಲನಾದವನು. ರಾಯನ ರಾಜ್ಯದಲ್ಲಿ ಸುಖ ಶಾಂತಿ ಸೌಹಾರ್ದಗಳು ನೆಲಸಿದ್ದವು ಹಿಂದೂಧರ್ಮವನ್ನು ರಕ್ಷಣೆಯನ್ನು ಮಾಡಿದ ಕೃಷ್ಣದೇವರಾಯನ ಬಗೆಗೆ ಪ್ರಜೆಗಳಲ್ಲಿ ಆದರ ಅಭಿಮಾನಗಳುಂಟಾಗಿದ್ದವು. ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರವು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಿತು. ಕಲೆ-ವಾಸ್ತುಶಿಲ್ಪ-ಸಾಹಿತ್ಯ-ಸಂಗೀತ ನರ್ತನಗಳು ಪ್ರೋತ್ಸಾಹಿತಗೊಂಡವು. ಚಕ್ರವರ್ತಿಯ ಧರ್ಮ ಶ್ರದ್ಧೆಯ ದ್ಯೋತಕವಾಗಿ ಆತನು ಕಟ್ಟಿಸಿದ ದೇವಸ್ಥಾನಗಳು ಹಾಗೂ ನೀಡಿದ ದಾನ ದತ್ತಿಗಳನ್ನು ನೋಡಬಹುದು. ಚಕ್ರವರ್ತಿ ತನ್ನ ತಾಯಿಯ ನೆನಪಿಗಾಗಿ ನಾಗಲಾಪುರವನ್ನು ಕಟ್ಟಿಸಿದ. ಶ್ರೀಕೃಷ್ಣ ದೇವರಾಯನು ತಿರುಪತಿಯ ದೇವರಿಗೆ ಅನೇಕ ದಾನಗಳನ್ನು ನೀಡಿದನು. “ಭುವನ ಭರಣ ಸಾವಧಾನಾಯ ವೇಂಕಟೇಶಾಭಿ ದಾನಾಯ ಶೇಷಾಚಲನಿವಾಸಾಯ ಶ್ರೀನಿವಾಸಾಯ ದತ್ತಮಿದಂ ಧರ್ಮ ಶಾಸನಂ” ದೇವರಿಗೆ ಅನೇಕ ತರಹದ ಆಭರಣಗಳನ್ನು ಕಿರೀಟ, ಪದಕ ಮುಂತಾದವುಗಳನ್ನು ನವರತ್ನ ಪ್ರಭಾವಳಿಗಳನ್ನೂ ಮಾಡಿಸಿಕೊಟ್ಟನು. ಕನಕಾಭಿಷೇಕ ಹಾಗೂ ಇತರ ಅಭಿಷೇಕಗಳ ಏರ್ಪಾಡು ಮಾಡಿದನು.

ದೊರೆಯು ಏಳನೇ ಬಾರಿ ತಿರುಪತಿಗೆ ಬಂದಾಗ ಆ ದಿನ ತಿರುಮಲೆಗೆ ಚಿತ್ತೈಸಿ ತಿರುವೇಂಗಳನಾಥನ ದೇವರನ್ನೂ ದರ್ಶಿಸಿ ದೇವರಿಗೆ ನವರತ್ನ ಕೀಲಿತವಾದ ಪೀತಾಂಬರವನ್ನು, ಮುತ್ತು ಮಾಣಿಕ್ಯದ ನೀಲ ಪಚ್ಚೆ ಇಕ್ಕಿದ ಕುಲ್ಲಾಯಿ, ಒಂದು ನವರತ್ನ ಖಚಿತವಾದ ಚಾಮರ ಕಾಣಿಕೆಗೆ ಹತ್ತು ಸಾವಿರ ವರಹವನೂ, ಒಂದು ಪದಕವನ್ನು ಸಮರ್ಪಿಸಿ ತಮ್ಮ ದೇವಿಯರ ಕೈಯಲ್ಲಿ ನವರತ್ನ ಪದಕವನ್ನು ಸಮರ್ಪಣೆ ಮಾಡಿಸಿದರೆನ್ನುವ ಒಕ್ಕಣೆ ಈ ಸಂದರ್ಭದಲ್ಲಿ ಬರೆಯಿಸಿದ ಧರ್ಮಶಾಸನದಲ್ಲಿದೆ.”

ಕೃಷ್ಣದೇವರಾಯನ ಶಾಸನಗಳು ಕನ್ನಡ, ತಮಿಳು, ತೆಲುಗು ಲಿಪಿಗಳಲ್ಲಿವೆ. ರಾಯನಂತೆಯೇ ಅವನ ಅಧಿಕಾರಿಗಳಾದ ಗೋವಿಂದ ಸಾಳುವ ತಿಮ್ಮಣ್ಣ ದಂಡನಾಯಕ ಓಬಳನಾಯ್ಕರ್ ಕೊಂಡಮಿರಸಯ್ಯ





ದೇವರಿಗೆ ದಾನಗಳನ್ನು ನೀಡಿದ ವಿಷಯ ಬರೆದು ಕೊರೆಯಿಸಿದ ಶಾಸನಗಳಿಂದ ತಿಳಿದುಬರುತ್ತದೆ. ಯಳಂದೂರಿನ 168 ನೇ ಶಾಸನ ಸಾಳುವ ಗೋವಿಂದನು ತಿಳಿಸುತ್ತದೆ. ಶ್ರೀಕೃಷ್ಣದೇವರಾಯನ ಮಲತಮ್ಮನಾದ ಅಚ್ಯುತ ದೇವರಾಯನು ಅನೇಕ ದಾನಗಳನ್ನು ಮಾಡಿದನೆಂದು ಶಾಸನಗಳು ತಿಳಿಸುತ್ತವೆ. ಪೆದ್ದಿರಾಜನು ಅಚ್ಯುತರಾಯನಿಗೆ ಬಳಿತಾಗಲೆಂದು ಶ್ರೀರಂಗಪಟ್ಟಣದ ಬ್ರಾಹ್ಮಣರಿಗೆ ದಾನ ನೀಡಿದ ವಿಷಯ ಶಾಸನವೊಂದರಲ್ಲಿ ಇದೆ.

ಕೃಷ್ಣದೇವರಾಯನಂತೆಯೇ ಅಚ್ಯುತರಾಯನೂ ತಿರುಪತಿಯ ದೇವರಿಗೆ ಉದಾರವಾಗಿ ದಾನಮಾಡಿದನು. ಕ್ರಿ.ಶ. 1531 ರ ಶಾಸನವೊಂದು ರಾಯನ ಕಾರ್ಯವನ್ನು ಹೀಗೆ ಪ್ರಸ್ತಾಪಿಸುತ್ತದೆ. ಶ್ರೀವೀರ ಪ್ರತಾಪ, ಶ್ರೀವೀರ ಅಚ್ಯುತರಾಯ ಮಹಾರಾಯರು ತಿರುವೇಂಗಳನಾಥ ದೇವರ ದಿವ್ಯ ತೀರ್ಥವಾದ ತಿರುಪತಿ ಚಕ್ರತೀರ್ಥ ತಮಗೆ ಚರ್ತುವಿಧ ಪುರುಷಾರ್ಥ ಸಿದ್ಧಿ ಆಗುವ, ಪುನಃ ಪ್ರತಿಷ್ಠೆಯ ಮಾಡಿಸಿ ಶಿಲೆಯಲ್ಲಿ ಸೋಪಾನ ಪಂಕ್ತಿಯನ್ನು ಮಾಡಿಸಿ ಸಂಧ್ಯಾವಂದನೆ ಮಂಟಪವನ್ನು ಕಟ್ಟಿಸಿ ನಾಲ್ಕು ದಿಕ್ಕಿನಲ್ಲಿ ಸುದರ್ಶನ ಶಿಲೆಗಳನ್ನು ಸ್ಥಾಪನೆ ಮಾಡಿಸಿ ಎಂದು ಶಾಸನ ದಲ್ಲಿದೆ.

ವಿಜಯನಗರದರಸರು ದಾನಧರ್ಮಗಳಿಂದ ಉದಾತ್ತದಾನಿ ಪುರುಷರಾಗಿ ಧರ್ಮ ಸಹಿಷ್ಣತೆಯನ್ನು ಉಳ್ಳವರಾಗಿದ್ದರು. ಶೃಂಗೇರಿಯ 18 ಕಡತಗಳು ವಿಜಯನಗರದ ದೊರೆಗಳ ಧಾರ್ಮಿಕ ವೃತ್ತಿಯ ಬಗೆಗೆ ಉಲ್ಲೇಖ ನೀಡುತ್ತದೆ. ಹೀಗೆ ವಿಜಯನಗರದರಸರ ಸಂಬಂಧ ಪ್ರಖ್ಯಾತ ಕ್ಷೇತ್ರ ತಿರುಪತಿ ತಿರುಮಲೆಯೊಂದಿಗೆ ಇದ್ದ ವಿಷಯ ಗೊತ್ತಾಗುತ್ತದೆ ಇಷ್ಟೇ ಅಲ್ಲ ಈ ನಿಟ್ಟಿನಲ್ಲಿ ಅನೇಕ ಸಂಶೋಧನೆಗಳು ನಡೆದಾಗ ಅನೇಕ ಹೊಸ ವಿಷಯಗಳೂ ಅಗಾಧವಾದ ವಿಷಯಗಳೂ ತಿಳಿದು ಬರುತ್ತವೆ. ಧರ್ಮ ಸಹಿಷ್ಣತೆಯ ವಿಷಯದಲ್ಲಿ ಎಲ್ಲಾ ಕರ್ನಾಟಕದ ರಾಜಮನೆತನಗಳಂತೆಯೇ ವಿಜಯನಗರದ ರಾಜಮನೆತನಕ್ಕೂ ಅನ್ವಯಿಸುತ್ತದೆ. ಇದರ ಬಗೆಗೆ ಹೆಚ್ಚಿನ ಸಂಶೋಧನೆಗಳ ಅವಶ್ಯಕತೆ ಇದೆ.

**ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳನ್ನು ಕ್ಷೀರ್ಣಾವ ಉತ್ಸವ, ಪ್ಲವೋತ್ಸವವೆಂದು ಹೆಸರು. ಜ್ಯೇಷ್ಠಮಾಸದ ಹುಣ್ಣಿಮೆಗೆ ಐದು ದಿನಗಳ ಕಾಲ ಈ ಉತ್ಸವಗಳು ನಡೆಯುತ್ತವೆ. ಮೊದಲ ದಿನ ಏಕಾದಶಿಯಂದು ಶ್ರೀಕೃಷ್ಣನಿಗೆ, ಎರಡನೆಯ ದಿನ ದ್ವಾದಶಿ ಯಂದು ಶ್ರೀಸುಂದರರಾಜಸ್ವಾಮಿಗೆ, ಕೊನೆಯ ಮೂರು ದಿನಗಳು ಪದ್ಮಾವತಿ ಅಮ್ಮನವರಿಗೆ ಅಲ್ಲಿರುವ ಪದ್ಮಸರೋವರದಲ್ಲಿ ತೆಪ್ಪೋತ್ಸವಗಳು ನಡೆಯುತ್ತವೆ. ಈ ಸೇವೆಯನ್ನು ಸಂದರ್ಶಿ ಸುವವರಿಗೆ ಅವರಲ್ಲಿ ಮನೆಮಾಡಿರುವ ಅಜ್ಞಾನದ ಕತ್ತಲೆಯನ್ನು ಹೊಡೆದೊಡಿಸಿ, ನಿರ್ಮಲವಾದ ಜ್ಞಾನದ ಬೆಳಕನ್ನು ನೀಡಿ ಸಮಸ್ತ ಸಂಪತ್ತನ್ನು ಪ್ರಸಾದಿಸುತ್ತದೆಂದು ಭಕ್ತರ ನಂಬಿಕೆ.ಈ ರೀತಿ ಶ್ರೀಶ್ರೀನಿವಾಸನ ಹೃದಯದ ಅರಸಿಯಾದ, ಪಟ್ಟದ ರಾಣಿಯಾದ ಪದ್ಮಾವತಿ ಅಮ್ಮನವರು ಆರ್ಚಾಮೂರ್ತಿಯಾಗಿ ನೆಲೆಸಿರುವ ಈ ತಿರುಚಾನೂರು ಕ್ಷೇತ್ರವು ಪ್ರತಿ ನಿತ್ಯವೂ ವೈಭವದಿಂದ, ನಿತ್ಯವೂ ಉತ್ಸವಗಳೊಂದಿಗೆ ಶೋಭಾಯಮಾನವಾಗಿ ಪ್ರಸಿದ್ಧ ಪುಣ್ಯಕ್ಷೇತ್ರವೆನಿಸಿಕೊಂಡಿದ್ದು ತೀರ್ಥರಾಜನೆಂದು ಹೆಸರುಗಳಿಸಿದೆ.**




# ಶ್ರೀ ಲಕ್ಷ್ಮೀದೇವಿಯ ಆರು ಅಮೋಘ ಅಭಿವ್ಯಕ್ತಿಗಳು

- ಕು ॥ ಅಖಿಲ ಮಧು
63631 64078

ಅಲಮೇಲು ಮಂಗನ ಕಥೆಯನ್ನು ಅರ್ಥಮಾಡಿಕೊಳ್ಳಲು , ನಾವು ಷಡ್ ಲಕ್ಷ್ಮಿಗಳನ್ನು ಅಥವಾ ಶ್ರೀಲಕ್ಷ್ಮೀ ದೇವಿಯ ಆರು ಅಭಿವ್ಯಕ್ತಿಗಳನ್ನು ತಿಳಿದಿರಬೇಕು.

**1. ಮೊದಲ ಅಭಿವ್ಯಕ್ತಿ - ತ್ರೇತಾಯುಗದ ವೇದ ಲಕ್ಷ್ಮೀ :**

ಬ್ರಹ್ಮಋಷಿ ಕುಶಧ್ವಜ ಎಂಬ ಋಷಿ ವೇದಗಳಲ್ಲಿ ನಿಶ್ಚಯಿಸಿದ. ಅವರು ಮದುವೆಯ ಸಂಸ್ಥೆಯ ಬಗ್ಗೆ ನಿರಾಸಕ್ತಿ ಹೊಂದಿದ್ದರು ಆದರೆ ಲಕ್ಷ್ಮೀ ದೇವಿಯನ್ನು ಹುಟ್ಟುಹಾಕಲು ಉತ್ಸುಕರಾಗಿದ್ದರು. ಒಂದು ದಿನ ವೇದಗಳನ್ನು ಅನುಸರಿಸುತ್ತಿರುವಾಗ, ಆಕಾಶದ ಅಪ್ಸರೆ ಊರ್ವಶಿಯು ಬ್ರಹ್ಮಋಷಿ ಕುಶಧ್ವಜನನ್ನು ದಾಟಿದಳು.ಅವಳ ಸೌಂದರ್ಯಕ್ಕೆ ಮಾರು ಹೋಗಿ, ಅವನು ಒಂದು ಕ್ಷಣ ವಿಚಲಿತನಾಗುತ್ತಾನೆ, ಪರಿಣಾಮವಾಗಿ, ಲಕ್ಷ್ಮೀ ಭೂಮಿಗೆ ಇಳಿಯುತ್ತಾಳೆ. ಅವಳು ವೇದಗಳನ್ನು ಅನುಸರಿಸುತ್ತಿರುವಾಗ ಜನಿಸಿದಳು. ಆದ್ದರಿಂದ ವೇದಾವತಿ ಎಂಬ ವಿಶೇಷಣ. ಆಕೆಯ ರಚನೆಯ ವರ್ಷಗಳಲ್ಲಿ, ಲಕ್ಷ್ಮಿಯ ಸ್ಪಷ್ಟ ಅವತಾರವಾಗಿ, ಅವಳು ವಿಷ್ಣುವಿನ ಆಲೋಚನೆಗಳಲ್ಲಿ ಮುಳುಗಿದ್ದಳು. ಅವಳು ಹಿಮಾಲಯದಲ್ಲಿ ಕಠಿಣ ತಪಸ್ಸು ಮಾಡುತ್ತಾಳೆ. ಪುಷ್ಪಕ ವಿಮಾನದಲ್ಲಿ ಹಿಮಾಲಯವನ್ನು ಅನ್ವೇಷಿಸುವಾಗ ರಾವಣ ವೇದವತಿಯನ್ನು ನೋಡಿದನು. ಅವಳು ಕೋಪ ದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಮತ್ತು ತನ್ನ ನೈಜ ರೂಪದಲ್ಲಿ ಅಗ್ನಿ ಲೋಕವನ್ನು ತಲುಪುತ್ತಾಳೆ. ಸೀತಾಪಹರಣದ ಸಮಯದಲ್ಲಿ, ಸಹಿಸಲಾಗದ ಸನ್ನಿಹಿತ ಪ್ರತಿಕೂಲಗಳನ್ನು ಪರಿಗಣಿಸಿ ಅಗ್ನಿಯು ವೇದವತಿಯೊಂದಿಗೆ ಸೀತೆಯನ್ನು ಬದಲಿಸುತ್ತಾಳೆ. ಅಗ್ನಿ ಪ್ರವೇಶದಲ್ಲಿ, ಅಗ್ನಿಯು ನಿಜವಾದ ಸೀತೆಯನ್ನು ಬದಲಿಸುತ್ತಾರೆ. ಅವರು ವೇದವತಿಯ ನಿಸ್ವಾರ್ಥತೆಯನ್ನು ಕೃತಜ್ಞತೆಯ ಸಂಕೇತವಾಗಿ ಅವಳಿಗೆ ನೀಡಿದ ನಿಸ್ವಾರ್ಥತೆಯನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಪ್ರಶಂಸಿಸುತ್ತಾರೆ. ನಾರಾಯಣನ ಬಗ್ಗೆ ಸದಾ ಮಹತ್ವಾಕಾಂಕ್ಷೆಯಿರುವ ವೇದವತಿಯು ಆತನ ಶಾಶ್ವತ ದೈವಿಕ ಸಂಗಾತಿಯಾಗಲು ತನ್ನ ಬಯಕೆಯನ್ನು ಸಂತೋಷದಿಂದ ವ್ಯಕ್ತಪಡಿಸುತ್ತಾಳೆ. ತ್ರೇತಾಯುಗದಲ್ಲಿ ಏಕಪತ್ನಿಯಾಗಿರುವುದರಿಂದ, ನಾರಾಯಣನು ವೇದವತಿಯನ್ನು ಸಮಾಧಾನಪಡಿಸುತ್ತಾನೆ. ಬದಲಿಗೆ ಕಲಿಯುಗ ದಲ್ಲಿ ಅವಳ ಬಯಕೆಯನ್ನು ಫಲಿಸಲು ಅನುಮತಿಸುತ್ತಾನೆ. ಈ ನಿರೂಪಣೆಯನ್ನು ಕೂರ್ಮ ಪುರಾಣದಲ್ಲಿ ದಾಖಲಿಸಲಾಗಿದೆ. ವೇದವ್ಯಾಸ ವಾಲ್ಮೀಕಿ ರಾಮಾಯಣದ ನಿರ್ವಿವಾದವಾದ ಸಂಕಲನಗಳಲ್ಲಿ ಒಂದು ಸಮಗ್ರವಾ ಗಿಲ್ಲ, ಆದರೆ ರಾಮ ಮತ್ತು ಸೀತೆಯ ಸಮಗ್ರಖಾತೆಯಾಗಿದೆ.ಆದಾಗ್ಯೂ ಪುರಾಣಗಳ ಉಳಿದ ಭಾಗವು ಸಂಕೀರ್ಣವಾದ ವಿವರಗಳನ್ನು ಒಳಗೊಂಡಿದೆ. ವೇದವತಿಯನ್ನು ಸಾಂತ್ವನಗೊಳಿಸುವಲ್ಲಿ, ವಿಷ್ಣುವು ಕಲಿಯುಗದಲ್ಲಿ ಭೂಮಿಗೆ ಇಳಿಯುವ ಅವಕಾಶವನ್ನು ಕಲ್ಪಿಸುತ್ತಾನೆ. ವೇದವತಿಯ ಚೈತನ್ಯವು ವೇದಲಕ್ಷ್ಮಿಯು ಭಗವಂತನ ಅವರೋಹಣಕ್ಕಾಗಿ






ಕಾತರದಿಂದ ಕಾಯುತ್ತಿದ್ದಾಗಿ ನಿಂದ ತಾಳಿಕೊಂಡಿತು. ವೇದವತಿಯು ಭಗವಂತನೊಂದಿಗೆ ಹೇಗೆ ಒಂದಾಗುತ್ತಾಳೆ ಎಂಬುದನ್ನು ನಾವು ಸೂಕ್ಷ್ಮವಾಗಿ ಚರ್ಚಿಸುತ್ತೇವೆ,ಆದರೆ ಅವಳು ನಿಜವಾಗಿಯೂ ಒಂದೇ ಸ್ಥಳದಲ್ಲಿ ಕಾಣಿಸಿಕೊಂಡಳು. ತಿರುಪತಿಯ ನಾಗಲಾಪುರದ ವೇದನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಮತ್ಯ ನಾರಾಯಣ/ವೇದ ನಾರಾಯಣನಾಗಿ ಪ್ರಕಟವಾಗುತ್ತಾನೆ. ಮೇಲೆ ತಿಳಿಸಿದ ದೇವಾಲಯದ ನೈಋತ್ಯ ಮೂಲೆಯಲ್ಲಿ ವೇದವಲ್ಲಿಯಾಗಿ ಪ್ರಕಟಗೊಂಡಿದ್ದಾಳೆ. ಅವಳು ತ್ರೇತಾಯುಗದಿಂದ ಭಗವಂತನನ್ನು ಶ್ರದ್ಧೆಯಿಂದ ನಿರೀಕ್ಷಿಸುತ್ತಿದ್ದಳು.

**2. ಎರಡನೇ ಅಭಿವ್ಯಕ್ತಿ - ಶ್ರೀವತ್ಸ ಲಕ್ಷ್ಮೀ (ವೈಕುಂಠ):**

ಶ್ರೀವತ್ಸ ಲಕ್ಷ್ಮಿಯು ವಿಷ್ಣುವಿನ ಎದೆಯ ಮೇಲೆ ಮಚ್ಚೆಯಂತೆ ನೆಲೆಸಿದ್ದಾಳೆ. ಭೃಗು ಮಹರ್ಷಿಯು ವೈಕುಂಠ ವಿಷ್ಣುವಿಗೆ ಭೇಟಿ ನೀಡಿದ ನಿರೂಪಣೆ ನಮಗೆ ಚೆನ್ನಾಗಿ ತಿಳಿದಿದೆ ಮತ್ತು ಭೃಗು ಮಹರ್ಷಿಯ ಆಗಮನದ ಸಮಯದಲ್ಲಿ ಶ್ರೀಲಕ್ಷ್ಮಿಯು ಶಾಂತ ಸಂಭಾಷಣೆಯಲ್ಲಿ ಮುಳುಗಿದ್ದರು. ಕಲಿಯುಗ ಪ್ರಾರಂಭವಾದಾಗ ವಿಷ್ಣುವು ಲಕ್ಷ್ಮಿಗೆ ಭೂಮಿಯ ಮೇಲೆ ಪ್ರಕಟಗೊಳ್ಳಲು ಇದಿ ಉತ್ತಮ ಸಮಯ ಎಂದು ಸಲಹೆ ನೀಡುತ್ತಾನೆ. ಅಸಂಗತವಾಗಿ, ಲಕ್ಷ್ಮಿಯು ತನ್ನ ಮುಂದಾಳತ್ವವನ್ನು ಅನುಸರಿಸಲು ಅವನಿಗಾಗಿ ಮುಂದೆ ಇಳಿಯುವಂತೆ ಅವನು ಸೂಚಿಸುತ್ತಾನೆ ಲಕ್ಷ್ಮಿ ಭಯದಿಂದ ಭಗವಂತನನ್ನು ನೆನಪಿಸುತ್ತಾಳೆ, ಬದಲಾಗಿ ಪ್ರತಿ ಅವತಾರದಲ್ಲಿ ಅವನ ನಾಯಕತ್ವವನ್ನು ರೂಢಿಗತವಾಗಿ ಅನುಸರಿಸುತ್ತಾಳೆ. ತರುವಾಯ ಮದುವೆಯಾಗುತ್ತಾನೆ ಮತ್ತು ದುಷ್ಟರನ್ನು ನಾಶಮಾಡುವಲ್ಲಿ ಭಾಗವಹಿಸುತ್ತಾನೆ. ವಿಷ್ಣುವಿನ ಮುಂಬರುವ ಅವತಾರವು ವಿಶಿಷ್ಟವಾಗಿದೆ ಮತ್ತು ಹಿಂದಿನ ಅವತಾರಗಳಿಗಿಂತ ಭಿನ್ನವಾಗಿ ತೀರ್ಮಾನದ ನಂತರ ವೈಕುಂಠಕ್ಕೆ ಹಿಂತಿರುಗುವುದಿಲ್ಲ ಎಂದು ಹೇಳುತ್ತಾನೆ. ನಕಾರಾತ್ಮಕ ವ್ಯಕ್ತಿತ್ವದ ಗುಣಲಕ್ಷಣಗಳು ಪ್ರತಿಯೊಬ್ಬರಲ್ಲೂ ಅಂತರ್ಗತ ಗುಣಲಕ್ಷಣವಾಗಿರುವುದರಿಂದ ಬದಲಾವಣೆಯನ್ನು ಹುಡುಕುವುದು ನಿರರ್ಥಕವಾಗಿದೆ. ಅವರ ಆಲೋಚನಾಕ್ರಮಗಳನ್ನು ಬದಲಾಯಿಸುವುದು ಮತ್ತು ನಿಷ್ಠಾವಂತ ಭಕ್ತರನ್ನು ದುಷ್ಟರಿಂದ ರಕ್ಷಿಸುವುದು ಪ್ರಾಯೋಗಿಕವಾಗಿದೆ. ಲಕ್ಷ್ಮೀಯ ಮೂಲದ ಬಗ್ಗೆ ನಿರಂತರವಾಗಿ, "ಶ್ರೀನಿವಾಸ'' ಎಂಬ ಗೌರವಾರ್ಥವನ್ನು ಶ್ರೀಲಕ್ಷ್ಮಿಗೆ ಸ್ಪಷ್ಟವಾದ ಗೌರವವಾಗಿ ತೆಗೆದುಕೊಳ್ಳುತ್ತಾನೆ. ಮುಂಬರುವ ಪ್ರತ್ಯೇಕತೆಯ ಬಗ್ಗೆ ಲಕ್ಷ್ಮಿಯು ವಿಚಲಿತಳಾಗಿರುವುದರಿಂದ ಅವರು ಮತ್ತೆ ಒಂದಾದ ನಂತರ ಅವರು ಕೇವಲ ಮರ್ತ್ಯವಾಗಿ ಇಳಿಯುತ್ತಾರೆ ಮತ್ತು ಅವರ ಶ್ರೇಷ್ಠತೆಯನ್ನು ಉತ್ತೇಜಿಸುತ್ತಾರೆ ಎಂಬ ಅಂಶದಿಂದ ಅವಳು ಸಮಾಧಾನಗೊಳ್ಳುವಂತೆ ಸೂಚಿಸುತ್ತಾನೆ. ಭೃಗು ಮಹರ್ಷಿ ಆ ಕ್ಷಣದಲ್ಲಿ ಆಗಮಿಸುತ್ತಾನೆ ಮತ್ತು ಅಂತಿಮವಾಗಿ ವಿಷ್ಣುವನ್ನು ನೋಯಿಸುತ್ತಾನೆ. ಅಸಂಬದ್ಧವಾಗಿ ಭೃಗುವು ಭಗವಂತನಿಂದ ಸಾಂತ್ವನ ಪಡೆದನು,ಇದು ಲಕ್ಷ್ಮಿಯನ್ನು ಕೆರಳಿಸುತ್ತದೆ. ಅವಳು ವೈಕುಂಠವನ್ನು ತೊರೆಯಲು ನಿರ್ಧರಿಸುತ್ತಾಳೆ ಮತ್ತು ಅಸ ಮಾಧಾನದಿಂದ ಭೂಮಿಗೆ ಇಳಿಯುತ್ತಾಳೆ. ಭೃಗು ಮಹರ್ಷಿಯ ಪ್ರಸಂಗವು ಕೇವಲ ದೈವಿಕ ಮಧ್ಯಂತರವಾಗಿದೆ. ಭೃಗುವು



ಅಜ್ಞಾನದಿಂದ (ತಮೋಗುಣ) ವಿಷ್ಣುವಿನ ಕಡೆಗೆ ನಿರ್ಭಯ ವಾಗಿದ್ದಂತೆ ಶ್ರೀ ಲಕ್ಷ್ಮಿಯು ತನ್ನ ಶುದ್ಧ ಸತ್ವರೂಪದಲ್ಲಿ ವೈಕುಂಠಕ್ಕೆ ಹಿಂತಿರುಗುವುದಾಗಿ ಪ್ರತಿಜ್ಞೆ ಮಾಡುತ್ತಾಳೆ.ಇದು ತಿರುಮಲೆ ಇತಿಹಾಸವನ್ನು ವೇಗ ಗೊಳಿಸಿತು.

### 3. ಮೂರನೇ ಅಭಿವ್ಯಕ್ತಿ - ಮಹಾಲಕ್ಷ್ಮೀ (ಕೊಲ್ಹಾಪುರ)

ಬಿರುಗಾಳಿ ಬೀಸಿದ ಲಕ್ಷ್ಮಿದೇವಿ ಎಲ್ಲಿಗೆ ಹೋದಳು? ಹೆಚ್ಚು ನಿಖರವಾಗಿ ಹೇಳಬೇಕೆಂದರೆ ಅವಳು ಕಪಿಲರಣ್ಯ ಅಂದರೆ ಕಪಿಲ ಮಹರ್ಷಿಯ ಆಶ್ರಮಕ್ಕೆ ಹೋದಳು. ನಮ್ಮ ಪ್ರಾಚೀನ ಋಷಿಗಳ ಆಧ್ಯಾತ್ಮಿಕ ಶಕ್ತಿಗಳೊಂದಿಗೆ ಕೊಲ್ಹಾಪುರದಲ್ಲಿ ಆಕೆಯ ಉಪಸ್ಥಿತಿಯನ್ನು ಗ್ರಹಿಸಲು ಸಾಧ್ಯವಾಗುವಷ್ಟು ನಾವು ಪುಣ್ಯವಂತ ರಾಗಿದ್ದೇವೆ. ಶ್ರೀಲಕ್ಷ್ಮಿಯು ಕಠೋರ ತಪಸ್ಸು ಮಾಡುತ್ತಿದ್ದಾಗ, ಅಗಸ್ತ್ಯ ಮತ್ತು ಇತರ ಋಷಿಗಳು ಅವಳನ್ನು ಆಶ್ರಯಿಸಿದರು. ದಕ್ಷ ಯಜ್ಞದ ಸಮಯದಲ್ಲಿ ಸತಿದೇವಿಯ ಕಣ್ಣುಗಳು ಪದ್ಮಾವತಿ ಪುರ ದಲ್ಲಿ ಬಿದ್ದವು ಒಮ್ಮೆ ಬ್ರಹ್ಮನು ಮೂರು ಮಾನಸ ಪುತ್ರರನ್ನು ಸೃಷ್ಟಿ ಸಿದ ದುಷ್ಟರಾದ ಗಯಾಸುರ ಮತ್ತು ಲವಣಾಸುರರನ್ನು ವಿಷಾದ ಪೂರ್ವಕವಾಗಿ ಪರಿವರ್ತಿಸಿದ ಗಯಾ, ಲವಣ ಮತ್ತು ಕೊಲ್ಹಾ ಭಗವಾನ್ ವಿಷ್ಣುವಿನಿಂದ ಹೊರ ಹಾಕಲ್ಪಟ್ಟರು, ಆದರೆ ಕೊಲ್ಹಾ ಸುರನು ತನ್ನ ಆಳ್ವಿಕೆಯಲ್ಲಿ ಪದ್ಮಾವತಿ ಪುರದ ಮೇಲೆ ವಿನಾಶವನ್ನು ಉಂಟುಮಾಡಿದನು. ಕೊಲ್ಹಾಸುರನು ತನ್ನ ಮಗ ಕರವೀರ



ನೊಂದಿಗೆ ಅಗಸ್ತ್ಯ ಮತ್ತು ಇತರ ಋಷಿಗಳನ್ನು ಅವರ ದೈವಿಕ ತಪಸ್ಸಿನಿಂದ ನಿರಾಕರಿಸಿದನು. ಅಗಸ್ತ್ಯರು ಮತ್ತು ಋಷಿಗಳು ತಂದೆ ಮಗನ ಜೋಡಿಯನ್ನು ನಂದಿಸಲು ಶ್ರೀ ಲಕ್ಷ್ಮಿಯನ್ನು ಹುಡುಕುತ್ತಿ ದ್ದರಂತೆ. ತನ್ನ ಸನ್ನಿಹಿತ ಹಿಂದಿರುಗಿದ ನಂತರ, ಶ್ರೀ ಲಕ್ಷ್ಮೀ ತಂದೆ ಮತ್ತು ಮಗನ ಜೋಡಿಯನ್ನು ಕೊಂದಳು. ಸಾಯುವ ಬಯಕೆ ಯಂತೆ, ಕೊಲ್ಹಾಸುರ ಮತ್ತು ಕರವೀರರು ತಮ್ಮ ಪ್ರಾಂತ್ಯಕ್ಕೆ ತಮ್ಮ ಭಕ್ತರನ್ನು ಇಡುವಂತೆ ಶ್ರೀಲಕ್ಷ್ಮಿಯನ್ನು ಬೇಡಿಕೊಳ್ಳುತ್ತಾರೆ.ಆದ್ದರಿಂದ ನಾಮಸೂಚಕ ಕೊಲ್ಹಾಪುರ! ಶ್ರೀಲಕ್ಷ್ಮಿಯು ತನ್ನ ಭಕ್ತರನ್ನು ರಕ್ಷಿಸಲು ಮಹಾಲಕ್ಷ್ಮಿಯಾಗಿ ಬಾಧ್ಯತೆ ಮತ್ತು ಪ್ರಕಟ ಗೊಳ್ಳುತ್ತಾಳೆ. ವೇದಲಕ್ಷ್ಮಿ ಮತ್ತು ಶ್ರೀವತ್ಸ ಲಕ್ಷ್ಮಿ ನಂತರ ಮೂರನೇ ಅಭಿವ್ಯಕ್ತಿ ದೈವಿಕ ವಾಸ್ತುಶಿಲ್ಪಿ ವಿಶ್ವಕರ್ಮನು ಕೊಲ್ಹಾಪುರ ಮಹಾಲಕ್ಷ್ಮಿಗಾಗಿ ಮಣಿದ್ವೀಪವನ್ನು (ಶಕ್ತಿಯ ವಾಸಸ್ಥಾನ) ಪುನರಾವರ್ತಿಸಿದನು. ಲಕ್ಷ್ಮಿಯ ನಿರ್ಗಮನದಿಂದ ವೈಕುಂಠವು ನಿರ್ಜನ ವಾಗಿತ್ತು ಭಗವಂತನು ತ್ವರಿತವಾಗಿ ಭೂಮಿಗೆ ಇಳಿದನು.

### 4. ನಾಲ್ಕನೇ ಅಭಿವ್ಯಕ್ತಿ - ಸ್ವತಂತ್ರ ವೀರಲಕ್ಷ್ಮೀ (ತಿರುಚಾನೂರು)

ಏತನ್ಮಧ್ಯೆ, ಭೂಮಿಯ ಮೇಲೆ ಚಾಲ್ತಿಯಲ್ಲಿರುವ ತ್ರೇತಾಯುಗದ ವೇದ ಲಕ್ಷ್ಮಿಯ ಚೈತನ್ಯವನ್ನು ಆಕಾಶರಾಜನು ಪದ್ಮಾವತಿದೇವಿ ಎಂದು ಕಂಡು ಹಿಡಿದನು. ಭೂಮಿಯನ್ನು ಉಳುಮೆ ಮಾಡುವಾಗ ಕಮಲದಲ್ಲಿ ಅವಳು ಪತ್ತೆಯಾದಳು. ಆದ್ದ ರಿಂದ ಪದ್ಮಾವತಿ ಎಂಬ ವಿಶೇಷಣ. ಪದ್ಮಾವತಿಯೊಂದಿಗೆ ವೆಂಕಟೇಶ್ವರನ ಸಂಯೋ ಗವು ವ್ಯಾಪಕವಾಗಿ ತಿಳಿದಿರುವ ನಿರೂಪಣೆಯಾಗಿದೆ. ಮಹಾಲಕ್ಷ್ಮಿಯು ಕೊಲ್ಹಾಪುರ ದಲ್ಲಿ ಕಾಣಿಸಿಕೊಂಡಿದ್ದರಿಂದ, ಪದ್ಮಾವತಿಯು ಲಕ್ಷ್ಮಿಯ ಭಾಗಶಃ ಅವತಾರವಾಗಿ ರುವುದರಿಂದ ವೆಂಕಟೇಶ್ವರನು ಕುಬೇರನಿಂದ ಹಣವನ್ನು ಎರವಲು ಪಡೆಯಬೇಕಾ ಯಿತು ಆಕೆಯ ಸಂಪೂರ್ಣ ಅವತಾರವು ಕೊಲ್ಹಾಪುರದಲ್ಲಿ ಪ್ರಕಟವಾಯಿತು. ಭಗವಂತನು ತನ್ನ ಶಾಶ್ವತ ದೈವಿಕ ! ಒಡನಾಡಿಯಿಲ್ಲದೆ ಅಸಮರ್ಪಕನೆಂದು ಭಾವಿಸಿ ದನು. ಪದ್ಮಾವತಿಯನ್ನು ಗೌರವಿಸುತ್ತಾ ಭಗವಂತನು ಲಕ್ಷ್ಮಿಯ ಅನ್ವೇಷಣೆಗೆ ಹೋಗು ವಾಗ ಅವಳು ವಕುಳಮಠದ ಆಶ್ರಮದಲ್ಲಿ ಉಳಿಯುವಂತೆ ಸೂಚಿಸುತ್ತಾನೆ. ಭಗ ವಂತನು ಕೊಲ್ಹಾಪುರವನ್ನು ತಲುಪಿಸಿದಾಗ ಲಕ್ಷ್ಮಿಯನ್ನು ಹೊರತು ಪಡಿಸಿ ಎಲ್ಲಾ ದೇವತೆಗಳು ಅವಳ ಅಭಿವ್ಯಕ್ತಿಯ ಹೊರತಾಗಿಯೂ ವಿವೇಚನಾಶೀಲರಾಗಿದ್ದರು. ವಿಚಲಿತನಾದ ಭಗವಂತ ಪದ್ಮಕುಂಡ, ಪಂಚಗಂಗಾ ಮತ್ತು ರುದ್ರಪ್ರಯಾಗದಲ್ಲಿ ಸ್ನಾನ ಮಾಡುತ್ತಾನೆ. ತನ್ನ ಶಾಶ್ವತ ಸಂಗಾತಿಯನ್ನು ಸಮಾಧಾನಪಡಿಸಲು ಅನ್ವೇಷಿಸಿದ ಪವಿತ್ರವಾದ ಸಂಗಮ. ಹತ್ತು ವರ್ಷಗಳ ವ್ಯರ್ಥ ತಪಸ್ಸಿನ ನಂತರ, ಆಕಾಶವಾಣಿಯು ಲಕ್ಷ್ಮಿಯು ತನ್ನ ಅನುಕಂಪವಿಲ್ಲದ (ರಜೋಗುಣ) ರೂಪದಲ್ಲಿ ನೀಚರನ್ನು ನಿರ್ಮೂ ಲನೆ ಮಾಡಲು ಪ್ರಕಟವಾಯಿತು ಎಂದು ಭಗವಂತನಿಗೆ ತಿಳಿಸುತ್ತಾರೆ. ಆದ್ದರಿಂದ ಚಿತ್ರದಲ್ಲಿ ತೋರಿಸಿರುವಂತೆ ಗದೆ, ಪಾನ ಪತ್ರ, ಸಿಂಹ ಇತ್ಯಾದಿ. ಲಕ್ಷ್ಮೀಯು ತನ್ನ ಶುದ್ಧವಾದ (ಶುದ್ಧ ಸತ್ವ) ರೂಪದಲ್ಲಿ ಮಾತ್ರ ಗೋಚರಿಸಬೇಕು. ಶುಕಮಹರ್ಷಿಯ



ಆಶ್ರಮಕ್ಕೆ ಭೇಟಿ ನೀಡಲು, ಕೊಳವನ್ನು ಅಗೆಯಲು ಮತ್ತು ದೇವಲೋಕದಿಂದ ಕಮಲಗಳನ್ನು ನೆಡಲು ಭಗವಂತನಿಗೆ ಸೂಚಿಸಲಾಯಿತು.

ಲಕ್ಷ್ಮೀಯನ್ನು ಧ್ಯಾನಿಸುವಾಗ ಆ ಕಮಲಗಳು ಸುಮಾರು ಹನ್ನೆರಡು ವರ್ಷಗಳವರೆಗೆ ಬಾಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು. ತರುವಾಯ, ಅವಳು ಕಾರ್ತಿಕ ಪಂಚಮಿಯಂದು ತನ್ನ ಶುದ್ಧ ಸಾತ್ವಿಕ ರೂಪದಲ್ಲಿ ಹೊರ ಹೊಮ್ಮು ತ್ತಾಳೆ ಮತ್ತು ನಿಮ್ಮನ್ನು ತಲುಪುತ್ತಾಳೆ. ಭಗವಂತನು ದೈವಿಕ ಧ್ವನಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಾನೆ. ಮತ್ತು ಶುಕ ಮಹರ್ಷಿಯ ಆಶ್ರಮಕ್ಕೆ ಭೇಟಿ ನೀಡುತ್ತಾನೆ. ಪ್ರತಿ ದುರ್ಗಾಷ್ಟಮಿ, ದೇವಾಲಯದ ಗೌರವಗಳನ್ನು ತಿರುಮಲೆಯಿಂದ ಕೊಲ್ಹಾಪುರಕ್ಕೆ ಕಳುಹಿಸಲಾಗುತ್ತದೆ. ಆಕೆಯ ಅಭಿವ್ಯಕ್ತಿಯಿಂದ ದೀರ್ಘಕಾಲದಿಂದ ಸ್ಥಾಪಿತವಾದ ಸಂಪ್ರದಾ ಯಕ್ಕೆ ಅನುಗುಣವಾಗಿ ಅಂತಿಮವಾಗಿ ಭಗವಂತನು ಶ್ರೀ ಶುಕಪುರವನ್ನು ಅಂದರೆ ಆಧುನಿಕ-ದಿನದ ತಿರುಚಾನೂರಿಗೆ ಭೇಟಿ ನೀಡುತ್ತಾನೆ. ಭಗ ವಂತನ ಪರಿತ್ಯಾಗದಿಂದ ದುಃಖಿತಳಾದ ಪದ್ಮಾವತಿಯು ವೆಂಕಟಾಚಲಂನ ಮೇಲೆ ತೀವ್ರ ತಪಸ್ಸು ಮಾಡಲು ವಕುಳ ಮಠವು ಅವನನ್ನು ಶೀಘ್ರವಾಗಿ ಹಿಂದಿರುಗಿಸಲು ಸೂಚಿಸಿದನು. ಶುಕ ಮಹರ್ಷಿಗಳ ಆಶ್ರಮದಲ್ಲಿ ಭಗವಂತ ವೆಂಕಟಾಚಲಂನಲ್ಲಿ ಪದ್ಮಾವತಿ ಮತ್ತು ಕೊಲ್ಹಾಪುರದಲ್ಲಿ ಮಹಾ ಲಕ್ಷ್ಮಿ ಯಾವಾಗ ಒಂದಾಗುತ್ತಾರೆ? ಭಗವಂತನು ಶುಕ ಮಹರ್ಷಿಯ ಆಶ್ರ ಮಕ್ಕೆ ಬಂದಾಗ ಅವರು ದೈವಿಕ ಕೊಳವನ್ನು ಅಗೆಯುತ್ತಾರೆ. ದೇವಲೋಕ ದಿಂದ ಉತ್ಪನನ ಮಾಡಿದ ಕೊಳವನ್ನು ಭವ್ಯವಾದ ಚಿನ್ನದ ಕಮಲಗಳಿಂದ ಸಜ್ಜುಗೊಳಿಸಲು ವಾಯುದೇವನಿಗೆ ವಹಿಸಲಾಯಿತು. ಕಮಲಗಳು ಒಣಗದಂತೆ ತಡೆಯಲು ಭಗವಂತ ಸೂರ್ಯನನ್ನು ಹನ್ನೆರಡು ವರ್ಷಗಳ ಕಾಲ ಕೊಲ್ಲಾಪುರದಲ್ಲಿ ಇರುವಂತೆ ನಿರ್ದೇಶಿಸುತ್ತಾನೆ. ಲಕ್ಷ್ಮಿಯ ಶುದ್ಧ ಸತ್ವ ರೂಪವನ್ನು ಪ್ರತಿಬಿಂಬಿಸುತ್ತಾ ಭಗವಂತನು ಹನ್ನೆರಡು ವರ್ಷಗಳ ಕಾಲ ಕಮಲದ ಹೃದಯವನ್ನು ಧ್ಯಾನಿಸುತ್ತಾ ಮಹಾಲಕ್ಷ್ಮಿ ಮೂಲ ಮಂತ್ರವನ್ನು ಪಠಿಸುತ್ತಾನೆ. ಇಪ್ಪತ್ತೆರಡು ವರ್ಷಗಳವರೆಗೆ ಆರೋಹಿಸುವ ಸಮಯದಲ್ಲಿ ಅವರ ಸಂಗಾತಿಯನ್ನು ತಲುಪಲು ಹತಾಶರಾಗಿದ್ದಾರೆ. ಪರಮಾತ್ಮನು ತನ್ನ ಕ್ರಿಯೆಗಳ ಮೂಲಕ ಕೇವಲ ಮನುಷ್ಯರಾದ ನಮಗೆ ಸ್ಪಷ್ಟ ಸಂದೇಶವನ್ನು ಕಳುಹಿಸುತ್ತಾನೆ. ಪದ್ಮಸರೋವರವನ್ನು ತಲುಪಿದ ನಂತರ, ದೇವರುಗಳು ಮತ್ತು ಋಷಿಗಳು ತಮ್ಮ ಪ್ರಾರ್ಥನೆಯನ್ನು ತೀವ್ರಗೊಳಿಸಿದರು. ಲಕ್ಷ್ಮಿಯನ್ನು ತಕ್ಷಣವೇ ಭಗವಂತನ ಬಳಿಗೆ ಹಿಂದಿರುಗುವಂತೆ ಮನವಿ ಮಾಡಿದರು. ಹನ್ನೆರಡನೆಯ ವರ್ಷದಲ್ಲಿ ಕಾರ್ತಿಕ ಮಾಸದ ಪಂಚಮಿ ಬಂದೊಡನೆ ಭಗವಂತನು ಆಳವಾದ ತಪಸ್ಸಿನಲ್ಲಿ ತಲ್ಲೀನನಾಗಿದ್ದನು. ಭೃಗು ಮಹರ್ಷಿಯು ಮಹಾಲಕ್ಷ್ಮಿಯನ್ನು ತನ್ನ ವಂಶಸ್ಥರು ಕೊಡುಗೆಯಾಗಿ ಉಗ್ರ ತಪಸ್ಸು ಮಾಡಲು ಒತ್ತಾಯಿಸಿದ ತನ್ನ ಅಪ್ರಬುದ್ಧತೆಗಾಗಿ ಶ್ರದ್ಧೆಯಿಂದ ಕ್ಷಮೆ ಯಾಚಿಸಿದ. ಪದ್ಮಸರೋವರದ ಮಧ್ಯಭಾಗದಲ್ಲಿರುವ ಚಿನ್ನದ ಕಮಲವು ಕಾರ್ತಿಕ ಶುಕ್ಲ ಪಂಚಮಿಯಂದು ಶಾಂತವಾದ ಮಹಾಲಕ್ಷ್ಮಿಯನ್ನು ತನ್ನ ಪ್ರಶಾಂತ ರೂಪದಲ್ಲಿ ಬಹಿರಂಗಪಡಿಸುತ್ತದೆ. ಭವ್ಯವಾದ ಆನೆಗಳು ಅವಳಿಗೆ ಪವಿತ್ರ ಆಕಾಶ ಗಂಗೆಯನ್ನು ಧಾರೆ ಎರೆದಾಗ ಪ್ರಕಾಶಿಸುವ ಮತ್ತು ಬಳಿ ಬಣ್ಣದಿಂದ ಅಲಂಕರಿಸಲ್ಪಟ್ಟವು. ಮಹಾಲಕ್ಷ್ಮಿಯು ಹದಿನಾರು ವರ್ಷದ ಕನ್ಯೆಯಾಗಿ ಕಾಣಿಸಿಕೊಂಡಳು. ತರುವಾಯ ದೇವರುಗಳು ಸ್ವರ್ಗದಿಂದ ಹೂವುಗಳನ್ನು ಸುರಿಸುತ್ತಿದ್ದಂತೆ ಭಗವಂತ ತನ್ನ ಕಣ್ಣುಗಳನ್ನು ತೆರೆಯುತ್ತಾನೆ. ಭಗವಂತ ಮಹಾಲಕ್ಷ್ಮಿಯನ್ನು ಅಪ್ಪಿಕೊಂಡು ತನ್ನ ಮಾಲೆಯಿಂದ ಅಲಂಕರಿಸಿದನು. ಮಹಾಲಕ್ಷ್ಮಿಯು ವೈಕುಂಠದಿಂದ ಗೈರು ಹಾಜರಾದಾಗ ದೇವರುಗಳು ಮತ್ತು ಋಷಿಗಳು ಭಗವಂತನ ಪ್ರದರ್ಶನದ ಬಗ್ಗೆ ಭಾವಪರವಶರಾದರು. ಪರಿಣಾಮವಾಗಿ ಅವರು ಶ್ರೀ ಲಕ್ಷ್ಮೀ ಹೃದಯ ಸ್ತೋತ್ರದ ಆತ್ಮವನ್ನು ಪ್ರಚೋದಿಸುವ ಪಠಣವನ್ನು ಪ್ರಾರಂಭಿಸಿದರು. ವೈಕುಂಠವನ್ನು ಎಂದಿಗೂ ತೊರೆಯಬೇಡಿ ಎಂದು ಲಕ್ಷ್ಮೀಯನ್ನು ಮನಃಪೂರ್ವಕವಾಗಿ ಬೇಡಿಕೊಂಡರು. ಪದ್ಮಸರೋವರದಲ್ಲಿ ಮಹಾಲಕ್ಷ್ಮಿಯ ಉತ್ಕೃಷ್ಟವಾದ ಹೊರಹೊಮ್ಮುವಿಕೆಯಿಂದ ಶುಕ ಮಹರ್ಷಿ ಮತ್ತು ದೇವರುಗಳು ಅವಳನ್ನು ಪ್ರಕಟಗೊಳಿಸುವಂತೆ ಮನವಿ ಮಾಡಿದರು. ನಾಲ್ಕನೇ ಅಭಿವ್ಯಕ್ತಿಯಾದ ತಿರುಚಾನೂರಿನಲ್ಲಿ ಸರ್ವ ಸ್ವತಂತ್ರ ವೀರಲಕ್ಷ್ಮಿಯಾಗಿ ಅವಳು ಕೃಪೆಯಿಂದ ಬದ್ಧಳಾಗತ್ತಾಳೆ ಮತ್ತು ಪ್ರಕಟಗೊಳ್ಳುತ್ತಾಳೆ. ತಿರುಚಾನೂರಿನಲ್ಲಿ ಭಗವಂತನ ವಿಗ್ರಹವನ್ನು ನಂತರ ಪ್ರತಿಷ್ಠಾಪಿಸಲಾಗಿದ್ದರೂ ಎಲ್ಲಾ ಆಚರಣೆಗಳು ಸಂಪೂರ್ಣವಾಗಿ ದೇವಿಗೆ ಮೀಸಲಾಗಿವೆ. ಆದ್ದರಿಂದ ತಿರುಚಾನೂರಿನಲ್ಲಿರುವ ದೇವತೆಯು ಕಮಲಗಳಿಂದ ಸುತ್ತುವರಿದಿರುವ ಶುದ್ಧ ಸತ್ವ ಲಕ್ಷ್ಮಿ. ಆ ಸಮಯದಲ್ಲಿ ವೆಂಕಟಾಚಲಂನಲ್ಲಿದ್ದ ಪದ್ಮಾ

ವತಿಯಲ್ಲ ಅಲಮೇಲುಮಂಗ ಮತ್ತು ಪದ್ಮಾವತಿದೇವಿ ಎಂಬ ಹೆಸರುಗಳು ಏಕೆ ? ಅವಳು ಚಿನ್ನದ ಕಮಲದಲ್ಲಿ ಕುಳಿತಿದ್ದಾಳೆ. ಆದ್ದರಿಂದ ಅಲಮೇಲು ಮಂಗಾ ಎಂಬ ವಿಶೇಷಣ. ಪದ್ಮ(ಕಮಲ) ಲಕ್ಷ್ಮಿಯ ವಾಸ ಸ್ಥಾನವಾಗಿದೆ. ಆದ್ದರಿಂದ ಅವಳನ್ನು ಪದ್ಮಾವತಿದೇವಿ ಎಂದು ಕರೆಯಲಾಗುತ್ತದೆ. ತಿರುಚಾನೂರಿನ ಪದ್ಮಾವತಿ ದೇವಿಯು ಆಕಾಶರಾಜನ ಮಗಳಲ್ಲ, ಬದಲಾಗಿ ಲಕ್ಷ್ಮಿಯ ಭಾಗಶಃ ಅವತಾರ ಪದ್ಮಾವತಿ ದೇವಿ. ದೇವಸ್ಥಾನದ ತೊಟ್ಟಿಯಲ್ಲಿ ಆಧುನಿಕ ಕಾಲದ ಕಂಬದ ಹಾಲ್, ಭಗವಂತನೇ ಉತ್ಪನನ ಮಾಡಿದ ಪದ್ಮಸರೋವರದಲ್ಲಿ ದೇವಿಯು ಚಿನ್ನದ ಕಮಲದಲ್ಲಿ ಹೊರ ಹೊಮ್ಮಿದಳು. ಪವಿತ್ರ ಪುಷ್ಕರಿಣಿಯಲ್ಲಿ ಒಮ್ಮೆ ಸ್ನಾನ ಮಾಡಿದರೆ ನಮ್ಮ ಚಿಂತೆ ದೂರವಾಗುತ್ತದೆ. ಪ್ರತಿ ಕಾರ್ತಿಕ ಪಂಚಮಿಯಂದು ಆಕೆಯ ಹೊರ ಹೊಮ್ಮುವಿಕೆಯ ಸಂದರ್ಭವನ್ನು ಸ್ಮರಣಾರ್ಥವಾಗಿ ವೆಂಕಟೇಶ್ವರನು ತನ್ನ ದೈವಿಕ ಸಂಗಾತಿಗೆ ದೇವಾಲಯದ ಗೌರವವನ್ನು ನೀಡುತ್ತಾನೆ. ಪುರುಷನು ಸತತ ಪ್ರಯತ್ನವನ್ನು ಮಾಡಬೇಕು ಮತ್ತು ಅವನ ಹೆಂಡತಿಯನ್ನು ಲೆಕ್ಕಿಸದೆ ಪ್ರಶಂಸಿಸಬೇಕು.

### 5. ಐದನೇ ಅಭಿವ್ಯಕ್ತಿ - ವ್ಯೂಹ- ಲಕ್ಷ್ಮೀ

ಸರ್ವ ಸ್ವತಂತ್ರ ವೀರ ಲಕ್ಷ್ಮಿಯಾಗಿದ್ದರೂ. ಅವಿನಾಭಾವವಾಗಿ ಉಳಿಯಲು, ಅವಳು ಭಗವಂತನ ಎದೆಯ ಮೇಲೆ ಶುದ್ಧ ಸತ್ವ ರೂಪದಲ್ಲಿ ವ್ಯೂಹ ಲಕ್ಷ್ಮಿಯಾಗಿ ಕಾಣಿಕೊಳ್ಳುತ್ತಾಳೆ. ವ್ಯೂಹ ಲಕ್ಷ್ಮೀಯು ಭಗವಂತನ ಮುಂದೆ ಭಕ್ತರ ಮನವಿಗಳನ್ನು ತಿಳಿಸಲು ತನ್ನ ಎದೆಯ ಮೇಲೆ ಶಾಶ್ವತವಾಗಿ ಉಳಿಯುತ್ತೇನೆ ಎಂದು ತಿಳಿಸುತ್ತಾಳೆ ಮತ್ತು ವ್ಯೂಹ್ಯ - ಲಕ್ಷ್ಮೀಯ ಪತಿ ತ್ರೀಕರಣ ಮತ್ತು ಆರಾಧನೆಯು ಮಿತಿಯಿಲ್ಲದ ಮತ್ತು ಶಾಶ್ವತವಾದ ಸಮೃದ್ಧಿಯನ್ನು (ನಿರವಾದಿಕ-ಸಮೃದ್ಧಿ-ಸಿದ್ಧಯೇ) ಭದ್ರಪಡಿಸುವ ಉದ್ದೇಶವಾಗಿದೆ. ಬೆಟ್ಟದ ದೇವರ ದೈನಂದಿನ ಪೂಜೆಯಲ್ಲಿ ಬೆಳಿಗ್ಗೆ ವೆಂಕಟೇಶ ಸಹಸ್ರನಾಮ ಅರ್ಚನೆಯ ನಂತರ ದೇವರ ಎದೆಯ ಮೇಲಿರುವ ಈ ವ್ಯೂಹ ಲಕ್ಷ್ಮಿಯನ್ನು ಪ್ರತಿ ಹೆಸರಿನ ನಂತರ ತುಳಸಿ ಎಲೆಗಳ ನೈವೇದ್ಯದೊಂದಿಗೆ ಲಕ್ಷ್ಮಿ(ಷೋಡಶ -ನಾಮ) ಹದಿನಾರು ನಾಮಗಳನ್ನು ಹೇಳುತ್ತಾ ಪೂಜಿಸಲಾಗುತ್ತದೆ.



ಎಡಗಡೆಯ ಮೇಲಿರುವ ಪದ್ಮಾವತಿ ದೇವಿಯನ್ನು ಅದೇ ಸಮಯದಲ್ಲಿ ಪೂಜಿಸಲಾಗುತ್ತದೆ (ಹದಿನಾರು ನಾಮಗಳನ್ನು ಜಪಿಸುತ್ತಿರುವಾಗ). ಶುಕ್ರವಾರದಂದು ಮುಖ್ಯ ದೇವತೆಯ ವಿದ್ಯುಕ್ತ ಸ್ನಾನದ ಸಮಯದಲ್ಲಿ ಮಕರ - ಸಂಕ್ರಾಂತಿಯ ಸಮಯದಲ್ಲಿ ಬೆಟ್ಟದ ದೇವರ ಬಲ ಭಾಗದಲ್ಲಿರುವ ಈ ಲಕ್ಷ್ಮಿಯು ಸುಗಂಧ ನೀರಿನಿಂದ ಸ್ನಾನವನ್ನು ಸ್ವೀಕರಿಸಿದಾಗ ಈ ಚಿತ್ರವನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ವೆಂಕಟೇಶ್ವರನ ವಿಗ್ರಹವು ಅವನ ಬಲ ಎದೆಯ ಮೇಲೆ ಶ್ರೀವತ್ಸ ಚಿಹ್ನೆಯನ್ನು ಹೊಂದಿದೆ. ಇದು ವಿಗ್ರಹದ ಶಾಶ್ವತ ಭಾಗವಾಗಿದೆ.ಇದು ಉಬ್ಬು ಶಿಲ್ಪವನ್ನು ಕಾಣಬಹುದು. ಆದರೆ ಗುರುವಾರದಂದು ಆಭರಣಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿದಾಗ ,ಮೇಲ್ಚಾಟ್ ವಸ್ತ್ರವನ್ನು ಬಿಟ್ಟು, ಮತ್ತು ಶುಕ್ರವಾರದಂದು, ಅಭಿಷೇಕ ಮತ್ತು ನಿಜಪಾದ ದರ್ಶನಂ ಸಮಯದಲ್ಲಿ ಮಾತ್ರ. ಕುಲಶೇಖರ ಪಡಿಗೆ ಸಮೀಪಕ್ಕೆ ಬಂದರೆ ವಕ್ಷಸ್ಥಳ ಲಕ್ಷ್ಮಿಯ ದರ್ಶನವನ್ನು ಕಾಣಬಹುದು. ಅರ್ಚಕರು ಮಾತ್ರ ಎದೆಯ ಮೇಲೆ ಲಕ್ಷ್ಮಿಯನ್ನು ನೋಡಬಹುದು.


ಈ ಲಕ್ಷ್ಮಿಯನ್ನು ವೈಖಾನಸ ಸಂಹಿತೆಯಗಳಲ್ಲಿ ದ್ವಿ - ಭುಜ- ವ್ಯೂಹ - ಲಕ್ಷ್ಮೀ ಎಂದು ಕರೆಯಲಾಗುತ್ತದೆ. ಬೆಟ್ಟದ ದೇವರ ದೇಹದ ಮೇಲೆ ಲಕ್ಷ್ಮಿಯ ಉಪಸ್ಥಿತಿಯು ಅವನಿಗೆ ಶ್ರೀನಿವಾಸ (ಲಕ್ಷ್ಮಿಯ ವಾಸಸ್ಥಾನ) ಎಂಬ ಹೆಸರಿಗೆ ಕಾರಣವಾಗಿದೆ. ಲಕ್ಷ್ಮಿಯ ಈ ಚಿತ್ರವು ಎರಡು ತೋಳುಗಳು ಮತ್ತು ಕಮಲದ ಭಂಗಿಯಲ್ಲಿ ಕುಳಿತುಕೊಳ್ಳಲು ಸೂಚಿಸಲಾದ ಆಗಮಗಳಲ್ಲಿದೆ. ಈ ರೂಪವನ್ನು ವ್ಯೂಹ - ಲಕ್ಷ್ಮೀ ಎಂದು ಕರೆಯಲಾಗುತ್ತದೆ.

### 6. ಆರನೇ ಅಭಿವ್ಯಕ್ತಿ - ಭೂತಕಾರುಣ್ಯ ಲಕ್ಷ್ಮೀ

ವ್ಯೂಹ ಲಕ್ಷ್ಮೀಯೊಂದಿಗೆ, ರಾಜಿಯಾದ ಮೇಲೆ ತಡೆಯಲಾಗದೆ ಕಣ್ಣೀರಿಟ್ಟ ಪದ್ಮಾವತಿಯನ್ನು ಮತ್ತೆ ಸೇರಲು

ತಿರುಮಲೆಗೆ ಹೊರ ಡುತ್ತಾನೆ. ವೆಂಕಟೇಶ್ವರನು ಪದ್ಮಾವತಿಯನ್ನು ಸಾಂತ್ವನಗೊಳಿಸುತ್ತಾನೆ ಮತ್ತು ಅವಳ ಹಿಂದಿನ ಜನ್ಮಗ್ಗಳ ಬಗ್ಗೆ ತಿಳಿಸುತ್ತಾನೆ. ಭಗವಂತನಿಂದ ಬೇರ್ಪಡುವುದನ್ನು ಮತ್ತಷ್ಟು ತಗ್ಗಿಸಲು ಅವಳು ಭೂಕಾರುಣ್ಯ ಲಕ್ಷ್ಮಿಯಾಗಿ ಪ್ರಕಟಗೊಳ್ಳುತ್ತಾಳೆ. ಷಡ್ ಲಕ್ಷ್ಮಿಗ್ರಳ ಐದನೇ ಮತ್ತು ಆರನೇ ಅಭಿವ್ಯಕ್ತಿಯಾದ ವ್ಯೂಹಲಕ್ಷ್ಮಿಯೊಂದಿಗೆ ಏಕೀಕರಿಸುತ್ತಾಳೆ. ವೆಂಕಟೇಶ್ವರನು ತನ್ನ ತನ್ನ ದೈವಿಕ ಪತ್ನಿಯರಾದ ಲಕ್ಷ್ಮಿ ಮತ್ತು ಪದ್ಮಾವತಿಯನ್ನು ಸಮಾನವಾಗಿ ಅಪ್ಪಿಕೊಂಡು ತನ್ನ ಎದೆಯ ಮೇಲೆ ಹೊತ್ತು ಕೊಂಡಿದ್ದಾನೆ. ವ್ಯೂಹಲಕ್ಷ್ಮಿ ಮತ್ತು ಭೂತ ಕಾರುಣ್ಯ ಲಕ್ಷ್ಮಿಯ ಪೂಜ್ಯ ಉಬ್ಬು ಶಿಲ್ಪವು ಪ್ರತಿ ಶುಕ್ರವಾರದಂದು ವಿಧಿವತ್ತಾಗಿ ಆಚರಿಸಲ್ಪಟ್ಟ ಶ್ರೀವಾರಿ ಅಭಿಷೇಕವನ್ನು ಪಡೆಯುತ್ತದೆ. ತಿರುಮಲೆಯನ್ನು ಹೊರತು ಪಡಿಸಿ ಯಾವುದೇ ವೈಷ್ಣವ ದೇವಾಲಯದಲ್ಲಿ ಭಗವಂತನು ತನ್ನ ದೈವಿಕ ಸಂಗಾತಿಗಳೊಂದಿಗೆ ವಾಡಿಕೆಯಂತೆ ಇರುತ್ತಾನೆ.

ನಿಮ್ಮ ಮುಂದಿನ ಭೇಟಿಯಲ್ಲಿ ವೆಂಕಟೇಶ್ವರನ ದೇವರಿಗೆ ಮತ್ತು ಅವರ ದೈವಿಕ ಸಂಗಾತಿಗಳಿಗೆ ಪ್ರಾರ್ಥನೆಗಳನ್ನು ಸಲ್ಲಿಸುವುದನ್ನು ಪರಿಗಣಿಸಿ, ಇದು ಆಹ್ಲಾದಕರ ಅನುಭವವನ್ನು ನೀಡುತ್ತದೆ. ಪದ್ಮಾವತಿದೇವಿಗೆ ನಾವು ವಿಶೇಷವಾದ ಪ್ರಾರ್ಥನೆಗಳನ್ನು ಹೇಗೆ ಸಲ್ಲಿಸುತ್ತೇವೆ? ಮಹಾಲಕ್ಷ್ಮಿಗೆ ಪಾರ್ಥನೆ ಸಲ್ಲಿಸಲು ತಿರುಚಾನೂರಿಗೆ ಭೇಟಿ ನೀಡಬಹುದು. ಪದ್ಮಾವತಿ ದೇವಿಯನ್ನು ಮದುವೆಯಾದ ನಾರಾಯಣವನಕ್ಕೆ ಭೇಟಿ ನೀಡಿ ಪದ್ಮಾವತಿ ದೇವಿಗೆ ಪ್ರಾರ್ಥನೆ ಸಲ್ಲಿಸುವ ಏಕೈಕ ಸ್ಥಳ. ದೇವಾಲಯದ ನೈಋತ್ಯ ಮೂಲೆಯಲ್ಲಿ ಪದ್ಮಾವತಿಯು ನವವಧುವಿನಂತೆ ಪ್ರಕಾಶಿಸುತ್ತಾಳೆ ಮತ್ತು ಉತ್ಸವಗಳು ಮತ್ತು ಮೆರವಣಿಗೆಗಳ ಸಮಯದಲ್ಲಿ ಮಾತ್ರ ಹೊರಡುತ್ತಾಳೆ. ಇದು ಭವ್ಯವಾದ ಅಲಮೇಲುಮಂಗ ಪದ್ಮಾವತಿ ಮತ್ತು ಲಕ್ಷ್ಮಿ ಅವರ ಸಮಕಾಲೀನ ಸಮಗ್ರ ಕಥೆಯಾಗಿದೆ.



**ಓಂ ಹ್ರೀಂ ಶ್ರೀಂ ಮಹಾಲಕ್ಷ್ಮಿಯೇ ನಮಃ**

## ಪುಷ್ಪಯಾಗ

ತಿರುಚಾನೂರಿನಲ್ಲಿ ನಡೆಯುವ ಪಂಚಮೀತೀರ್ಥದ ಮರುದಿನ ಅಮ್ಮನವರಿಗೆ ಅತ್ಯಂತ ವೈಭವದಿಂದ ಪುಷ್ಪಯಾಗವನ್ನು ನಿರ್ವಹಿಸುತ್ತಾರೆ. ನಿತ್ಯವು ಪೂಜೆಯಲ್ಲಿ ನಡೆಯುವ ಮಂತ್ರಪುಷ್ಪಗಳೊಂದಿಗೆ ಬ್ರಹ್ಮೋತ್ಸವಗಳು ಮೊದಲಾದ ವಿಶೇಷ ಉತ್ಸವಗಳನ್ನು ನೆರವೇರಿಸಿದ ನಂತರ ಆಚರಿಸುವ ಅದ್ಭುತವಾದ ಯಾಗವೇ **"ಪುಷ್ಪಯಾಗ"** ಆಯಾ ಕಾಲದಲ್ಲಿ ಲಭಿಸುವ ವಿವಿಧ ರೀತಿಯ ಪುಷ್ಪಗಳೊಂದಿಗೆ ವೈಭವದಿಂದ ಈ ಯಾಗವನ್ನು ನಿರ್ವಹಿಸುತ್ತಾರೆ. ಅಂತಹಾ ಪ್ರಾಮುಖ್ಯತೆ ಇರುವ ಹೂಗಳೊಂದಿಗೆ ಪೂಜಿಸುವಂತಹಾ ವಿಧಾನ ಬಹಳ ಪವಿತ್ರವಾದದ್ದು. ಲೋಕಕಲ್ಯಾಣಕ್ಕಾಗಿ, ದಿವ್ಯ ವಾದ ಈ ವಿಧಾನದಿಂದ ಸಮಸ್ತ ಜೀವರಾಶಿಗಳು ಸುಖ ಸಂಪತ್ತು, ಶಾಂತಿ, ಸೌಭಾಗ್ಯಗಳಿಂದ ಸುಖವಾಗಿ ಜೀವಿಸ ಬೇಕೆಂದು ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ.





## ನವೆಂಬರ್ ತಿಂಗಳ

# ರಾಶಿ ಫಲಗಳು




ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್


### ಮೇಷ

ರಾಹುವು ವ್ಯಯಸ್ಥಾನದಲ್ಲಿರುವುದರಿಂದ ಅನಾವಶ್ಯಕ ಖರ್ಚುಗಳು ವಿದೇಶ ಪ್ರಯಾಣಗಳು ಕಂಡು ಬರುತ್ತದೆ. ವ್ಯವಹಾರಗಳಲ್ಲಿ ಹಣ ಹೊಡಿಕೆಗಳನ್ನು ಕಡಿಮೆ ಮಾಡುವುದು ಒಳಿತು. ಆಧ್ಯಾತ್ಮಿಕ ವಿಷಯ ಗಳಲ್ಲಿ ಪ್ರಾಮುಖ್ಯತೆ ಬೆಳೆಯುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿ ತೋರುವಿರಿ. ಅವರ ವಿಜಯ ನಿಮಗೆ ಸಂತಸ ತರಲಿದೆ. ರಾಜಕೀಯವಾಗಿ ಪ್ರವೇಶಮಾಡಲು ಹೆಜ್ಜೆ ಹಾಕುವಿರಿ. ಸಮಯ ಕೂಡಿ ಬರಲಿದೆ.

### ವೃಷಭ

ಗೃಹಯೋಗ ಒದಗಿ ಬರಲಿದೆ. ಮಾಸಾರಂಭದಲ್ಲಿ ಚಂದ್ರನು ನಿಮ್ಮ ರಾಶಿಯಲ್ಲಿರುವುದರಿಂದ ಗೃಹಾಲಂಕಾರ ವಸ್ತುಗಳು , ವಸ್ತ್ರಲಾಭಗಳು, ಮನಸ್ಸು ನಿರ್ಮಲವಾಗಿಟ್ಟುಕೊಳ್ಳುವುದು. ಪ್ರೇಮವ್ಯವಹಾರಗಳಿಗೆ ಬಾಗಿಲು ತೆಗೆಯುವ ಅವಕಾಶ ಮೈನಿಂಗ್ ವ್ಯವಹಾರಗಳು ಕುದುರುತ್ತದೆ.

### ಮಿಥುನ

ಪ್ರಯಾಣಗಳು ಲಾಭದಾಯಕವಾಗಿರುತ್ತವೆ. ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಲು ಸಹಾ ನಿಮಗೆ ಅವಕಾಶ ದೊರಕುತ್ತದೆ. ಗೃಹ ನಿರ್ಮಾಣಗಳು ಕಲಿತು ಬರುತ್ತದೆ. ಸುಂದರವಾದ, ಆಹ್ಲಾದಕರವಾದ ನೂತನ ಮನೆಯಲ್ಲಿ ವಾಸಿಸುವ ಯೋಗ ಒದಗಿ ಬರುತ್ತದೆ.

### ಕರ್ಕಾಟಕ

ನಿಮಗೆ ನವೀನ ವಸ್ತು, ವಸ್ತ್ರಾಭರಣಗಳ ಸೌಖ್ಯ ಒದಗಿ ಬರಲಿದೆ. ಸಂಗೀತದ ಹಾದಿಯಲ್ಲಿ ನಿಮ್ಮ ಯಾಗ ಬೆಳೆಯುತ್ತದೆ. ನೀವು ಕುಟುಂಬ ದೊಂದಿಗೆ ವಿನೋದ ಅವಕಾಶಗಳು , ದ್ರವ್ಯ ಲಾಭಗಳು ಮತ್ತು ಪ್ರಭುತ್ವದಿಂದ ಆದಾಯ ಪಡೆಯುವಿರಿ. ನವರತ್ನಗಳು, ಆಭರಣಗಳನ್ನು ಕೊಳ್ಳುವ ಅವಕಾಶವಿದೆ.

### ಸಿಂಹ

ಸಂಗೀತದೆಡೆಗೆ ಆಕರ್ಷಿತರಾಗುವಿರಿ. ನಿಮ್ಮ ಕುಟುಂಬದೊಡನೆ ವಿನೋದಗಳಲ್ಲಿ ಪಾಲ್ಗೊಳ್ಳುವಿರಿ. ನಾಯಕತ್ವದಿಂದ ಲಾಭಗಳಿಸುವಿರಿ. ಸ್ನೇಹಿತರುಗಳಿಂದ ಲಾಭಗಳು ವ್ಯಾಪಾರವೃದ್ಧಿ, ಶತ್ರುವರ್ಗಗಳಿಂದ ಜಯ ಸಾಧಿಸುವಿರಿ. ಧೈರ್ಯ ವೃದ್ಧಿಯಾಗುವುದು ಮತ್ತು ಅದೃಷ್ಟ ಕಲಿತು ಬರುತ್ತದೆ.

### ಕನ್ಯ

ಮಾತಿನ ವರಸೆ, ದೂರ ಪ್ರಯಾಣ, ಜೀವನ ಸಂಗಾತಿ ಇಲ್ಲವೇ ಸಹೋದ್ಯೋಗಿಗಳೊಡನೆ ಸಂಬಂಧಿಸಿದ ವಿಷಯಗಳಲ್ಲಿ ಜಾಗ್ರತೆ ಅವಶ್ಯಕ. ಜನ್ಮ ರಾಶಿಯಲ್ಲಿನ ಶುಕ್ರ ಸಂಚಾರದಿಂದ ಸಂಪದವೃದ್ಧಿ, ಆನಂದ, ವಿದ್ಯೆಗಳಲ್ಲಿ ವಿಜಯ ವಿವಾಹ ಅವಕಾಶಗಳು ವಿನೋದ ಮತ್ತು ವ್ಯಾಪಾರಗಳಲ್ಲಿ ವೃದ್ಧಿಯಾಗಲಿದೆ.

### ತುಲಾ

ನಿಮ್ಮ ಆದಾಯ ವೃದ್ಧಿಯಾಗಲಿದೆ ನಿಮ್ಮ ಸಹೋದ್ಯೋಗಿಗಳು ಹಾಗೂ ಸ್ನೇಹಿತರಿಂದ ಬಹಳ ಪ್ರಶಂಸೆಗಳನ್ನು ಹೊಂದುವಿರಿ. ದೀರ್ಘಕಾಲದ ಪ್ರಯತ್ನದ ಗುರಿಗಳು ನೆರವೇರುತ್ತವೆ. ನೀವು ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಳ್ಳುವಿರಿ. ನೀವು ಸ್ಫೂರ್ತಿದಾಯಕವಾದ ವ್ಯಕ್ತಿಗಳ ಸಂಗ ದಲ್ಲಿರುವಿರಿ.

### ವೃಶ್ಚಿಕ

ನಿದ್ರಾಹೀನತೆಯಿಂದ ಶರೀರದಲ್ಲಿ ನೋವುಗಳು, ಪಾದ, ಕಣ್ಣು ಹಾಗೂ ಉದರ ಸಂಬಂಧಿ ಅನಾರೋಗ್ಯಗಳು. ಈ ಕಾಲದಲ್ಲಿ ವ್ಯಾಪಾರಕ್ಕಾಗಿ ವಿದೇಶಕ್ಕೆ ಹೋಗುವ ಅವಕಾಶಗಳು ಸಹಾ ಒದಗಿ ಬರುತ್ತವೆ. ಮುಂಬರುವ ವ್ಯವಹಾರ ಪ್ರತಿಬಂಧಕಗಳು, ಕೋರ್ಟುಗಳಲ್ಲಿ ವ್ಯಾಜ್ಯಗಳನ್ನು ನಿರ್ವಹಿಸಲು ಪ್ರಯತ್ನ ಪಡಬೇಕಾಗಿ ಬರುತ್ತದೆ. ಶ್ರಮಿಸಿ ಕಾರ್ಯವನ್ನು ಪೂರ್ಣಗೊಳಿಸುವಿರಿ ಸೃಜನಾತ್ಮಕವಾಗಿ ಪ್ರತಿಭಾ ಕಲಾಪಗಳನ್ನು ನಿಭಾಯಿಸುವಿರಿ.

### ಧನಸ್ಸು

ಸಂಸ್ಥೆಗಳಲ್ಲಿ ನಾಯಕತ್ವ ವಹಿಸಿ ಲಾಭದಿಂದ ಮುನ್ನಡೆಸುವಿರಿ. ಈ ವೇಳೆಯಲ್ಲಿ ನೀವು ಎಲ್ಲಾ ವರ್ಗಗಳಿಂದ ಗೌರವವನ್ನು ಹೊಂದುವಿರಿ. ಹಣ ಹೊಡಿಕೆ, ವ್ಯಾಪಾರಗಳು ಸಹಾ ಲಾಭದಾಯಕವಾಗಿರುತ್ತವೆ. ಆರೋಗ್ಯ ವಿಷಯಕ್ಕೂ ಸಹಾ ಇದು ಸಕಾಲ. ಹೊಸ ವ್ಯವಹಾರಗಳು ಒದಗಿ ಬರುವ ಕಾಲ. ಪ್ರತಿನಿತ್ಯ ಕೃಷಿ ಮಾಡಿ ಪ್ರಗತಿ ಸಾಧಿಸುವಿರಿ. ನೂತನ ನಿರ್ಮಾಣ ಗಳು ಮಾಡಲು ಅವಕಾಶವಿದೆ.

### ಮಕರ

ಅಧಿಕಾರ ವೃದ್ಧಿಯಾಗುತ್ತದೆ. ವೃತ್ತಿ ಉದ್ಯೋಗಗಳು ಚಲಾವಣೆ ಯಾಗುತ್ತದೆ. ಕಳೆದ ತಿಂಗಳಿಗಿಂತಲೂ ಆರೋಗ್ಯ ಸಮಸ್ಯೆಗಳಿಗೆ ಒಳ್ಳೆಯ ಉಪಶಮನ ದೊರೆಯಲಿದೆ.ದೈವಿಕ ಕಾರ್ಯಕ್ರಮ ಗಳಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.ವ್ಯಾಪಾರಗಳಲ್ಲಿ ಲಾಭ ಹೊಂದುವಿರಿ. ಸಾಮಾಜಿಕವಾಗಿ ಗುರುತಿಸಲ್ಪಡುವಿರಿ.ಮಿತ್ರರನ್ನು ಒಗ್ಗೂಡಿಸಿ ಅವರ ಮೂಲಕ ರಾಜ ಕೀಯ ರಂಗ ಪ್ರವೇಶ ಮಾಡುವಿರಿ. ಫಲಿತಗಳು ಒದಗಿ ಬರ ಲಿದೆ.

### ಕುಂಭ

ಗ್ರಹ ಸ್ಥಿತಿ ಮಿಶ್ರವಾಗಿದೆ. ಅಷ್ಟಮ ರವಿ, ಕುಜ, ಸಂಚಾರದಿಂದ ಆವೇಶಗಳುಂಟಾಗಬಹುದು.ಶೃಂಗಾರವಿಷಯಗಳಲ್ಲಿ ಕಲಾ ಪೋಷಣೆಗೆ ಅವಕಾಶ ಕೊಟ್ಟು ಧನ ಖರ್ಚು ಮಾಡಿ ಕೊಳ್ಳುವಿರಿ. ಈ ಸಮಯದಲ್ಲಿ ವ್ಯಾಪಾರ - ವ್ಯವಹಾರಗಳಲ್ಲಿ ಹೂಡಿಕೆ ಗಳು ನೂತನ ವ್ಯಾಪಾರಕ್ಕಾಗಿ ಹೊಡಿಕೆ ಮಾಡುವುದು ತರವಲ್ಲ. ಹನುಮಾನ ಚಾಲೀಸ್ ಪಠನದಿಂದ ಕಾರ್ಯ ಸಿದ್ಧಿಯುಂಟಾಗುವುದು.

### ಮೀನ

ಜನ್ಮರಾಶಿಯಲ್ಲಿನ ಸಂಚಾರ ವ್ಯವಹಾರ ಪ್ರತಿಬಂಧಕಗಳನ್ನು ಸೃಷ್ಟಿಸಬಹುದು. ಮಾನಸಿಕ ಸ್ಥಿತಿಯಲ್ಲಿ ಏರಿಳಿತಗಳು, ಚರ್ಮ ಸಂಬಂಧಿ ವ್ಯಾಧಿಗಳು ಆಸ್ತಮಾ ಸಂಬಂಧಿಸಿದ ಅನಾರೋಗ್ಯಗಳು ಬರುವ ಸಾಧ್ಯತೆ ಗಳಿಲ್ಲದಿಲ್ಲ. ಆದರೆ ಆರ್ಥಿಕ ವಿಷಯಗಳಲ್ಲಿ ಹಿಂದಿಗಿಂತಲೂ ಉತ್ತಮವಾಗಿ ರುತ್ತವೆ. ಸಂತಾನವು ವಿಜಯ ಸಾಧಿಸುತ್ತಾರೆ. ಅವರಿಗೆ ಗೌರವವುಂಟಾಗಲಿದೆ. ಪುಣ್ಯ ಕ್ಷೇತ್ರಗಳಿಗೆ ಭೇಟಿ ಕೊಡುವ ಸಾಧ್ಯತೆಯಿದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1.ತುಳಸಿ ಹಬ್ಬವನ್ನು ಉತ್ಥಾನ ದ್ವಾದಶಿ ಎಂದು ಕರೆಯಲು ಕಾರಣವೇನು?**

**ಉತ್ತರ :** ಭಗವಂತ ಮಲಗುವುದು ಹಾಗೂ ಏಳುವುದು ಅಂದರೆ ಅರ್ಥವಿಲ್ಲದಂತಾಗುತ್ತದೆ. ಸದಾ ಎಚ್ಚರಾವಸ್ಥೆಯಲ್ಲಿರುವ ಭಗವಂತನು ಮಲಗುವುದಾದರು ಹೇಗೆ. ಎಂದರೆ, ಹಿಂದೆ ಯೋಗನಿದ್ರಾದೇವಿಯು ಭಗವಂತನನ್ನು ತಪಸ್ಸಿನಿಂದ ಸಂತೋಷ ಪಡಿಸಿದಳು. ಸ್ವಾಮಿ ನನ್ನನ್ನು ನಿನ್ನ ಅಂಗದಲ್ಲಿ ಸೇರಿಸಿಕೋ ಎಂದು ವರ ಬೇಡಿದಳು. ಆಗಲೀ ಎಂದು ಭಗವಂತ ತನ್ನ ದಿವ್ಯ ಮಂಗಳ ವಿಗ್ರಹವನ್ನು ಗಮನಿಸಿದ ಅಲ್ಲಿ ವಕ್ಷಸ್ಥಳವನ್ನು ಶ್ರೀ ಲಕ್ಷ್ಮೀಯು ಆಶ್ರಹಿಸಿ ಬಿಟ್ಟಿದಳು. ಅಲ್ಲಿ ಸ್ಥಳವಿಲ್ಲ ತೋಳುಗಳನ್ನು ಶಂಖ ಚಕ್ರಾಧಿಗಳು ಅಲಂಕರಿಸಿವೆ. ಅಲ್ಲಿಯೂ ಜಾಗ ಇಲ್ಲ. ನಾಭಿನಿಂದ ಕೆಳಗಿನ ಜಾಗ ಗರುಡದೇವರ ಅಧೀನದಲ್ಲಿದೆ. ತಲೆಯನ್ನು ಕಿರೀಟವು ಅಲಂಕರಿಸಿದೆ. ಕಿವಿಗಳು ಕುಂಡಲಗಳು ಕಣ್ಣುಗಳ ಜಾಗ ಮಾತ್ರ ಖಾಲಿಯಿತ್ತು. ಇಲ್ಲಿ ಬಾ ನೀನು ನಾಲ್ಕು ತಿಂಗಳ ಕಾಲ ಸಂತೋಷವಾಗಿ ಇಲ್ಲಿ ವಾಸಮಾಡಿಕೊಂಡಿರು ಎಂದು ಯೋಗನಿದ್ರಾ ದೇವಿಗೆ ತನ್ನ ನೇತ್ರ ಕಮಲದಲ್ಲಿ ಜಾಗವನ್ನು ಅನುಗ್ರಹಿಸಿದ. ಆಕೆಯು ಬಹಳ ಸಂತೋಷದಿಂದ ಒಪ್ಪಿಕೊಂಡಳು. ಭಗವಂತನು ಹೀಗೆ ವರ್ಷಕಾಲದ 4 ತಿಂಗಳ ಕಾಲ ಯೋಗ ನಿದ್ರಾದೇವಿಯು ಅನುಗ್ರಹವನ್ನು ನೀಡಿ ಉತ್ಥಾನ ದ್ವಾದಶಿಯ ದಿನ ಜಾಗ್ರದವಸ್ಥಾದೇವಿ ಅನುಗ್ರಹವನ್ನು ದಯಪಾಲಿಸುತ್ತಾನೆ. ಭಕ್ತರಿಗೆ ಸುಪ್ರಭಾತ ಸೇವೆಯನ್ನು ಕರುಣಿಸುತ್ತಾನೆ. ಆಗಾಗಿ ಉತ್ಥಾನ ದ್ವಾದಶಿ ಎಂದು ಕರೆಯಲಾಗುತ್ತದೆ.

**2.ತುಳಸೀ ಹಬ್ಬದಂದು ತುಳಸೀ ಗಿಡದ ಜೊತೆಗೆ ನೆಲ್ಲಿಯ ಗಿಡವನ್ನು ನೆಡಲು ಕಾರಣವೇನು?**

**ಉತ್ತರ:** ತುಳಸೀ ಗಿಡವು ಲಕ್ಷ್ಮೀ ಸ್ವರೂಪ. ನೆಲ್ಲಿ ಗಿಡವು ನಾರಾಯಣನ ಸ್ವರೂಪ ಉತ್ಥಾನ ದ್ವಾದಶಿಯಂದು ತುಳಸೀ ಗಿಡದ ಜೊತೆ ನೆಲ್ಲಿಯ ಗಿಡವನ್ನು ಇಟ್ಟು ಪೂಜಿಸುವುದು ತುಳಸೀ ವಿವಾಹದ ಸಂಕೇತ ಅಷ್ಟೆ ಅಲ್ಲದೆ ಇವೆರಡು ಗಿಡಗಳಲ್ಲಿ ಹೇರಳವಾದ ಔಷಧೀಯ ಗುಣಗಳು ಇರುವುದರಿಂದ ಅಂದು ನೆಲ್ಲಿ ಸೇವನೆ ಸುಖಪ್ರದವಾದದ್ದು.

**3.ನರಕಚತುರ್ದಶಿಯಂದು ಅಭ್ಯಂಗಸ್ನಾನ ಮಾಡುವುದರ ಉದ್ದೇಶವೇನು?**

**ಉತ್ತರ:** ನರಕಾಸುರನನ್ನು ಶ್ರೀ ಕೃಷ್ಣನನು ಕೊಂದ ದಿನವೇ ನರಕಚತುರ್ದಶಿ ಅಂದು ಎಲ್ಲರೂ ಅಭ್ಯಂಗಸ್ನಾನವನ್ನು ಮಾಡಬೇಕು.ನರಕ ಚತುರ್ದಶಿಯಂದು ಬ್ರಾಹ್ಮಿ ಮುಹೂರ್ತದಲ್ಲಿ ಅಭ್ಯಂಗ ಸ್ನಾನ ಮಾಡಿದರೆ ಗಂಗಾಸ್ನಾನದ ಫಲವನ್ನು ಕೊಡುತ್ತದೆ. ಕೃಷ್ಣ ಪಕ್ಷದ ಎಲ್ಲ ಚತುರ್ದಶಿ ತಿಥಿಗಳಲ್ಲೂ ಶಿವ ಶಕ್ತಿ ಯೋಗಕ್ಕೆ ಪೋಷಕವಾದ ಪ್ರಕೃತಿ ಧರ್ಮ ಇರುತ್ತದೆ. ನರಕಚತುರ್ದಶಿ ಎಂಬ ಪರ್ವ ಕಾಲದ ಕೃಷ್ಣ ಚತುರ್ದಶಿಯೆಂದು ವಿಶೇಷ ವಾಗಿರುತ್ತದೆ. ಅದರ ಪರಿಣಾಮವಾಗಿ ಅಂದು ನೀರು, ಅಭ್ಯಂಗದ ಎಣ್ಣೆ, ಎಲ್ಲದರಲ್ಲೂ ವಿಶೇಷವಾದ ಶಕ್ತಿ ಉಂಟಾಗುತ್ತದೆ. ಪಾಪ ಪರಿಹಾರಕ ಪ್ರಭಾವ ತುಂಬುತ್ತದೆ. ಶ್ರೀಕೃಷ್ಣನು ನರಕಾಸುರನನ್ನು ಸಂಹಾರ ಮಾಡಿದ ಕಥೆಯ ತತ್ವವನ್ನು ಅನುಸಂಧಾನ ಮಾಡಿ ಇದು ನರಕ ವಿಜಯದ ಆನಂದೋತ್ಸವ ಎಂಬ ಭಾವನೆಯಿಂದ ಅಂದು ಆಗ ಅಭ್ಯಂಗಸ್ನಾನ ಮಾಡಿದರೆ ಅದು ಜ್ಞಾನಗಂಗಾ ಸ್ನಾನದ ಫಲವನ್ನು ಕೊಡುತ್ತದೆ. ಅಂದು ಪ್ರಾತಃ ಕಾಲದಲ್ಲಿ ತೈಲದಲ್ಲಿ ಲಕ್ಷ್ಮಿಯೂ ಮತ್ತು ಜಲದಲ್ಲಿ ಗಂಗೆಯೂ ನೆಲೆಸಿರುವುದರಿಂದ ಅವುಗಳನ್ನು ಬಳಸಿ ಆ ಸ್ನಾನ ಮಾಡುವವನು ಯಮಲೋಕದಿಂದ ಪಾರಾಗುತ್ತಾನೆ. ಅಲಕ್ಷ್ಮಿಯು ಪರಿಹಾರವಾಗುತ್ತದೆ.

**4.ದೀಪಾವಳಿಯಂದು ಗೋಪೂಜೆ ಮಾಡುವುದೇಕೆ?**

**ಉತ್ತರ:** ನರಕಾಸುರನನ್ನು ವಧಿಸಿದ ಶ್ರೀಕೃಷ್ಣನಿಗೆ ಪ್ರಿಯವಾದದ್ದು ದೈವೀ ಗುಣಗಳ ಗಣಿಯಾದ ಕಾಮಧೇನುವೆಸಿಕೊಂಡ ಗೋವು. ಆದ್ದರಿಂದ ಆ ಗೋವನ್ನು ಪೂಜಿಸಿ ತನ್ಮೂಲಕ ದೈವೀಗುಣಗಳ ಗಣಿ ಆಗುವ ದೀಕ್ಷೆ ತೊಟ್ಟರೆ ಆ ಗೋವಿಂದನು ಸುಪ್ರೀತನಾಗುವನೆಂದೇ ದೀಪಾವಳಿಯಂದು ಗೋವುಗಳಿಗೆ ಮೇವು ಕೊಟ್ಟು ಅರಿಶಿನ ಕುಂಕುಮ ಹಚ್ಚಿ ಪೂಜಿಸುವುದು.

**5. ದೀಪಾವಳಿಯಂದು ಧನಲಕ್ಷ್ಮೀ ಪೂಜೆ ಮಾಡುವುದರ ವೈಶಿಷ್ಟ್ಯವೇನು?**

**ಉತ್ತರ:** ಹಣ ಕರುಣಿಸುವವಳು ಲಕ್ಷ್ಮೀ. ತ್ಯಾಗ ಸೇವೆಗಳಿಂದಲೇ ಬಾಳಿನಲ್ಲಿ ಬೆಳಕು ಬರುವುದರಿಂದ ತ್ಯಾಗ ಸೇವೆಗಳಿಗೆ ಹಣಬೇಕೇ ಬೇಕಾಗುವುದರಿಂದ ಹೆಚ್ಚೆಚ್ಚು ತ್ಯಾಗಸೇವೆಗಳಿಗಾಗಿ ಹೆಚ್ಚೆಚ್ಚು ಹಣ ಕರುಣಿಸುವ ಔದಾರ್ಯ ತೋರೆಂಬ ಮೊರೆಯೊಂದಿಗೆ ಹಣವಿರುವಲ್ಲೆ ಆ ಲಕ್ಷ್ಮಿಯ ವಾಸ ಎಂದು ತಿಳಿದು ಹಣದ ಪೆಟ್ಟಿಗೆಯನ್ನೂ ಒಡವೆಗಳನ್ನೂ ಇರಿಸಿ ಪೂಜಿಸಿ ಧನಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ.

# ಮಹಾಭಾರತದಿಂದ ಕಲಿಯಬೇಕಾದ ಪ್ರಮುಖ ಜೀವನ ಪಾಠಗಳು

- ಪ್ರಣವ



ಮಹಾಭಾರತದ ಪ್ರತಿಯೊಂದು ಘಟನೆಯಲ್ಲಿಯೂ ನಮಗೆಲ್ಲರಿಗೂ ಒಂದು ಜೀವನ ಪಾಠ ಅಡಗಿರುತ್ತದೆ. ನಮ್ಮ ಜೀವನ ಎಷ್ಟೇ ಆಧುನಿಕರಣಗೊಂಡಿದ್ದರೂ ಕೂಡ. ಎಷ್ಟೇ ಇಂಟರ್ನೆಟ್‌ನಲ್ಲಿ ಗೂಗಲ್ ಮಾಡಿ ತಿಳಿದುಕೊಂಡರೂ ಕೂಡ. ಎಷ್ಟೇ ಪುಸ್ತಕ ಭಂಡಾರಗಳನ್ನು ಓದಿ, ಎಷ್ಟೇ ಡಿಗ್ರಿಗಳನ್ನು ಪಡೆದುಕೊಂಡರೂ ಕೂಡ ರಾಮಾಯಣ ಹಾಗೂ ಮಹಾಭಾರತ ಪುಣ್ಯ ಕಾವ್ಯಗಳು ನಮಗೆ ನೀಡುವಂತಹ ಜೀವನ ಪಾಠವನ್ನು ಎಲ್ಲಿಯೂ ಪಡೆದುಕೊಳ್ಳಲು ಸಾಧ್ಯವಿಲ್ಲ.

**ಯೋಜನೆ :** ಪ್ರತಿಯೊಂದು ಕೆಲಸಕ್ಕೂ ಯೋಜನೆ ಮುಖ್ಯವಾಗುತ್ತದೆ. ಎಲ್ಲದಕ್ಕೂ ಬಲ ಮುಖ್ಯವಲ್ಲ ಎಂಬುದಕ್ಕೆ ಸ್ಪಷ್ಟ ಉದಾಹರಣೆಯೇ ಮಹಾಭಾರತ.

ಅಂದು ಕೌರವರಿಗೆ ಮತ್ತು ಪಾಂಡವರಿಗೆ ಶ್ರೀಕೃಷ್ಣನು ನಾನು ಒಬ್ಬರ ಪರವಾಗಿ ಯುದ್ಧದಲ್ಲಿ ಪಾಲ್ಗೊಳ್ಳುತ್ತೇನೆ. ಉಳಿದಂತೆ ಯಾದವ ಸೈನ್ಯ ಮತ್ತೊಬ್ಬರ ಪರವಾಗಿ ಯುದ್ಧದಲ್ಲಿ ಪಾಲ್ಗೊಳ್ಳುತ್ತದೆ. ನಾನು ಯುದ್ಧದಲ್ಲಿ ಶಸ್ತ್ರಾಸ್ತ್ರಗಳನ್ನು ಬಳಸುವುದಿಲ್ಲ. ಆಯ್ಕೆ ನಿಮಗೆ ಬಿಟ್ಟದ್ದು ಎಂದಾಗ ಕೌರವರು ಯಾದವ ಸೈನ್ಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅರ್ಜುನನು ಶ್ರೀಕೃಷ್ಣನು ಶಸ್ತ್ರಾಸ್ತ್ರ ಬಳಸುವುದಿಲ್ಲ ಎಂದರೂ ಕೂಡ ಸಂತೋಷದಿಂದ ತನ್ನ ಪರವಾಗಿ ಬರುವಂತೆ ಸ್ವಾಗತಿಸುತ್ತಾನೆ. ಇನ್ನು ಯುದ್ಧದಲ್ಲಿ ಶ್ರೀಕೃಷ್ಣನ ತಂತ್ರ/ಯೋಜನೆ/ಜಾಣ್ಮೆ ಇಲ್ಲದಿದ್ದರೇ ಖಂಡಿತಾ ಪಾಂಡವರು ಯುದ್ಧವನ್ನು ಗೆಲ್ಲಲು ಸಾಧ್ಯವೇ ಇರಲಿಲ್ಲ.

ಜೀವನದ ಯಾವುದೇ ಕ್ಷೇತ್ರದಲ್ಲಿ ಉತ್ತಮ ತಂತ್ರವು ನಿಮ್ಮ ಜೀವನವನ್ನು ಯಶಸ್ವಿಗೊಳಿಸಬಹುದು ಮತ್ತು ಯಾವುದೇ ಯೋಜನೆ ಅಥವಾ ಕಾರ್ಯತಂತ್ರವಿಲ್ಲದಿದ್ದರೆ, ಯಶಸ್ಸಿನ ಖಾತರಿಯಿಲ್ಲದೆ ಅಸ್ತವ್ಯಸ್ತವಾಗಿರುವ ಭವಿಷ್ಯದಲ್ಲಿ ಜೀವನವು ಮುಂದುವರಿಯುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

**ತಾಳ್ಮೆ, ಸಂಯಮ ಹಾಗೂ ಮಾತಿನ ಮೇಲೆ ಹಿಡಿತ :**

ತಾಳ್ಮೆ, ಸಂಯಮ, ಶಾಂತಿಯಿಂದ ವರ್ತಿಸಿ ನಾವು ನಮ್ಮ ಜೀವನದಲ್ಲಿ ಮಾತಿನ ಮೇಲೆ ಹಿಡಿತ ಸಾಧಿಸುವುದು ಬಹಳ ಮುಖ್ಯವೆನಿಸಿದೆ.

ಮಹಾಭಾರತದ ಕಾಲದಿಂದಲೂ ಎಲ್ಲ ವ್ಯಾಜ್ಯಗಳೂ ಕೇವಲ ಮಾತುಗಳಿಂದ ಆರಂಭವಾಗಿದೆ. ಒಂದು ವೇಳೆ ದ್ರೌಪದಿಯು ದುರ್ಯೋಧನನನ್ನು ಕುರುಡನ ಮಗನು ಕೂಡ ಅಂಧನೇ ಎನ್ನದೆ ಇದ್ದರೇ ಮಹಾಭಾರತ ಪ್ರಕರಣ ಸಂಭವಿಸುವ ಸಾಧ್ಯತೆಗಳು ತೀರಾ ಕಡಿಮೆ. ಇನ್ನು ಶಿಶುಪಾಲ ಮತ್ತು ಶಕುನಿಯು ಕೇವಲ ತಮ್ಮ ಕುಟುಕುವ ಮಾತುಗಳಿಂದಲೇ ಎಲ್ಲಾ ವಿಷಯಗಳನ್ನು ತಿಳಿಸುತ್ತಿದ್ದ ಕಾರಣ ಅವರಿಗೆ ಮಹಾಭಾರತದ ಯುದ್ಧದ ಸಂಧರ್ಭದಲ್ಲಿ ಏನಾಯಿತು ಎಂಬುದು ನಿಮಗೆಲ್ಲರಿಗೂ ತಿಳಿದೇ ಇದೆ. ಆದ ಕಾರಣ ನಮ್ಮಲ್ಲಿ ತಾಳ್ಮೆ ಮತ್ತು ಸಂಯಮದೊಂದಿಗೆ ಮಾತಿನ ಮೇಲೆ ಹಿಡಿತ ಸಾಧಿಸಿದರೇ ಖಂಡಿತ ನಮಗೆ ಯಾವುದೇ ಸಮಸ್ಯೆಗಳು ಎದುರಾಗುವುದಿಲ್ಲ.

**ಅತಿಯಾದ ಆಸೆ ತಪ್ಪಿಸಿ :**

ಅತಿಯಾದ ಆಸೆಯನ್ನು ತಪ್ಪಿಸುವುದರಿಂದ ನಾವು ನಮ್ಮ ಜೀವನದಲ್ಲಿ ಶಾಂತಿ ಪಡೆಯಬಹುದು ಎಂಬುದನ್ನು ಮಹಾಭಾರತ ಹೇಳುತ್ತದೆ.


ನೀವು ಇಲ್ಲಿ ಕೇವಲ ಬದುಕಲು ಮಾತ್ರ ನಿಮಗೆ ಆಸ್ತಿ - ಪಾಸ್ತಿ ಆಸೆ ಎಲ್ಲವೂ ಮುಖ್ಯ. ನೀವು ಇಲ್ಲಿಂದ ಹೊರಡುವಾಗ ಏನನ್ನೂ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಇದು ಮಹಾಭಾರತದಲ್ಲಿ ಕೌರವರಿಗೆ ಈ ವಿಷಯ ತಿಳಿದಿದ್ದರೂ ಕೂಡ ಪಾಂಡವರ ರಾಜ್ಯ, ಆಸ್ತಿ ಎಲ್ಲವೂ ತಮಗೆ ಬೇಕು ಎಂಬ ದುರಾಸೆ ಅವರದಾಗಿತ್ತು ಹಾಗೂ ದುರಾಸೆ ಪಟ್ಟಿದ್ದಕ್ಕಾಗಿಯೇ ಮುಂದೆ ಅವರು ತಮ್ಮದೆಲ್ಲವನ್ನೂ ಕಳೆದುಕೊಂಡು ಜೀವನವನ್ನು ಅಂತ್ಯಗೊಳಿಸಿಕೊಂಡರು.






# ಬಾಲವಿನೋಧಿನಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....




ಈ ಗೊಂಬೆಯನ್ನು ನೋಡಿ






ಬಣ್ಣವನ್ನು ತುಂಬಿರಿ.






ಇದರಲ್ಲಿರುವ ಚಿತ್ರವನ್ನು ನೋಡಿ ಪದಗಳನ್ನು ಜೊತೆ ಮಾಡಿ ಮಕ್ಕಳೇ ನೋಡೋಣ

- ಗಜವಾಹನ
- ಹಂಸವಾಹನ
- ಮುತ್ತಿನಚಪ್ಪರ ವಾಹನ
- ಸಿಂಹವಾಹನ
- ರಥೋತ್ಸವ
- ಶೇಷವಾಹನ
- ಅಶ್ವವಾಹನ





ಇದರಲ್ಲಿರುವ ಯಾವ ದೇವರಿಗೆ ಯಾವ ಹೂ ಶ್ರೇಷ್ಠವೆಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ




ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಕಾ ಕ್ಕೆ ಣಿ ಕಿ ಹಾ ಗೆ

ಏ ಹಾ ದ ಆ ಶ

## ದಾರಿ ತೋರಿಸಿ



| | | | | | | |
|---|---|---|---|---|---|---|
| | | 1 | 2 | 3 | 4 | 6 |
| | | ↑ | 0 | 4 | 2 | 8 |
| 4 | 2 | 0 | 6 | 5 | 6 | 9 |
| 3 | 4 | 5 | 8 | 4 | 7 | 8 |
| 8 | 2 | 9 | 7 | 3 | 12 | 9 |
| 7 | 1 | 5 | 13 | 12 | 11 | 10 |
| 11 | 8 | 12 | 14 | 17 | 12 | 14 |
| 18 | 16 | 17 | 15 | 16 | | |
| 19 | 10 | 18 | 16 | → | | |




ತಿರುಮಲೆಯಿಂದ ಅಮ್ಮನವರಿಗೆ ತರುತ್ತಿರುವ ಬಾಗಿನವನ್ನು ಯಾವ ದಾರಿಯಲ್ಲಿ ತಂದರೆ ಅದು ಅಮ್ಮನವರಿಗೆ ಸೇರುತ್ತದೆಂದು ದಾರಿ ತೋರಿಸಿ ಮಕ್ಕಳೇ.




ಇಲ್ಲಿರುವ ಸ್ಥಳಗಳು ಯಾವ ರಾಜ್ಯದಲ್ಲಿ ಇದೆಯೆಂದು ಮಕ್ಕಳೇ ಹೇಳಿ ನೋಡೋಣ

# ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01. ದೀಪಾವಳಿಯಂದು ಯಾವ ಪೂಜೆ ಮಾಡುತ್ತಾರೆ? ............. ..........................................

02. ಕಾರ್ತಿಕ ಮಾಸದಲ್ಲಿ ಯಾವ ವ್ರತ ಶ್ರೇಷ್ಠವಾದುದು? ........................ ..........................................

03.ನವರಾತ್ರಿದೇವಿಯ ಪೂಜೆಯ ಇನ್ನೊಂದು ವಿಶೇಷತೆಯೇನು? ..................... ..........................................

04.ಕನಕದಾಸರು ಯಾವ ಅಂಕಿತವನ್ನು ಪಡೆದರು? ..........................................

05. ತೀರ್ಥ ಎಂದರೇನು? ..........................................

06. ವರದರಾಜ ಸ್ವಾಮಿಯವರ ಎತ್ತರ ಎಷ್ಟು? ........................... ..........................................

07.ಬೇಟೆಗೆ ಹೋಗಿ ತ್ರಿಲೋಕ ಸುಂದರಿಯನ್ನು ನೋಡಿದವರು ಯಾರು? .......................... ..........................................

08. ಸ್ವಾಮಿಯವರ ದರ್ಶನಕ್ಕೆ ಮೊದಲು ಯಾರ ದರ್ಶನವನ್ನು ಮಾಡಬೇಕು?..........................................

09. ಹರಿದಾಸರು ಯಾವ ಭಕ್ತಿ ಮಾರ್ಗದ ಮೂಲಕ ಭಕ್ತಿಯನ್ನು ಅಭಿವ್ಯಕ್ತಿಸಿದ್ದಾರೆ? ..........................................

10. ಯಾವುದರ ಮೇಲೆ ನೀರಿನ ಹನಿಗಳು ನಿಲ್ಲುವುದಿಲ್ಲ? ........................................... ..........................................

11. ವಿಜಯನಗರದವರು ಯಾವುದನ್ನು ರಕ್ಷಿಸುವಲ್ಲಿ ಸಮರ್ಥರು? ...................... ..........................................

12.ಪುಷ್ಪಕ ವಿಮಾನದಲ್ಲಿ ಹೋಗುವಾಗ ಯಾರನ್ನು ನೋಡಿದನು? ......... ..........................................

13.ಕಮಲಗಳನ್ನು ಸಜ್ಜುಗೊಳಿಸಲು ಯಾರಿಗೆ ವಹಿಸಿದರು? ..........................................

14. ಜೀವನದಲ್ಲಿ ಯಾವುದರ ಮೇಲೆ ಹಿಡಿತವಿರಬೇಕು?..........................................

15. ಪಾಂಡವರನ್ನು ತಡೆದವರು ಯಾರು?........... ..........................................

## ಸೂಚನೆಗಳು




1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.11.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

**ಹೆಸರು** :
**ಚಂದಾ ಸಂಖ್ಯೆ** :
**ತಂದೆಯ ಹೆಸರು** :
**ತಾಯಿಯ ಹೆಸರು:**

**ವಿಳಾಸ :**

**ದೂರವಾಣಿ ಸಂಖ್ಯೆ :**

## ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



..............................



..............................



..............................



..............................

ಲಕ್ಷ್ಮೀದೇವಿ ,ಸುಬ್ರಮಣ್ಯಸ್ವಾಮಿ, ಅಷ್ಟಲಕ್ಷ್ಮೀಗಳು, ಕಾರ್ತೀಕಮಾಸ ಸಂಬಂಧಿಸಿದ ವಸ್ತುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.


ಸೀಬೆಹಣ್ಣು , ಬಾಳೆಹಣ್ಣು, ರಂಗೋಲಿ,ದೀಪದಲ್ಲಿ ಸುತ್ತಿರುವ ಹೂ, ಬಾಡರ್ ರಂಗೋಲಿ, ಬಾಳೆಕಾಯಿ ಗೊಚ್ಚಲು, ಮಾವಿನ ಎಲೆ

# ಪದ್ಮವ್ಯೂಹ

ಚಿತ್ರಕಥೆ


ಕಥೆ: ತೆಲುಗು ಮೂಲ : ಶ್ರೀನಿವಾಸ ದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ. ತುಳಸೀ ಪ್ರಸಾದ್



ಪದ್ಮವ್ಯೂಹದಲ್ಲಿ ಅಭಿಮನ್ಯು ಏಕಾಂಗಿಯಾದ ಅವನು ಧೈರ್ಯದಿಂದ ಹೋರಾಡುತ್ತಿದ್ದನು. ಶತ್ರುಗಳನ್ನು ಸಂಹರಿಸುತ್ತಿದ್ದಾನೆ.
ಅಯ್ಯೋ ! ಅಭಿಮನ್ಯು .....ಅಯ್ಯೋ! ಕೊಲ್ಲುತ್ತಿದ್ದಾನೆ.
ವೀರರೆಲ್ಲರೂ ರಣರಂಗದಲ್ಲಿ ನಡುಗುತ್ತಿದ್ದಾರೆ. ಕರ್ಣನಂಥ ವೀರರು ಕೂಡ ಅಭಿಮನ್ಯುವಿನ ಹೊಡೆತಗಳನ್ನು ಸಹಿಸಲಾರದೆ ಓಡಿ ಹೋಗುತ್ತಿದ್ದಾರೆ. ಅಭಿಮನ್ಯುವಿನ ಪರಾಕ್ರಮವನ್ನು ಕಂಡಾ ದ್ರೋಣಾಚಾರ್ಯರು...
ಈ ಎರಡು ಸೈನ್ಯಗಳಲ್ಲೂ ಅಭಿಮನ್ಯುವಿಗೆ ಸರಿಸಾಟಿ ಯಾರೂ ಇಲ್ಲ
ದ್ರೋಣನ ಅಂಗೀಕಾರದೊಂದಿಗೆ ಎಲ್ಲರೂ ಅಧರ್ಮ ಯುದ್ಧವನ್ನು ಪ್ರಾರಂಭಿಸಿದರು.
ಎಲ್ಲರೂ ಸೇರಿ ಅಭಿಮನ್ಯುವನ್ನು ಕೊಲ್ಲೋಣ.
ದುರ್ಯೋಧನನಿಗೆ ತುಂಬಾ ಕೋಪ ಬಂತು. ಹಾಗೆ ಪುತ್ರ ಶೋಕವು ಉಂಟಾಯಿತು.
ಅತಿರಥ ಮಹಾರಥರು ಸಾಮೂಹಿಕವಾಗಿ ಧಾಳಿ ಮಾಡಿದರು. ಬಾಣಗಳ ಸುರಿಮಳೆ ಸುರಿಸಿದರು. ರಥವನ್ನು ಮುರಿದು ... ಸಾರಿಥಿಯನ್ನು... ಕುದುರೆಗಳನ್ನು ಕೊಲ್ಲಿರಿ.
ಮೈಯಲ್ಲಾ ಗಾಯಗಳೊಂದಿಗೆ, ಆಯುಧವಿಲ್ಲದೆ ಆಯಾಸದಿಂದ ಅಭಿಮನ್ಯು ದುಶ್ಯಾಸನನ ಮಗನೊಂದಿಗೆ ಹೋರಾಡಿ ವೀರಮರಣ ಹೊಂದಿದನು.
ಅಮಾ...ಅಮ್ಮಾ.....
ಸೂರ್ಯನು ಪಶ್ಚಿಮದಿಕ್ಕಿನಲ್ಲಿ ಅಸ್ತಮಿಸಿದನು.
ಶಾಂತಿ.... ಶಾಂತಿ.....

తిరుమలే తిరుపతి ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸು ವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ ಮಹೋತ್ಸವ

19-11-2023

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-10–2023 and Posting at Tirupati RMS.Regd. with the Registrar of Newspapers for India
underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month.

